ಪರಂಪರೆ



ವೆಂಕಟ ಸುಬ್ಬಯ್ಯ
ಸೀತಾ ರಾಮಚಂದ್ರ
ಪದ್ಮಾ ಶ್ರೀಧರ್
ಶಿಲ್ಪಾ

ಪರಂಪರೆ

(ನಾಟಕ ಸಂಕಲನ)

ಎಮ್.ವಿ. ವೆಂಕಟಸುಬ್ಬಯ್ಯ
ಸೀತಾ ರಾಮಚಂದ್ರ
ಪದ್ಮಾ ಶ್ರೀಧರ್
ಬಿ.ಎಸ್. ಶಿಲ್ಪಾ

ಕಣಿವೆ ಪ್ರಕಾಶನ
192, 12ನೇ ಮೆಯಿನ್, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತಿಪುರಂ, ಮೈಸೂರು–570009

PARAMPARE - A collection of 13 plays, by 3 generation authors of the same family, (late) Sri M.V. Vekata Subbayya, Daughters Smt Seetha Ramachandra & Padma Shreedhar, Grand daughter Kum. Shilpa B.S. ; 'CHIGURU', No. 1248, 7th B Cross, Yalahanka Upanagara, Bangalore560064,

and published by Kanive Prakashana, (Ph.0821- 2541085), 192, 12th Main, Kamakshi Hospital Road, Saraswathipuram, Mysore-570009.

Printed on Maplitho 70 GSM paper.

No.of Pages: 144, Demi 1/8.

First Edition: 2011

Price: Rs. 100/-

DTP: Smt. Latha.

Impression: Harshini Offset Printers, Bangalore.

ಶ್ರೀ

ನಾಟಕ ಸಂಕಲನ

ಪರಂಪರೆ

ಇದು ಒಂದು ಸಣ್ಣ ನಾಟಕಗಳ ಸಂಕಲನ. ಇದರಲ್ಲಿ ಒಟ್ಟು ೧೩ ಲಘು ನಾಟಕಗಳಿವೆ. ಕೆಲವು ಪೌರಾಣಿಕ ವಿಷಯಗಳನ್ನು ಕುರಿತುದುದಾದರೆ, ಕೆಲವು ಚಾರಿತ್ರಿಕ ಘಟನೆಗಳನ್ನೊಳಗಂಡು ರಚಿತಗೊಂಡಿವೆ. ಇನ್ನೊಂದೆರಡು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ನಾಟಕ.

ಈ ಗುಚ್ಛದಲ್ಲಿ, ೪ ಜನ ಲೇಖಕರು ರಚಿಸಿರುವ ನಾಟಕಗಳಿವೆ. ಮೊದಲನೆಯದಾಗಿ ಶ್ರೀವೆಂಕಟಸುಬ್ಬಯ್ಯನವರು ರೇಡಿಯೋ ಪ್ರಹಸನ ಗಳಿಗಾಗಿ ಹಾಗೂ ಮಕ್ಕಳ ರೇಡಿಯೋ ಕಾರ್ಯಕ್ರಮಗಳಿಗೆಂದು ಬರೆದದ್ದು.

ಉಳಿದ ನಾಟಕಗಳು ಅವರ ಮಕ್ಕಳಾದ ಶ್ರೀಮತಿ ಸೀತಾರಾಮಚಂದ್ರ ಹಾಗೂ ಶ್ರೀಮತಿ ಪದ್ಮಾ ಶ್ರೀಧರ್‌ರವರು ಬರೆದದ್ದು.

ಈ ಎಲ್ಲಾ ಲೇಖಕರ ಹಲವಾರು ಪುಸ್ತಕಗಳು ಈಗಾಗಲೇ ಪ್ರಕಟ ಗೊಂಡಿದ್ದು, ಓದುಗರಿಗೆ ಅವರ ಪರಿಚಯವಾಗಿದೆ. ಆದರೂ ಅವರುಗಳ ಬಗ್ಗೆ ಒಂದೆರಡು ಮಾತುಗಳನ್ನು ತಿಳಿಸಲು ಬಯಸುತ್ತೇನೆ.

ಸುಮಾರು ಅರವತ್ತು ಎಪ್ಪತ್ತರ ದಶಕದಲ್ಲಿ ಬರಹವನ್ನು ಹವ್ಯಾಸ ವನ್ನಾಗಿಟ್ಟುಕೊಂಡಿದ್ದ ವೆಂಕಟಸುಬ್ಬಯ್ಯನವರು ಕನ್ನಡ, ಹಿಂದಿ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದರು. ಸಂಸ್ಕೃತದಲ್ಲಿ ವೇದಾಧ್ಯಯನವನ್ನು ಮಾಡಿದ್ದವರು. ಹಿಂದಿ ಸಾಹಿತ್ಯದ ಪ್ರವೀಣ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದವರು. ಕನ್ನಡ ತಾಯಿ ಭಾಷೆಯಾದುದ ರಿಂದ, ಅವರು ಹಿಂದಿ ಸಾಹಿತ್ಯದ ಅನೇಕ ಲೇಖನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದರು. ಅವರು ನಾಲ್ಕಾರು ಕಾದಂಬರಿಗಳನ್ನು ರಚಿಸಿದ್ದರು.

ಶ್ರೀಮತಿ ಸೀತಾರಾಮಚಂದ್ರರವರು, ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಎಷ್ಟೋ ಜನರಿಗೆ ಚಿರಪರಿಚಿತರು. ಕರ್ನಾಟಕ ಸಂಗೀತದಲ್ಲಿ ವಿದ್ವತ್ ಪರೀಕ್ಷೆಯನ್ನು ಪಾಸು ಮಾಡಿ, ಅನೇಕ ಜನ ವಿದುಷಿಯರಿಗೆ ಮಾರ್ಗ ದರ್ಶಕರಾಗಿರುವರು. ಸಂಗೀತ ಪಾಠದ ತರಗತಿಗಳನ್ನು ನಡೆಸುವರು ಹಾಗೂ, ರೇಡಿಯೋ ಕಾರ್ಯಕ್ರಮಗಳನ್ನು ಅದರಲ್ಲೂ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು

ಪರಂಪರೆ

ನಾಟಕಸಂಕಲನ

ಶ್ರೀ

ಭೀಮಸೇನನ ಗರ್ವಭಂಗ

ಪಾತ್ರಧಾರಿಗಳು - ದ್ರೌಪದಿ, ಭೀಮಸೇನ ಹಾಗೂ ಆಂಜನೇಯ.

ಸಂದರ್ಭ- ಭೀಮಸೇನನು ದ್ರೌಪದಿಗಾಗಿ ಸೌಗಂಧಿಕ ಪುಷ್ಪವನ್ನು ಅರಸುತ್ತಾ ಹೋಗುವಾಗ ಅರಣ್ಯದಲ್ಲಿ ವಾಯುಪುತ್ರ ಹನುಮಂತನನ್ನು ಭೇಟಿಯಾಗುವ ಪ್ರಸಂಗ .

ದೃಶ್ಯ - ಅರಣ್ಯ ಪ್ರದೇಶ

ದೃಶ್ಯ - ೧

ದ್ರೌಪದಿ- "ಆರ್ಯಪುತ್ರ , ಆರ್ಯಪುತ್ರ" (ಎಂದು ಕರೆಯುತ್ತಾ ಭೀಮ ಕುಳಿತಿದ್ದ ಕಡೆಗೆ ಬರುವಳು)

ಭೀಮಸೇನ-ನಿನ್ನನ್ನೇ ಎದುರು ನೋಡುತ್ತಿದ್ದೆ ಪ್ರಿಯೆ. ಬಾ .

ದ್ರೌಪದಿ- (ಆಶ್ಚರ್ಯವನ್ನು ಪ್ರಕಟಿಸುತ್ತಾ) ಅದೇನದು ಆಶ್ಚರ್ಯ ? ನನ್ನನ್ನು ಎದುರು ನೋಡುತ್ತಿದ್ದೆಯಾ ?

ಭೀಮಸೇನ-ಹೌದು ಪ್ರಿಯೆ, ಈಚೀಚೆಗೆ ನನ್ನ ನಿನ್ನ ಭೇಟಿಯಾಗುವುದೇ ಅಪರೂಪವಾಗಿದೆ. ನಾನು ನನ್ನ ಈ ದಿನದ ಈ ಸಮಯವನ್ನು ನಿನಗಾಗಿ ಮೀಸಲಿಟ್ಟಿದ್ದೇನೆ ಬಾ. ಇಲ್ಲಿ ನನ್ನ ಸನಿಹದಲ್ಲಿ ಕುಳಿತುಕೋ, ಕೆಲ ಹೊತ್ತು ಏಕಾಂತದಲ್ಲಿ ಮಾತನಾಡೋಣ.

ದ್ರೌಪದಿ- ಇಲ್ಲಿ ಬೇಡ ಆರ್ಯಪುತ್ರ. ಈ ಜಾಗ ಕುಟೀರಕ್ಕೆ ಸಮೀಪದಲ್ಲಿದೆ. ಧರ್ಮರಾಯನ ಧ್ಯಾನಭಂಗವಾಗಬಹುದು. ಅರ್ಜುನನ ಶಸ್ತ್ರಾಭ್ಯಾಸಕ್ಕೆ ಧಕ್ಕೆ ಬರಬಹುದು. ಬೇರೆಲ್ಲಿಯಾದರೂ, ಕುಳಿತು ಮಾತನಾಡೋಣ."

ಭೀಮಸೇನ-ನಕುಲಸಹದೇವರು ಎಲ್ಲಿ ?

ದ್ರೌಪದಿ- ಎಲ್ಲಿರುವರೋ ಈಗ್ಯಾಕೆ? ಧರ್ಮರಾಯನು ನಕುಲನನ್ನು ಹೊರಗೆಲ್ಲಿಗಾದರೂ ಕಳಿಸಿರಬಹುದು. ಸಹದೇವನನ್ನು ತನ್ನ ಸಹಾಯಕ್ಕಾಗಿ ತನ್ನ ಬಳಿ ಇಟ್ಟು ಕೊಂಡಿರಬಹುದು. (ಉದಾಸೀನದಿಂದ ನುಡಿಯುವಳು) ಈಗ ಈ ಅರಣ್ಯದಲ್ಲಿ ನೀನೊಬ್ಬನೇ ನನಗೆ ಆಪ್ತ... ನಿನ್ನ ಮೇಲೆ ಅಪಾರವಾದ ಒಲವನ್ನು ಇಟ್ಟು ಕೊಂಡಿರುವೆನು... ನೀನೊಬ್ಬನೇ ನನಗೆ ತಕ್ಕನಾದ ಪತಿ. (ಹೊಗಳುವಳು)

ಭೀಮಸೇನ-(ಉಬ್ಬಿ ಹೋಗುವನು) ಅದು ಹೇಗೆ? ನಿನ್ನನ್ನು ಗೆದ್ದವನು ಅರ್ಜುನ...ನಿನಗೆ ಧರ್ಮಪತ್ನಿಯ ಸ್ಥಾನವನ್ನು ಕೊಟ್ಟಿರುವವನು ಧರ್ಮರಾಯ....

ದ್ರೌಪದಿ- ಆದರೂ ನೀನೊಬ್ಬನೇ ನನ್ನ ಮೆಚ್ಚುಗೆಗೆ ಪಾತ್ರನಾದವನು... ನಿನ್ನಲ್ಲಿರುವ ಪತ್ನಿ ಪ್ರೇಮಕ್ಕೆ ನಾನು ಮಾರು ಹೋಗಿರುವೆನು.

ಭೀಮಸೇನ-ಹೆಚ್ಚು ಹೊಗಳದಿರು ಆರ್ಯೆ... ಈಗ ನನ್ನಿಂದ ಏನಾಗಬೇಕಾಗಿದೆ ?

ದ್ರೌಪದಿ- ಅಂಥ ವಿಶೇಷ ಏನೂ ಇಲ್ಲ. ಆದರೆ ನಿನ್ನೊಡನೆ ಕಾಲ ಕಳೆಯುವುದೇ ನನಗೆ ಪ್ರಿಯವಾದ ಸಂಗತಿ.... ಬಾ ವಿಹರಿಸಿ ಬರೋಣ...

ಭೀಮಸೇನ-ಈಗ ಇಲ್ಲಿ ನನ್ನ ಅಗತ್ಯವಿದೆ ಪಾಂಚಾಲಿ. ಎಲ್ಲರೂ ಅವರವರ ಕೆಲಸದಲ್ಲಿ ಮಗ್ನರಾಗಿದ್ದಾರೆ. ಕುಟೀರದ ರಕ್ಷಣೆ ನನ್ನ ಕರ್ತವ್ಯ.

ದ್ರೌಪದಿ- ನನ್ನ ಆಸೆಯನ್ನು ಪೂರೈಸುವುದೂ ನಿನ್ನ ಕರ್ತವ್ಯವೇ.... ಈ ರಕ್ಷಣೆಯ ಕಾರ್ಯವನ್ನು ನೀನು ಅದ್ಹೇಗೆ ಒಪ್ಪಿಕೊಂಡೆಯೋ?.... ಕುಟೀರದ ಹೊರಗಿನ ಪಹರೆಯ ಜವಾಬ್ದಾರಿಯನ್ನು ನೀನು ಹೊರಬಾರದಾಗಿತ್ತು.

ಭೀಮಸೇನ - ನನ್ನಿಂದಾಗುವ ಕಾರ್ಯವನ್ನು ನಾನು ವಹಿಸಿಕೊಳ್ಳುತ್ತೇನೆ. ನಮ್ಮವರನ್ನು ರಕಕ್ಷಿಸುವುದು ನನ್ನ ಕೆಲಸ.

ದ್ರೌಪದಿ- ಇದು ನ್ಯಾಯವಲ್ಲ... ಎಲ್ಲರೂ ಅವರವರ ರಕ್ಷಣೆಯನ್ನು ಅವರೇ ಮಾಡಿಕೊಳ್ಳಬೇಕು. ಅವರು ಕರೆದಾಗಲೆಲ್ಲಾ ನೀನು ಓಡಿ ಹೋಗುವುದು ನನಗೆ ಇಷ್ಟವಾಗುವುದಿಲ್ಲ. ನಿನ್ನನ್ನು ಕಷ್ಟಕರವಾದ ಕೆಲಸಕ್ಕೆ ನಿಲ್ಲಿಸಿ ಅವರುಗಳು ನಿರ್ಭೀತರಾಗಿ ತಿರುಗಾಡುವುದು ಸರ್ವಥಾ ಸಲ್ಲದು. ನಿನಗೆ ಅಪಾಯ ಒದಗಿದರೆ?

ಭೀಮಸೇನ-ಇರಲಿ ಬಿಡು ಪ್ರಿಯೆ. ಈ ಕಾರ್ಯವು ನನಗೆ ಕಷ್ಟಕರವೂ ಅಲ್ಲ; ಅಪ್ರಿಯವೂ ಅಲ್ಲ. ನಾನು ವಾಯುಪುತ್ರ. ನನ್ನ ಈ ಬೃಹತ್ ಶಕ್ತಿಯೇ ನನಗೆ ರಕ್ಷಾ ಕವಚ. (ತೋಳುಗಳನ್ನೆತ್ತಿ ಮಾಂಸಖಂಡಗಳನ್ನು ಉಬ್ಬಿಸಿ ಬಲವನ್ನು ಪ್ರದರ್ಶಿಸುವನು)

ದ್ರೌಪದಿ- (ಮುಗುಳ್ನಗುವಳು)" ಇರಲಿ ಇರಲಿ ಈಗ ಬರೀ ಬಲಪ್ರದರ್ಶನದ ಮಾತುಗಳು ಸಾಕು. ವಿಹರಿಸಿ ಬರೋಣ...." (ಮುಂದೆ ಹೆಜ್ಜೆ ಇಡುವಳು ಭೀಮಸೇನ ಅವಳೊಂದಿಗೆ ಹೆಜ್ಜೆ ಹಾಕುವನು)ತೆರೆ ಬೀಳುವುದು

ದೃಶ್ಯ ೨

ಮುಂದೆ ನಡೆಯುತ್ತಿದ್ದ ದ್ರೌಪದಿ ನಿಲ್ಲುವಳು... ಭೀಮಸೇನ ಮುಂದೆ ಮುಂದೆ ನಡೆಯುವನು.

ದ್ರೌಪದಿ - ಆರ್ಯಪುತ್ರ... ನಿಲ್ಲು... ನಿಲ್ಲು... (ಕರೆಯುವಳು) ಭೀಮಸೇನ ನಿಂತು ಹಿಂತಿರುಗಿ ನೋಡಿ ಅವಳ ಬಳಿಗೆ ಬರುವನು. ದ್ರೌಪದಿ, ಬೀಸುತ್ತಿದ್ದ ತಂಗಾಳಿಗೆ ಮುಖ ಒಡ್ಡಿ ನಿಂತಿರುವಳು ಭೀಮ ನಸುನಗುವನು.

ಭೀಮಸೇನ -ಪ್ರಿಯೆ ಏಕೆ ನಿಂತು ಬಿಟ್ಟೆ! ಆಯಾಸವಾಯಿತೆ? ಕಾಲು ನೋವೇ? ಮುಳ್ಳು ಚುಚ್ಚಿತೇ?...ನನ್ನಿಂದ ಎತ್ತಿಕೊಳ್ಳಬೇಕೆಂಬ ಬಯಕೆಯೆ?... (ತಮಾಷೆ ಮಾಡುವನು)

ದ್ರೌಪದಿ- ಇಲ್ಲ ಆರ್ಯ... ನನಗೆ ಯಾವ ಆಯಾಸವೂ ಇಲ್ಲ... ಯಾವ ನೋವೂ ಇಲ್ಲ. ಕಣ್ಣು ಮುಚ್ಚುವಳು.

ಭೀಮಸೇನ- ನಿನ್ನ ಮುಖದಲ್ಲಿ ಯಾವುದೋ ಮೈ ಮರೆತ ಭಾವ ಗೋಚರಿಸುತ್ತಿದೆ. ಅದೇನೆಂದು ನನಗೂ ತಿಳಿಸು.

ದ್ರೌಪದಿ- ಅಗೋ ನೋಡು ಎದುರು ದಿಕ್ಕಿನಿಂದ ಬೀಸಿ ಬರುತ್ತಿರುವ ತಂಗಾಳಿಯಲ್ಲಿ ಮೈ ಮನವನ್ನು ಮರೆಸುವ ಸುಗಂಧವಾಸನೆ ತುಂಬಿದೆ... ಆ ಅನುಭವ ನಿನಗೆ ಆಗುತ್ತಿಲ್ಲವೆ ?....

ಭೀಮಸೇನ- (ಮೂಗಿನ ಹೊಳ್ಳೆಗಳನ್ನು ಅರಳಿಸಿ ಆಘ್ರಾಣಿಸುವನು) ಹೌದು ಎಂಥಾ ಸುಮಧುರವಾದ ವಾಸನೆ ! ಹತ್ತಿರದಲ್ಲೇ ಯಾರೋ ಸವಿಯಾದ ಮೃಷ್ಟಾನ್ನವನ್ನು ತಯಾರಿಸುತ್ತಿರಬಹುದು.

ದ್ರೌಪದಿ- (ನಗುವಳು) ನಿನಗೆ ಭೋಜನದ ವಿಷಯ ಹೊರತು ಬೇರೆ ಏನಾದರೂ ತಿಳಿದಿದೆಯೆ? ಇದು ಯಾವ ಭೋಜನದ, ಮೃಷ್ಟಾನ್ನದ ಘಮವಲ್ಲ. ಸುಂದರವಾದ ಹೂಗಳು ಅರಳಿ ಸುವಾಸನೆಯನ್ನು ಚೆಲ್ಲುತ್ತಿವೆ. ಆ ಪರಿಮಳ ಇತ್ತಲಿಂದ ಸಾಗಿ ಸಾಗಿ ನಮ್ಮ ಬಳಿಗೆ ಬರುತ್ತಿದೆ.

ಭೀಮಸೇನ -ಹೌದು ಪ್ರಿಯೆ, ತನುಮನವನ್ನು ಪುಳಕಗೊಳಿಸುವ ಸುಗಂಧ ವಾಸನೆ.

ದ್ರೌಪದಿ - ಇಲ್ಲೇ ಎಲ್ಲೋ ಸಮೀಪದಲ್ಲಿ ಹೂಗಳು ಅರಳಿರಬೇಕು. ನಾವುಗಳು

ಹೋಗಿ ನೋಡೋಣ.

ಭೀಮಸೇನ -ಬೇಡ ಪ್ರಿಯೆ ಮೊದಲಿಗೆ ನಾನೊಬ್ಬನೇ ಹೋಗಿ ನೋಡಿ ಬರುವೆ.

ದ್ರೌಪದಿ - ಯಾಕೋ ? ನಾನು ಬಂದರೆ ಏನು ತೊಂದರೆ ? ನಸು ಕೋಪವನ್ನು ತೋರುವಳು

ಭೀಮಸೇನ -ತೊಂದರೆ ನಮಗಲ್ಲ ; ಅವರಿಗೆ.... ಗಂಧರ್ವ ಲೋಕದಿಂದ ಯಕ್ಷರು ಕಿನ್ನರರು ಬಂದು ವಿಹರಿಸುತ್ತಿದ್ದರೆ....?

ದ್ರೌಪದಿ - ಅವರ ವಿಹಾರವನ್ನು ನೀನು ಮಾತ್ರ ನೋಡಬಹುದೋ ? ನಾನು ನೋಡಿದರೆ ಏನಾಗುತ್ತದೆ ?....

ಭೀಮಸೇನ -ಅವರ ಕಣ್ಣಿಗೆ ನಾವು ಬೀಳಬಾರದು... ಅವರ ವಿಹಾರಕ್ಕೆ ನಾವು ಭಂಗ ತಂದರೆ ಅವರು ನಮ್ಮನ್ನು ಶಪಿಸುತ್ತಾರೆ.

ದ್ರೌಪದಿ - ಸರಿ ಹಾಗಾದರೆ ನಾನು ಇಲ್ಲಿಯೇ ಅವರುಗಳು ವಾಪಸ್ಸು ಹೋಗುವವರೆಗೂ ಕುಳಿತಿರುತ್ತೇನೆ. (ಮುನಿಸನ್ನು ತೋರುವಳು)

ಭೀಮಸೇನ -ಮುನಿಯದಿರು ಎನ್ನ ಮನದನ್ನೆ... ಇಗೋ... ನಾನು ಈ ಮರವನ್ನು ಹತ್ತಿ ಮರೆಯಲ್ಲಿ ಕುಳಿತು ಆ ದಿಕ್ಕಿನಲ್ಲಿ ಯಾರಾದರೂ ಇರುವರೋ ಇಲ್ಲವೋ ಎಂದು ನೋಡುತ್ತೇನೆ. (ಸಮೀಪದಲ್ಲಿದ್ದ ಎತ್ತರವಾದ ವೃಕ್ಷವನ್ನು ಏರಿ, ಮರೆಯಲ್ಲಿ ಕುಳಿತು, ಅತ್ತಿತ್ತ ನೋಡಿ, ಕೆಲವೇ ಕ್ಷಣಗಳಲ್ಲಿ ಇಳಿದು ಬರುವನು. ದ್ರೌಪದಿ ಕಾತುರದಿಂದ ಅವನನ್ನೇ ನೋಡುವಳು.)

ದ್ರೌಪದಿ - ಆರ್ಯ... ಅಲ್ಲಿ ಯಾರನ್ನಾದರೂ ಕಂಡೆಯಾ ?"

ಭೀಮಸೇನ -ಇಲ್ಲ ಪ್ರಿಯೆ... ದೃಷ್ಟಿ ಹೊರಳುವಷ್ಟು ಗಾವುದದ ದೂರದಲ್ಲಿ ಯಾವ ನರಪಿಳ್ಳೆಯೂ ಇಲ್ಲ. ನೀನು ಕುಟೀರಕ್ಕೆ ಹೋಗಿರು. ನಾನು ವಾಯುವೇಗದಲ್ಲಿ ಹೋಗಿ, ಹೂವುಗಳು ಯಾವ ಪೊದೆಯಲ್ಲಿದ್ರೂ ಸರಿ, ಎತ್ತರದ ಮರದಲ್ಲಿದ್ದರೂ ಸರಿ, ಕೆಸರಿನಲ್ಲಿ ತೊಡರುವ ಬಳ್ಳಿಯಲ್ಲಿದ್ದರೂ ಸರಿ, ಆ ಹೂವುಗಳನ್ನು ನಿನಗಾಗಿ ಕೊಯ್ದು ತರುತ್ತೇನೆ. (ವೀರಾವೇಶದಿಂದ ನುಡಿಯುವನು).

ದ್ರೌಪದಿ - ಆರ್ಯಾ ನಾನೂ ನಿನ್ನೊಂದಿಗೆ ಬರುವೆ. (ಆಸೆಯನ್ನು ವ್ಯಕ್ತ ಪಡಿಸುವಳು)

ಭೀಮಸೇನ -ಬೇಡ ಪ್ರಿಯೆ... ಅರಣ್ಯಪ್ರದೇಶ ದುರ್ಗಮವಾಗಿದೆ. ಕಲ್ಲುಗಳು ಒತ್ತುತ್ತವೆ. ಮುಳ್ಳು ಚುಚ್ಚಬಹುದು. ನಾನು ಬೇಗ ಹೋಗಿ, ಬೇಗ ವಾಪಸ್ಸು ಬಂದುಬಿಡುತ್ತೇನೆ...

ದ್ರೌಪದಿ - ಅಂತೆಯೇ ಆಗಲಿ ಆರ್ಯಪುತ್ರ.... ನಾನು ಇಲ್ಲಿಯೇ ನಿನ್ನ ಬರವನ್ನು ನಿರೀಕ್ಷಿಸುತ್ತಾ ಕುಳಿತಿರುವೆನು...

ಭೀಮಸೇನ -ನಿನ್ನಿಷ್ಟ. ಇದೋ ಹೊರಟೆ (ಗದೆಯನ್ನು ಭುಜದ ಮೇಲಿರಿಸಿ, ದಾಪುಗಾಲನ್ನು ಹಾಕುತ್ತಾ ಎದೆ ಉಬ್ಬಿಸಿ ನಡೆಯುವನು)
(ಪರದೆ ಬೀಳುವುದು)

* * *

ದೃಶ್ಯ ೩

ದಟ್ಟವಾದ ಅರಣ್ಯ ಪ್ರದೇಶ. ದಾಪುಗಾಲು ಹಾಕುತ್ತಾ ಭೂಮಿಯೇ ಅದುರುವಂತೆ ಸಾಗುತ್ತಿದ್ದ ಭೀಮಸೇನ ಇದ್ದಕ್ಕಿದ್ದಂತೆ ಮಂತ್ರ ಮುಗ್ಧನಾದವನಂತೆ ನಿಂತು ಬಿಟ್ಟನು.... ಗಿಡಮರಗಳ ಸಂದುಗೊಂದಿನಿಂದ ಹರಿದು ಬರುತ್ತಿದ್ದ ರಾಮನಾಮದ ಧಾರೆ ಅವನನ್ನು ತಲುಪಿತು. ತನ್ಮಯತೆಯಿಂದ ಆಲಿಸುವನು.

ಭೀಮಸೇನ - (ಸ್ವಗತ) ಇದೇನಿದು ಈ ಗೊಂಡಾರಣ್ಯದಲ್ಲಿ ರಾಮನಾಮ ಸ್ಮರಣೆ ಎಲ್ಲಿಂದ ಸಾಗಿ ಬರುತ್ತಿದೆ? ಆಹಾ... ಆಯಾಸವೆಲ್ಲಾ ಕ್ಷಣ ಮಾತ್ರ ದಲ್ಲಿ ಕಳೆದು ಹೋಗುವಂಥ ಚೇತೋಹಾರಿ ಮಂತ್ರವನ್ನು ಉಚ್ಚರಿಸು ತ್ತಿರುವವರು ಯಾರು ? ... ಎಂತಾ ಘನವಾದ ಕಂಠ ! ಆ ಪರಮ ಪುರುಷನ ದರ್ಶನವನ್ನು ಮಾಡಿ ಧನ್ಯನಾಗಲೇ ಬೇಕು. (ಮುಂದೆ ಸಾಗು ವನು) ಆದರೆ ಎಷ್ಟೇ ಸುತ್ತಾಡಿದರೂ ಯಾರನ್ನೂ ಕಾಣದೇ ನಿರಾಶನಾಗಿ ನಿಲ್ಲುವನು. ರಾಮಮಂತ್ರದ ಮಹಾಪೂರಾ ಮಾತ್ರ ತುಂಬಿ ಹರಿಯು ತ್ತಲೇ ಇತ್ತು... ಸಿಡಿಮಿಡಿಗೊಂಡು ಅತ್ತಿತ್ತ ನೋಡುವಾಗ, ಒಂದು ಮಹಾ ವೃಕ್ಷವನ್ನು ಕಂಡನು. ವೃಕ್ಷದ ಕೆಳಭಾಗದಲ್ಲಿ ಹರಡಿರುವ ಮಹಾ ಪ್ರಭೆಯನ್ನು ಕಂಡು ವಿಚಲಿತನಾಗಿ ನಿಂತನು. ಮರುಗಳಿಗೆಯಲ್ಲೇ ಎಚ್ಚೆತ್ತು, ಗದೆಯನ್ನು ಝುಳಪಿಸುತ್ತಾ ಆ ವೃಕ್ಷದ ಬಳಿಗೆ ಬಂದನು. ವೃಕ್ಷದ ಕೆಳಗೆ ಬೃಹದಾಕಾರದ ಒಂದು ಕೋತಿಯು ಕೂತಿದ್ದಿತು. ಮೈಯ ತುಂಬಾ ಆವರಿಸಿಕೊಂಡಿದ್ದ ಕೇಶವು ಹೊನ್ನಿನ ರೇಖೆಗಳಂತೆ ಹೊಳೆಯುತ್ತಿದ್ದವು. ಧ್ಯಾನಮುದ್ರೆಯಲ್ಲಿ ಕುಳಿತಿದ್ದ ಕೋತಿಯು ಬಾಯಿಂದ ರಾಮನಾಮ ಹೊರಬರುತ್ತಿತ್ತು... ಇವನು ಬಳಿಗೆ ಹೋಗಿ ನಿಂತು ಗದೆಯನ್ನು ಝುಳಪಿಸಿದರೂ ಕೋತಿಯು ಕಣ್ಣುಗಳನ್ನು ಬಿಟ್ಟಿರಲಿಲ್ಲ. ಆ ದಿವ್ಯತೇಜದಿಂದ ಹೊರಹೊಮ್ಮುವ ತೀವ್ರವಾದ

ಪ್ರಕಾಶಕ್ಕೆ ಭೀಮಸೇನನು ತತ್ತರಿಸಿ ಬಿದ್ದನು. ಕೋಪಾವಿಷ್ಟನಾಗಿ ಸಾವರಿಸಿಕೊಂಡು ಎದ್ದನು.

ಭೀಮಸೇನ -ಎಲವೋ ಮುದಿ ಕಪಿಯೇ ನಾನಾರೆಂದು ನಿನಗೆ ತಿಳಿದಿಲ್ಲ. ನೀನಾರೆಂದು ನಾನು ಬಲ್ಲೆ. ಮಾಯಾ ರೂಪದಲ್ಲಿ ಈ ಸೋಗು ಹಾಕಿ ಕುಳಿತಿರುವ ರಕ್ಕಸನು ನೀನು. ನಾನು ನಿನಗೆ ಹೆದರುವುದಿಲ್ಲ...

ವೃದ್ಧಕಪಿ - (ನಿಧಾನವಾಗಿ ಕಣ್ಣುಗಳನ್ನು ತೆರೆದು ಮುಗುಳ್ನಗುವನು) ವತ್ಸಾ ನೀನ್ಯಾರು ಇಲ್ಲಿ ಬಂದು ನನ್ನ ಧ್ಯಾನಭಂಗವನ್ನೇಕೆ ಮಾಡುತ್ತಿರುವೆ?

ಭೀಮಸೇನ -ಸಾಕು ನಿಲ್ಲಿಸು... ನೀನಾರೆಂದು ನಾನು ಬಲ್ಲೆ. ನನಗಾಗಿ ಹೊಂಚು ಹಾಕಿ ಕುಳಿತಿರುವ ಮಾಯಾವಿ ರಕ್ಕಸನು ನೀನು. ನನ್ನ ಬಲ ಪರಾಕ್ರಮದ ಅರಿವು ನಿನಗೆ ಇದ್ದಂತಿಲ್ಲ. ಸುಮ್ಮನೇ ನಿಜರೂಪದಲ್ಲಿ ಹೊರಬಂದು, ನನ್ನ ಗದಾ ಪ್ರಹಾರಕ್ಕೆ ಸಿದ್ಧನಾಗು. *ಗದೆಯನ್ನು ಬೀಸುವನು*

ಕಪಿವರ್ಯ - ನೀನ್ಯಾರೋ ನನಗೆ ತಿಳಿಯದು... ನಿನಗಾಗಿ ಹೊಂಚು ಹಾಕಿ ಕುಳಿತಿರುವ ಪ್ರಮೇಯವೂ ನನಗಿಲ್ಲ.... ನಿನ್ನ ಪಾಡಿಗೆ ನೀನು ಹೋಗಬಹುದು.

ಭೀಮಸೇನ -ಸರಿ... ಸರಿ... ನಾನು ಅತ್ತ ತಿರುಗಿದ ಕೂಡಲೇ ನನ್ನನ್ನು ಸಂಹರಿಸಿ, ತಿನ್ನಬೇಕೆಂಬ ಅಭಿಲಾಷೆ ನಿನಗಿದ್ದರೆ ಅದು ಈ ಜನ್ಮದಲ್ಲಿ ನಿನ್ನಿಂದ ಸಾಧ್ಯವಿಲ್ಲ. ನಾನು ಯಾರೆಂದು ನಿನಗೆ ತಿಳಿದಂತಿಲ್ಲ... ನನಗೂ ನಿನಗೂ ಎಲ್ಲಿಯ ಸಾಟಿ ?" *ವ್ಯಂಗ್ಯದಿಂದ ನುಡಿಯುವನು*

ಕರಿವರ್ಯ - ಹೌದು, ಹೌದು... ನನಗೂ ನಿನಗೂ ಎಲ್ಲಿಯ ಸಾಟಿ? ನಾನು ಹಣ್ಣು ಹಂಪಲುಗಳನ್ನು ಆಯ್ದುಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ವೃದ್ಧಕಪಿ ಆದರೆ ನಿನ್ನ ಈ ಪರಾಕ್ರಮ ಯಾಕೆಂದು ತಿಳಿಯಲಿಲ್ಲವಲ್ಲಾ... (ಮೂದಲಿಸುವನು)

ಭೀಮಸೇನ -ಎಲವೋ ಮಾಯಾವಿ ಸಾಕು ನಿನ್ನ ನಟನೆ. ನಾನು ಕುಂತೀ ಪುತ್ರ, ಧರ್ಮಜನ ಸಹೋದರ, ಪಾಂಡವರಲ್ಲಿ ಮಧ್ಯಮ. ನನ್ನನ್ನು ಬೀಮಸೇನ ನೆಂದು ಕರೆಯುವರು. ನಾನು ಗದಾವಿದ್ಯೆಯಲ್ಲಿ ಪರಿಣಿತನು. ನನ್ನ ಗದೆಯ ಝುಳಪಿನ ಝೇಂಕಾರಕ್ಕೆ ಎದುರಾಳಿಗಳು ಹೆದರಿ ನಡುಗಿ ಓಡಿ ಹೋಗುವರು... ನೀನೆಷ್ಟರವನು?

ಕಪಿವರ್ಯ - ಎಲ್ಲಿ ಗದೆಯನ್ನು ಎತ್ತಿ ಝುಳಪಿಸು ನೋಡೋಣ... ನಿನ್ನ ಗದಾ ನಾದದ ಝೇಂಕಾರವನ್ನು ಕೇಳಬೇಕೆಂಬ ಬಯಕೆ ನನ್ನಲ್ಲಿ ಹುಟ್ಟುತ್ತಿದೆ...

ಭೀಮಸೇನ -ಎಲವೋ ಮುದಿ ಕಪಿಯ ರೂಪದಲ್ಲಿರುವ ರಾಕ್ಷಸನೇ... ನನಗೀಗ ನಿನ್ನೆದುರು ವಾದ ಮಾಡಲು ಸಮಯವಿಲ್ಲ... ನಾನು ಈಗ ಮುಖ್ಯವಾದ ಕಾರ್ಯವೊಂದನ್ನು ಸಾಧಿಸಲು ಹೊರಟಿದ್ದೇನೆ. ನನಗೆ ಅಡ್ಡ ನಿಲ್ಲದಿರು. ನನಗೆ ದಾರಿ ಬಿಡು. ಈಗ ನೀನು ಅದೃಶ್ಯನಾಗದಿದ್ದರೆ, ನನ್ನ ಗದಾಪ್ರಹಾರದ ರುಚಿಯನ್ನು ನೋಡಬೇಕಾಗುತ್ತದೆ.

ಕಪಿವರ್ಯ - ಬೇಡ ಬೇಡ, ನನ್ನಂಥ ವೃದ್ಧನ ಮೇಲೆ ಗದಾಪ್ರಹಾರವನ್ನು ಮಾಡಿ ಅನ್ಯಥಾ ಪಾಪವನ್ನೇಕೆ ಕಟ್ಟಿಕೊಳ್ಳುತ್ತೀಯೆ ? ನನ್ನ ಪಾಡಿಗೆ ನಾನು ರಾಮಭಜನೆಯನ್ನು ಮಾಡುತ್ತೇನೆ. ನಿನ್ನ ಪಾಡಿಗೆ ನೀನು, ನಿನ್ನ ಕಾರ್ಯವನ್ನು ಪೂರೈಸಿಕೋ.

ಭೀಮಸೇನ -ಓಹೋ... ನೀನು ನನ್ನ ಆಕಾರವನ್ನು ನೋಡಿಯೇ ಹೆದರಿರುವಂತಿದೆ.

ಕಪಿವರ್ಯ - ಹೌದು ವತ್ಸಾ.... ವೃದ್ಧಾಪ್ಯ ಸಮೀಪಿಸುತ್ತಿದ್ದಂತೇ ಭಯಗಳು ಮುತ್ತಿಕೊಳ್ಳುತ್ತವೆ. ಮೊದಲಿನಂತೆ ಮರದಿಂದ ಮರಕ್ಕೆ ಜಿಗಿಯಲಾಗುವುದಿಲ್ಲ. ಹಣ್ಣು ಹಂಪಲು ಕಿತ್ತು, ಕಚ್ಚಿ ತಿನ್ನಲಾಗುವುದಿಲ್ಲ. ಇಲ್ಲಿ ಕುಳಿತು ರಾಮಧ್ಯಾನವನ್ನು ಮಾಡುತ್ತೇನೆ. ಗಾಳಿಗೆ ಉದುರಿ ಬೀಳುವ ಹಣ್ಣು ಹಂಪಲುಗಳನ್ನು ಆಯ್ದುಕೊಂಡು ತೃಪ್ತಿಯಿಂದ ತಿನ್ನುತ್ತೇನೆ.... ನೀನು ಹೊರಡು... ನಿನಗೆ ಹೊತ್ತಾದೀತು...

ಭೀಮಸೇನ -ತಿಳುವಳಿಕಸ್ಥನಂತೆ ಮಾತನಾಡುತ್ತೀಯೆ. ನೀನು ಮಾಯಾ ರಕ್ಕಸನೇ ಆಗಿರು ಮುದಿ ಕಪಿಯೇ ಆಗಿರು, ನನಗೆ ಚಿಂತೆ ಇಲ್ಲ. ಈಗ ನನಗೆ ಹೋಗಲು ಬಿಡು. ಬರುವಾಗ ನಿನಗೆ ಹಣ್ಣುಗಳನ್ನು ತಂದು ಕೊಡುತ್ತೇನೆ. ಸಮೀಪದಲ್ಲಿ ಎಲ್ಲಿಯಾದರೂ ಹಣ್ಣಿನ ತೋಟವಿದೆಯೇ ? ನಿನ್ನ ಫಲಾಹಾರಕ್ಕೆ ಆಗುತ್ತದೆ.

ಕಪಿವರ್ಯ - ಹೂಂ, ಮುಂದೆ ಕಾಣುವ ಸರೋವರದ ಮತ್ತೊಂದು ದಡದಲ್ಲಿ ಒಂದು ಕದಳೀವನವಿದೆ. ಅಲ್ಲಿ ನನ್ನ ವಂಶಸ್ಥರು ಸಾವಿರಾರು ಮಂದಿ ಬೀಡು ಬಿಟ್ಟಿದ್ದಾರೆ. ಅವರ ಕಣ್ಣು ತಪ್ಪಿಸಿ ನನಗಾಗಿ ಕಳಿತು ಹಣ್ಣಾಗಿರುವ ಬಾಳೆ ಹಣ್ಣುಗಳನ್ನು ತಂದು ಕೊಡು.... ಏಕೆಂದರೆ ನಾನು ವೃದ್ಧ. ಹಲ್ಲುಗಳು ಸಡಿಲಗೊಂಡಿವೆ. ಮೆತ್ತಗಿದ್ದರೆ ತಿಂದು ನುಂಗಲು ಸುಲಭವಾಗುತ್ತದೆ (ನಗು)

ಭೀಮಸೇನ -ಆಯಿತು, ಅನೇಕ ಬಾಳೆ ಹಣ್ಣಿನ ಗೊನೆಗಳ ರಾಶಿಯನ್ನೇ ತಂದು ನಿನ್ನ ಪಕ್ಕದಲ್ಲಿ ಪೇರಿಸುತ್ತೇನೆ. ಅದು ಮುಗಿದ ಮೇಲೆ, ಒಮ್ಮೆ 'ಭೀಮ

ಸೇನಾ ಎಂದು ಕೂಗು ಹಾಕು. ವಾಯುವೇಗದಲ್ಲಿ ಬಂದು ನಿನ್ನ ಫಲಾಹಾರದ ವ್ಯವಸ್ಥೆಯನ್ನು ಮಾಡುತ್ತೇನೆ. ಈಗ ನಾನು ಹೊರಡಲೇ.

ಕಪಿವರ್ಯ - ಓ.... ಧಾರಾಳವಾಗಿ ಹೊರಡು... ಈ ವೃದ್ಧ ನಿನ್ನ ಬರವನ್ನೇ ಕಾಯುತ್ತಾ ಕುಳಿತಿರುವನು.

ಭೀಮಸೇನ -ಏಕೆ ?... ನನ್ನ ಶಕ್ತಿಯ ಮೇಲೆ ನಿನಗೆ ಸಂಶಯವೆ ? ನನಗೆ ಯಾವ ಕೆಲಸವನ್ನೂ ನಿಧಾನವಾಗಿ ಮಾಡಿ ಅಭ್ಯಾಸವಿಲ್ಲ. ನಿನ್ನಿಂದಾಗಿ ನನ್ನ ಸಮಯ ವ್ಯರ್ಥವಾಗುತ್ತಿದೆ... ನನಗೆ ಹೋಗಲು ಬಿಡು....

ಕಪಿವರ್ಯ - ನಾನೇನು ನಿನ್ನನ್ನು ಕಟ್ಟಿ ಹಾಕಿದ್ದೇನೆಯೇ... ಏಕೆ ನಿಂತಿರುವೆ ?....

ಭೀಮಸೇನ -ನೀನು ಅಡ್ಡವಾಗಿ ಕುಳಿತಿರುವೆ. ಈ ನಿನ್ನ ಬಾಲವೋ ದಾರಿಗೆ ಅಡ್ಡ ವಾಗಿ ಮಲಗಿದೆ... ಅದನ್ನು ದಾಟಿಕೊಂಡು ಹೋಗಿ ನಿನಗೆ ಅವಮಾನ ಮಾಡುವ ನೀಚನಲ್ಲ ನಾನು... ಅದನ್ನು ಎತ್ತಿ ನಿನ್ನ ಪಕ್ಕಕ್ಕೆ ಇಟ್ಟುಕೋ....

ಕಪಿವರ್ಯ - ಭಲೇ ! ನೀನು ನನಗೆ ತೋರುತ್ತಿರುವ ಗೌರವವನ್ನು ಮೆಚ್ಚಿದೆ.... ಆದರೆ ನಾನು ವೃದ್ಧ ಕಪಿಯೆಂದು ನೀನು ಬಲ್ಲೆಯಷ್ಟೇ... ನೀನೇ ನಿನ್ನ ಕೈಯಾರೆ ಈ ಬಾಲವನ್ನು ಸರಿಸಿಬಿಡು. ನನಗೆ ಆ ಶಕ್ತಿಯೂ ಇಲ್ಲವಾಗಿದೆ.

ಭೀಮಸೇನ - ಸರಿ ಅದು ಯಾವ ದೊಡ್ಡ ಕೆಲಸ ? (ಬಾಲವನ್ನು ಸರಿಸಲು ಪ್ರಯತ್ನಿಸುವನು ಆದರೆ ಬಾಲವನ್ನು ಅಲ್ಲಾಡಿಸಲು ಸಾಧ್ಯವಾಗುವುದಿಲ್ಲ) ನಿನ್ನ ದೇಹದಂತೆ, ನಿನ್ನ ಬಾಲವೂ ಅಗಾಧವಾಗಿ ಬೆಳೆದಿದೆ.... ನೆಲಕ್ಕೆ ಅಂಟಿಕೊಂಡಂತಿದೆ. ಗದೆಯಿಂದ ಸರಿಸುವೆನು (ಗದೆಯನ್ನು ಮಲಗಿರುವ ಬಾಲದ ಬಳಿ ಇಟ್ಟು ಶಕ್ತಿ ಬಿಟ್ಟು ತಳ್ಳಲು ನೋಡುವನು... ಆದರೆ ಬಾಲ ಇದ್ದಂತೆಯೇ ಇರುವುದು. ಎಷ್ಟೇ ಭಾರಿ ಅಳತೆಯ ಬಾಲ ವಾದರೂ ಈ ಗದಾಶಕ್ತಿಯ ಮುಂದೆ ತೃಣ.... ಎನ್ನುತ್ತಾ ಮತ್ತೆ ಮತ್ತೆ ಸರಿಸಲು ಪ್ರಯತ್ನಿಸಿ ಸೋಲುವನು. ಮುಖದಿಂದ ಬೆವರು ಇಳಿಯು ವುದು... ಸುಸ್ತಾಗಿ ನಿಲ್ಲುವನು. (ಕಪಿ ಶ್ರೇಷ್ಠನು ನಗುವನು)

ಭೀಮಸೇನ -ಏ ಮಾಯಾವಿ, ನಗಬೇಡ, ವೃದ್ಧನೆಂದು ಮರ್ಯಾದೆ ತೋರಿ ಬಾಲವನ್ನು ದಾಟಲಿಲ್ಲ. ಇಲ್ಲದಿದ್ದರೆ ವಾಯುಪುತ್ರನಾದ ನನಗೆ ಈ ಬಾಲವನ್ನು ದಾಟುವುದು ಯಾವ ಕಷ್ಟದ ಕೆಲಸ? ಸಮುದ್ರವನ್ನು ಹಾರಿ ಲಂಕೆಯನ್ನು ಪ್ರವೇಶಿಸಿದ ಧೀರ ನನ್ನ ಜೇಷ್ಠನು... ನನ್ನ ತಾತನ, ನನ್ನ ಸಹೋದರನ ರಕ್ತ ನನ್ನಲ್ಲಿ ಹರಿಯುತ್ತಿದೆ... ನನ್ನೊಂದಿಗೆ ಅವರು

ಇದ್ದಿದ್ದರೆ, ನಿನ್ನ ಗರ್ವಭಂಗವನ್ನು ಮಾಡದೇ ಬಿಡುತ್ತಿರಲಿಲ್ಲ.

ಕಪಿವರ್ಯ - ನಾನೆಲ್ಲಿ ಗರ್ವವನ್ನು ತೋರಿದೆ ?.... ಅಸಹಾಯಕನಾಗಿ ಕುಳಿತಿರುವವನ ಮೇಲೆ ಏಕೆ ಈ ಆರೋಪ ? ಹೋಗಲಿ, ನಿನ್ನ ಜೇಷ್ಠನ ಬಗ್ಗೆ ತಿಳಿಸಿದೆಯಲ್ಲ. ಆತ ನಿನಗೆ ಸಿಕ್ಕರೆ, ನನ್ನ ಸಾಷ್ಟಾಂಗ ಪ್ರಣಾಮಗಳನ್ನು ತಿಳಿಸು. ಅವನಿಂದ ನಿನಗೆ ಒಳಿತಾಗುವುದು.

ಭೀಮಸೇನ -ಆ ಮಹಾನುಭಾವನು ನನಗೆ ಎಲ್ಲಿ ಸಿಗುವನು ?

ಕಪಿವರ್ಯ - ನನಗೆ ತಿಳಿದಿದ್ದರೆ, ನಾನು ಇಲ್ಲಿ ಕುಳಿತು ರಾಮನಾಮವನ್ನು ಜಪಿಸುತ್ತಿದ್ದೇನೆ? *ಹುಸಿ ನಗುವನ್ನು ನಗುವನು*

ಭೀಮಸೇನ -ಹೌದು, ಆ ಮಹಾನುಭಾವನನ್ನು ನಾನು ಹೇಗೆ ಹುಡುಕಲಿ. ನಿನ್ನ ಮಾತುಗಳಿಂದ ನೀನೊಬ್ಬ ಮಾಯಾವಿ ಎಂದೇ ಭಾಸವಾಗುತ್ತಿದೆ. ನೀನೇ ನನಗೆ ಸಹಾಯವನ್ನು ಮಾಡಬೇಕು. ನನ್ನ ಪತ್ನಿ ನನಗಾಗಿ ಕಾಯುತ್ತಿದ್ದಾಳೆ. ಅವಳಿಗೆ ಪುಷ್ಪಗಳನ್ನು ತಂದುಕೊಡುವುದಾಗಿ ಮಾತನ್ನು ಕೊಟ್ಟಿದ್ದೀನಿ... ದಯವಿಟ್ಟು ಈಗ ನನಗೆ ಮಾರ್ಗವನ್ನು ಬಿಡು.

ಕಪಿವರ್ಯ - ಈ ಮೊದಲೇ ಯಾಕೆ ತಿಳಿಸಲಿಲ್ಲ? ನಿನ್ನ ಪತ್ನಿ ಯಾರು? ಆಕೆಯ ಹೆಸರೇನು?

ಭೀಮಸೇನ -ದ್ರುಪದನ ಮಗಳು, ದ್ರೌಪದಿ...

ಕಪಿವರ್ಯ - ಅವಳು ನಿನ್ನ ಪತ್ನಿಯೇ ?.... ಅರ್ಜುನನು ಸ್ವಯಂವರದಲ್ಲಿ ಗೆದ್ದು ತಂದ ಕನ್ಯೆ ಎಂದು ಕೇಳಿದ್ದೆನಲ್ಲ.

ಭೀಮಸೇನ -ಆದರೇನು ? ತಾಯಿಯ ವಾಕ್ಯ ಪರಿಪಾಲನೆಗಾಗಿ ನಾವು ಐವರು ಸಹೋದರರು ಆಕೆಯನ್ನು ಪತ್ನಿಯನ್ನಾಗಿ ಸ್ವೀಕರಿಸಿದ್ದೇನೆ. ದ್ರೌಪದಿ ನನ್ನ ಮೆಚ್ಚಿನ ಮಡದಿ. ಆಕೆಗೂ ನನ್ನ ಮೇಲೆ ಅಧಿಕ ವಿಶ್ವಾಸ. ಯಾವುದೇ ಘನತರ ಕಾರ್ಯವಾಗಬೇಕಾದರೂ, ಅವಳು ನನ್ನೊಂದಿಗೇ ಮೊದಲು ಹೇಳುವುದು. ಈಗ ಅವಳ ಒಲವಿನಂತೆ, ಅವಳಿಗೆ ಸೌಗಂಧಿಕ ಪುಷ್ಪವನ್ನು ತಂದುಕೊಡಲು ಹೊರಟಿದ್ದೇನೆ. ನಿನಗೆ ಈ ವಿಷಯಗಳನ್ನೆಲ್ಲ ನಾನು ಯಾಕೆ ಹೇಳಬೇಕು?.... ನಿನಗೆ ಪತ್ನಿಯಿದ್ದರೆ ನೀನು ಈ ಸ್ಥಿತಿಯಲ್ಲಿ ಒಂಟಿಯಾಗಿ ಕುಳಿತಿರುತ್ತಿದ್ದೆಯಾ...?

ಕಪಿವರ್ಯ - ನಿಜ... ಪತ್ನಿ ಎಂದರೇನು ತಿಳಿಯದವನು ನಾನು. ನಾನು ಆಜನ್ಮ ಬ್ರಹ್ಮ ಚಾರಿ.

ಭೀಮಸೇನ -ಯಾಕೆ? ನಿನ್ನ ಕೊರಳಿಗೆ ಯಾವ ಕನ್ಯೆಯೂ ವರಮಾಲೆಯನ್ನು ಹಾಕಲಿಲ್ಲವೆ?"

ಕಪಿವರ್ಯ - ಯಾಕಿಲ್ಲ? ಭಕ್ತಿ ಎಂಬ ವಧೂ ನನಗೆ ವರಮಾಲೆಯನ್ನು ಹಾಕಿದ್ದಾಳೆ. ಅದನ್ನು ನಾನು ಸದಾಕಾಲವೂ ಧರಿಸಿದ್ದೇನೆ. ಭಕ್ತಿಯೂ ನನ್ನೊಂದಿಗೇ ಅನುಗಾಲವೂ ಇದ್ದಾಳೆ.

ಭೀಮಸೇನ -ಹೌದೇನು? ಎಲ್ಲಿ ಕಾಣುತ್ತಿಲ್ಲವಲ್ಲ. (ಅಕ್ಕ ಪಕ್ಕ ಕಣ್ಣೋಡಿ ಸುವನು)

ಕಪಿವರ್ಯ - ಭಕ್ತಿ ಹಾಗೆಲ್ಲ ಸುಲಭದಲ್ಲಿ ಎಲ್ಲರಿಗೂ ಗೋಚರವಾಗುವವಳಲ್ಲ... ಆದರೆ ನಿನಗೆ ತೋರಬೇಕೆ ?... ನೋಡುವೆಯಾ ?"

ಭೀಮಸೇನ - ಅವಶ್ಯವಾಗಿ... ನಿನಗೆ ಅಭ್ಯಂತರವಿಲ್ಲದಿದ್ದರೆ ತೋರು.

ಕಪಿವರ್ಯ -ಅಭ್ಯಂತರ ಏನೂ ಇಲ್ಲ... ಇದೋ ನೋಡು... (ತಾನು ಧರಿಸಿದ್ದ ಜಪ ಮಣಿಯ ಹಾರಗಳನ್ನು ಸರಿಸಿ, ವಜ್ರ ಕವಚವನ್ನು ತೆರೆದು, ರೋಮಭರಿತವಾದ ತನ್ನ ಎದೆಯನ್ನು ಬಗೆದು ದ್ವಾರವನ್ನು ಮಾಡುವನು. ಹೃದಯ ದೇಗುಲದಲ್ಲಿ ಪ್ರಕಾಶಮಾನವಾದ ಕಣ್ಣು ಕೋರೈ ಸುವ ಬೆಳಕು ಹರಿದು ಬರುವುದು. ಆ ತೀಕ್ಷ್ಣತೆಯನ್ನು ತಾಳಲಾರದೇ ಭೀಮಸೇನನು ಕಣ್ಣುಗಳನ್ನು ಮುಚ್ಚಿಕೊಳ್ಳುವನು ಒಳಗಣ್ಣಿನಲ್ಲಿ ಶ್ರೀರಾಮನ ದೇಗುಲವನ್ನು ಭಕ್ತಿಯಿಂದ ಕುಳಿತು ಭಜಿಸುತ್ತಿರುವ ಹನುಮಂತನನ್ನು ಕಾಣುವನು. ಶ್ರೀರಾಮನನ್ನೂ, ರಾಮದಾಸನನ್ನೂ ತನ್ನ ಹೃದಯ ದೇಗುಲದೊಳಗಿಟ್ಟು ಪೂಜಿಸುತ್ತಿರುವ ಈ ಶ್ರೇಷ್ಠನು ಯಾರೆಂದು ವಿಸ್ಮಯ ಪಡುತ್ತಾ ನಿಧಾನವಾಗಿ ಕಣ್ಣುಗಳನ್ನು ತೆರೆಯುವನು. ಮಂದಹಾಸವನ್ನು ಬೀರುತ್ತಾ ಕುಳಿತಿರುವ ಈ ವಯೋವೃದ್ಧನೇ ತನ್ನ ಜೇಷ್ಠನೆಂದೂ, ವಾಯುಪುತ್ರ ಹನುಮಂತನೇ ತನಗೆ ಪ್ರತ್ಯಕ್ಷ ನಾಗಿರುವನೆಂದು ಮನದಟ್ಟಾಗುವುದು. ಮರುಕ್ಷಣವೇ ಮಂಡಿ ಊರಿ ಕುಳಿತು ಅಂಜಲೀಬದ್ಧನಾಗಿ ಕ್ಷಮೆಯನ್ನು ಯಾಚಿಸಿ, ಅಗ್ರಜನ ಪಾದ ಗಳಿಗೆ ಮಣಿಯುವನು. ಹನುಮಂತನ ಕೈಯ ಸ್ಪರ್ಶ ಇವನ ಶಿರದ ಮೇಲೆ ಆಗುತ್ತಿದ್ದಂತೆಯೇ ಅತೀತವಾದ ಕಂಪನ ಮೈಯೊಳಗೆ ಸಂಚರಿಸಿ ಆನಂದದ ಪರಾಕಾಷ್ಠೆ ಉಂಟಾಗುವುದು ಹೊಸ ಚೈತನ್ಯ ತುಂಬಿ ಹರಿಯುವುದು.

ಭೀಮಸೇನ -ಜೇಷ್ಠ ನನ್ನ ಅತಿರೇಕವನ್ನು ಮನ್ನಿಸು. ನೀನೇ ನನ್ನ ಹಿರಿಯಣ್ಣನೆಂದು ತಿಳಿಯದೇ ಹೋದೆನಲ್ಲ... (ಅಶ್ರುಗಳನ್ನು ಅರ್ಪಿಸುವನು)

ಕಪಿವರ್ಯ - ಗರ್ವಿಯಾದವನು ಅವಿವೇಕಿಯಾಗುತ್ತಾನೆ... ಒಳಗಣ್ಣು ಹೇಳುವುದನ್ನು ಹೊರಗಣ್ಣು ಒಪ್ಪಿಕೊಳ್ಳುವುದಿಲ್ಲ. ನೀನು ನನ್ನ ತಮ್ಮನಲ್ಲವೆ? ... ನನಗೆ ನಿನ್ನ ಮೇಲೆ ಯಾವ ಬೇಸರವೂ ಇಲ್ಲ... ನಿನ್ನಲ್ಲಿರುವ

ಮಾತೃಪ್ರೇಮ, ಭ್ರಾತೃವಾತ್ಸಲ್ಯ, ಪತ್ನಿಯ ಸ್ನೇಹ, ಕರ್ತವ್ಯ ನಿಷ್ಠೆ ಎಲ್ಲದರ ಅರಿವು ನನಗಿದೆ. ಆದರೂ ಕಿರಿಯ ಸಹೋದರನೆಂಬ ಸಲುಗೆಯಿಂದ ನಿನ್ನನ್ನು ಸ್ವಲ್ಪ ಕೆಣಕಿ, ಪರೀಕ್ಷಿಸಿದೆ. ಅಷ್ಟೇ. ಈಗ ನೀನು ರಾಮ ನಾಮವನ್ನು ಜಪಿಸುತ್ತಾ ನನ್ನ ಬಾಲವನ್ನು ಸ್ಪರ್ಶಿಸು. ಆಗ ಅದು ಹೂವಿನಷ್ಟೇ ಹಗುರವಾಗುತ್ತದೆ. ಸರಿಸಿ ಪಕ್ಕಕ್ಕೆ ಇಡಲು ಸುಲಭ ವಾಗುತ್ತದೆ.

ಭೀಮಸೇನನು ಅಂತೆಯೇ ಮಾಡುವನು. ರಾಮನಾಮವನ್ನು ಉಚ್ಚರಿಸುತ್ತಾ ಬಾಲವನ್ನು ಸ್ಪರ್ಶಿಸಿ ಕಣ್ಣಿಗೊತ್ತಿಕೊಂಡು ನಿಧಾನವಾಗಿ ಎತ್ತುವನು. ಹೂವಿನಂತೆ ಹಗುರವಾದ ಬಾಲವು ತಂತಾನೆ ಪಕ್ಕಕ್ಕೆ ಸರಿದು ಕಪಿ ಶ್ರೇಷ್ಠನ ಪಕ್ಕದಲ್ಲಿ ವೃತ್ತಾಕಾರದಲ್ಲಿ ವಿಜೃಂಭಿಸುವುದು... ಭೀಮ ಸೇನನು ಭಕ್ತಿಯಿಂದ ಅಣ್ಣನಿಗೆ ನಮಸ್ಕರಿಸುವನು.

ಭೀಮಸೇನ -ಜೇಷ್ಠವರ್ಯಾ ನನಗೆ ಆಶೀರ್ವಾದವನ್ನು ಮಾಡು... ಕಾಯಾ, ವಾಚಾ, ಮನಸಾ, ಅರಿಯದೇ ನಿನ್ನ ಮನಸ್ಸನ್ನು ನೋಯಿಸಿದ್ದೇನೆ ನನ್ನನ್ನು ಕ್ಷಮಿಸು...

ಕಪಿವರ್ಯ - ಕ್ಷಮೆ ಏಕೆ?.... ಸ್ವಲ್ಪ ಮಟ್ಟಿಗೆ ಸತಾಯಿಸಿ, ನನ್ನ ಕಿರಿಯ ಸೋದರ ನೊಂದಿಗೆ ಆಟವಾಡುವ ಅವಕಾಶ ಇಂದು ನನಗೆ ಒದಗಿದೆ. ನನಗೆ ಸಂತಸವಾಗಿದೆ. ನೀನು ನಿನ್ನ ಕಾರ್ಯದಲ್ಲಿ ಸಫಲನಾಗು ನನ್ನ ಆಶೀರ್ವಾದ ಎಂದೆಂದಿಗೂ ನಿನಗೆ ರಕ್ಷಾ ಕವಚವಾಗಿರುತ್ತದೆ.

ಭೀಮಸೇನ - ಧನ್ಯವಾದೆ ಜೇಷ್ಠವರ್ಯಾ...

ಕಪಿವರ್ಯ - ಹೋಗಿ ಬಾ ಭೀಮಸೇನ ನಿನ್ನ ಕಾರ್ಯವು ಸಿದ್ಧಿಗೊಳ್ಳಲಿ. ಸರೋವರದ ಬಳಿಯಲ್ಲಿರುವ ಹೂಬನದಲ್ಲಿ ಸೌಗಂಧಿಕ ಪುಷ್ಪವನ್ನು ನಿನ್ನ ಪತ್ನಿಗಾಗಿ ಕೊಯ್ಯುವಾಗ ನನ್ನನ್ನು ಮರೆಯಬೇಡ. ನನಗಾಗಿ ಕದಳೀಫಲಗಳನ್ನು ತಂದುಕೊಡುವುದನ್ನು ಮರೆಯದಿರು.

ಭೀಮಸೇನ - ಇಲ್ಲ. ಖಂಡಿತಾ ಇಲ್ಲ ಅಗ್ರಜಾ, ಅಪರೂಪಕ್ಕೆ ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕಿದೆ. ನಾನು ಅವಶ್ಯವಾಗಿ ಫಲಗಳನ್ನು ತಂದು ಕೊಡುವೆನು. ಕೃತಾರ್ಥನಾಗುವೆನು.

ಕಪಿವರ್ಯ - ಬೇಗ ಹೋಗಿ ಬೇಗ ಬಾ... ಈ ವೃದ್ಧ ಸೋದರನು ನಿನ್ನ ಸೇವೆಗೋಸ್ಕರ ಕಾಯುತ್ತಾ ಕುಳಿತಿರುವನೆನ್ನುವುದನ್ನು ಮರೆಯಬೇಡ.

ಭೀಮಸೇನ ಅಲ್ಲಿಂದ ಸರಿಯುವನು

(ತೆರೆ ಬೀಳುವುದು)

* * *

ದೃಶ್ಯ ೪

ಸೌಗಂಧಿಕಾ ಪುಷ್ಪಗಳ ಗೊಂಚಲುಗಳನ್ನು, ಬಾಳೆ ಹಣ್ಣಿನ ಗೊನೆಗಳನ್ನು ಭುಜದ ಹೊತ್ತ ಭೀಮಸೇನನು ಹಿಂತಿರುಗುವನು. ಹನುಮಂತನ ಪಾದಗಳ ಅಡಿಯಲ್ಲಿ ಹಣ್ಣಿನ ಗೊನೆಗಳನ್ನು ಇಳಿಸುವನು...

ಭೀಮಸೇನ- ಸ್ವೀಕರಿಸು ಅಗ್ರಜಾ... ಪರಿಪಕ್ವವಾದ ಹಣ್ಣುಗಳನ್ನೇ ಆರಿಸಿ ತಂದಿರುವೆನು.

ಕಪಿಶ್ರೇಷ್ಠ - ನಿನಗೆ ಮಂಗಳವಾಗಲಿ....

ಭೀಮಸೇನ - ಪೂಜ್ಯನೇ ಒಂದು ಸಂಶಯ ನನಗೆ.... ಕೇಳಲೇ...

ಕಪಿಶ್ರೇಷ್ಠ - ಕೇಳು ವತ್ಸಾ....

ಭೀಮಸೇನ - ನೀನೋ ವೃದ್ಧನು. ಅಶಕ್ತನಾಗಿರುವನೆಂದು ನೀನೇ ಹೇಳಿದೆ. ಆದರೆ, ನಿನ್ನ ಈ ಬಾಲಕ್ಕೆ ಅಗಾಧವಾದ ಶಕ್ತಿ ಹೇಗೆ ಬಂದಿತು?

ಕಪಿಶ್ರೇಷ್ಠ - (ನಗುವನು) ಕುಳಿತಲ್ಲೇ ಕುಳಿತು ರಾಮನಾಮವನ್ನು ಜಪಿಸುತ್ತಿರುವೆನಲ್ಲವೆ?... ರಾಮ ನಾಮದ ಜಪದ ಮಹಿಮೆಯಿಂದ ಬಾಲಕ್ಕೆ ಶಕ್ತಿ ಸಿಕ್ಕಿತು. ಬಾಲ ಬೆಳೆಯಿತು. ಈಗ ಇದೇ ನನ್ನ ಆಯುಧ. ನಿನ್ನಂಥವರ ಗರ್ವಭಂಗವನ್ನು ಮಾಡಲು...

ಭೀಮಸೇನ - ಅಪರಾಧವಾಯಿತು. ನಾನೇ ಬಲು ಪರಾಕ್ರಮಿ ಎಂದು ಮೆರೆದಿದ್ದೆ. ನನ್ನ ಗದೆಗೆ ಇರುವ ಶಕ್ತಿ ಬೇರೆ ಯಾವ ಆಯುಧಕ್ಕೂ ಇಲ್ಲವೆಂದೇ ಭಾವಿಸಿದ್ದೆ... ಆದರೆ ರಾಮನಾಮದ ಶಕ್ತಿಯ ಮುಂದೆ ಈ ಆಯುಧಗಳ್ಯಾವುವೂ ನಿಲ್ಲುವುದಿಲ್ಲ ಎಂದು ಅರಿತೆ. ಈಗ ಅಪ್ಪಣೆ ಕೊಡು. ಮತ್ತೆ ನಿನ್ನ ಸೇವೆಗೆ ಬರುವೆನು.

ಕಪಿಶ್ರೇಷ್ಠ - ಎಂದು ಬರೆವೆಯೊ ? ಅಥವಾ ಮರತೇ ಬಿಡುವೆಯೋ ? .. " ವ್ಯಂಗ್ಯದಿಂದ ಪ್ರಶ್ನಿಸುವನು)

ಭೀಮಸೇನ - ಶಾಂತಂ ಪಾಪಂ... (ಕೆನ್ನೆಗಳನ್ನು ತಟ್ಟಿಕೊಳ್ಳುವನು). ನೀನು ತಮ್ಮಾ ಎಂದು ವಾತ್ಸಲ್ಯದಿಂದ ನೆನೆಸಿಕೊಂಡು ಭೀಮಸೇನಾ.... ಎಂದು ಕರೆದೊಡನೆ ವಾಯುವೇಗದಲ್ಲಿ ಬಂದು ಬಿಡುವೆನು..."

ಕಪಿಶ್ರೇಷ್ಠ ಹಾಗೇ ಮಾಡು... ನಿನ್ನ ಪತ್ನಿ ನಿನ್ನ ನಿರೀಕ್ಷೆಯಲ್ಲಿ ಕುಳಿತು

ಬೇಸರಿಸುತ್ತಿರ ಬಹುದು. ಈ ಪುಷ್ಪಗಳು ಬಾಡಿ ಹೋಗುವ ಮೊದಲು ನಿನ್ನ ಪತ್ನಿಗೆ ಕೊಡು. ಹಾಗೇ ನಾನು ಎಲ್ಲರನ್ನು ಕೇಳಿದೆನೆಂದು ಹೇಳುವುದನ್ನು ಮರೆಯಬೇಡ.

ಭೀಮಸೇನ - ಅವಶ್ಯ ಈ ದಿನ ನನಗೆ ಸುದಿನ... ಈ ಶುಭ ದಿವಸವನ್ನು ನಾನು ಎಂದೆಂದಿಗೂ ಮರೆಯುವುದಿಲ್ಲ. ಬರಲೇ ಭ್ರಾತೃಶ್ರೀ... (ಕೈ ಮುಗಿಯುವನು...)

ಕಪಿವರ್ಯನು ಬಲಗೈಯನ್ನೆತ್ತಿ ಶುಭವನ್ನು ಹಾರೈಸುವನು.

(ಪರದೆ ಬೀಳುವುದು)

* * *

ದೃಶ್ಯ ೫

ಭೀಮಸೇನನಿಗಾಗಿ ಕಾದು ಕುಳಿತಿರುವ ದ್ರೌಪದಿಯು ಸೌಗಂಧಿಕ ಪುಷ್ಪದ ಸುವಾಸನೆಯನ್ನು ಆಘ್ರಾಣಿಸಿ ಎದ್ದು ನಿಲ್ಲುವಳು. ಧಾವಿಸಿ ಬಂದ ಭೀಮನನ್ನು ಕಂಡು ಹುಸಿಮುನಿಸನ್ನು ತೋರುವಳು.

ಭೀಮಸೇನ -ಪ್ರಿಯೆ... ನೋಡು ನಿನಗಾಗಿ ಸೌಗಂಧಿಕಾ ಪುಷ್ಪಗಳ ವನವನ್ನೇ ತಂದಿರುವೆ. (ಅವಳ ಮುಂದೆ ಹೂಗಳ ರಾಶಿಯನ್ನು ಹಾಕುವನು).

ದ್ರೌಪದಿ - ಇಷ್ಟೇಕೆ ತಡ ಮಾಡಿದೆ ಆರ್ಯಪುತ್ರ. ನಿನಗಾಗಿ ಕಾದು ಕಾದು ನಾನು ಬಸವಳಿದಿರುವೆ. ನಿನಗಾಗಿ ಕಾತರಿಸಿ ನೋಡಿ ನೋಡಿ, ನನ್ನ ಕಣ್ಣೆವೆಗಳು ಸೋತಿವೆ....

ಭೀಮಸೇನ -ಈ ಚೇತೋಹಾರಿ ಸೌಗಂಧಿಕಾ ಪುಷ್ಪಗಳ ಸುವಾಸನೆಯಿಂದಲೂ, ನಿನ್ನ ಬಳಲಿಕೆ ಕಡಿಮೆ ಆಗಲಿಲ್ಲವೆ?. ಅಥವಾ ನನ್ನ ಮೇಲೆ ಮುನಿಸೋ?

ದ್ರೌಪದಿ - ಹೌದು ಆರ್ಯ... ನಾನು ನಿನ್ನ ಮೇಲೆ ಮುನಿದಿದ್ದೇವೆ. ಮೊದಲು ನಿನಗೆ ತಡವಾದುದಕ್ಕೆ ಕಾರಣವನ್ನು ತಿಳಿಸು.

ಭೀಮಸೇನ - ಆ ದಟ್ಟವಾದ ಅಡವಿಯಲ್ಲಿ ನನಗೆ ನನ್ನ ಅಗ್ರಜರ ದರ್ಶನ ವಾಯಿತು. ಸಂಭ್ರಮದಿಂದ ಹೇಳುವನು.

ದ್ರೌಪದಿ - ಅಗ್ರಜರೇ... ಯಾರವರು ? ಧರ್ಮರಾಯನು ಇಲ್ಲೇ ಇದ್ದರಲ್ಲ...

ಭೀಮಸೇನ -ಹನುಮಂತನೆಂದು ಅವರ ದಿವ್ಯನಾಮ. ವಾಯುಸೇನರೇ ಅವರ ತಂದೆ. ತ್ರೇತಾಯುಗದಲ್ಲಿ ರಾಮದಾಸನಾಗಿ, ಶ್ರೀರಾಮನಿಗೆ ಬಲಗೈ ಬಂಟನಾಗಿದ್ದವರು. ಲಂಕೆಗೆ ಹಾರಿ ಹೋಗಿ, ಸೀತಾಮಾತೆಗೆ ಚೂಡಾ ಮಣಿಯನ್ನು ಇತ್ತವರು... ಲಂಕೆಯನ್ನು ಧ್ವಂಸ ಮಾಡಿದವರು. ಸಂಜೀವಿನಿ ಪರ್ವತವನ್ನೇ ಎತ್ತಿ ತಂದ ವೀರರು... ಅವರೇ ಈ ಸೌಗಂಧಿಕಾ ಪುಷ್ಪದ ಸರೋವರಕ್ಕೆ ಮಾರ್ಗದರ್ಶನ ನೀಡಿದವರು... ನಾನಿಂದು ಭಾಗ್ಯಶಾಲಿ ಪಾಂಚಾಲಿ... ಅವರ ದೇಹದಿಂದ ಎಂತಹ ದಿವ್ಯ ತೇಜಸ್ಸು ಹೊರಹೊಮ್ಮುತ್ತಿತ್ತು ಬಲ್ಲೆಯಾ ?...

ದ್ರೌಪದಿ - ಆರ್ಯ ನಾನೊಮ್ಮೆ ಅವರನ್ನು ನೋಡಬೇಕಲ್ಲ. ಕರೆದೊಯ್ಯು ವೆಯಾ?

ಭೀಮಸೇನ - ಅವಶ್ಯವಾಗಿ ಕರೆದೊಯ್ಯುವೆ... ಎಲ್ಲರನ್ನು ಕರೆದೊಯ್ಯುವೆ...

ಅವರ ಸನ್ನಿಧಿಯಲ್ಲಿ ಯಾವ ಗರ್ವ ದುರಹಂಕಾರಗಳಿಗೆ ಆಸ್ಪದವಿಲ್ಲ... ಹಾಗೆ ಪರೀಕ್ಷಿಸಿ ಬಿಡುತ್ತಾರೆ... ಈ ದಿನ ಅಂತಹ ಅನುಭವವೂ ನನಗಾಯಿತು... ನಾನೇ ಶ್ರೇಷ್ಠನೆಂದೂ, ನನ್ನ ಗದೆಯೇ ಶಕ್ತ್ಯಾಯುಧವೆಂದು ಭಾವಿಸಿದ್ದೆ.... ಆದರೆ ನನ್ನ ಗರ್ವಕ್ಕೆ ತಕ್ಕ ಶಾಸ್ತಿ ಆಯಿತು... ನನಗಿಂತ ಶ್ರೇಷ್ಠರಾದವರು ನನ್ನ ಅಗ್ರಜರು. ನನ್ನ ಗದೆಗಿಂತ ಬಲಶಾಲಿಯಾದುದು ಅವರ ಬಾಲ... ನನ್ನ ಗದೆ ಅವರ ಬಾಲದ ಮುಂದೆ ಶಕ್ತಿ ಇಲ್ಲದಂತೆ ಮಲಗಿತು. ನಡೀ ನಮ್ಮ ಕುಟೀರಕ್ಕೆ ಹೋಗೋಣ. ನನ್ನ ಅನುಭವಗಳನ್ನು ನನ್ನವರೊಂದಿಗೆ ಹಂಚಿಕೊಳ್ಳಬೇಕು.

(ಇಬ್ಬರೂ ಕುಟೀರದತ್ತ ಸರಿಯುವರು - ತೆರೆ ಬೀಳುವುದು)

ಈ ಲಘು ನಾಟಕವನ್ನು ಕುರಿತಂತೆ

ಈ ಲಘು ನಾಟಕದ ಸಂದರ್ಭ - ಮಹಾಭಾರತದ ಕಾಲದ್ದು, ಭೀಮಸೇನನು ತನ್ನ ಮಡದಿ ದ್ರೌಪದಿಗಾಗಿ ಸೌಗಂಧಿಕಾ ಪುಷ್ಪವನ್ನು ತಂದು ಕೊಡಲು ಹೋಗುವ ಸನ್ನಿವೇಸ. ಮಾರ್ಗ ಮಧ್ಯದಲ್ಲಿ ಅವನಿಗೆ ಹನುಮಂತನ ಭೇಟಿಯಾಗುತ್ತದೆ. ಎಲ್ಲವನ್ನು ಬಲ್ಲ ತ್ರಿಕಾಲಜ್ಞಾನಿ ಹನುಮಂತ, ಭೀಮಸೇನನ ಅಹಂಕಾರವನ್ನು ಕುಗ್ಗಿಸುತ್ತಾನೆ.

ಕೇವಲ ರಂಜನೀಯವಾಗಿರಲಿ ಎನ್ನುವ ಉದ್ದೇಶದಿಂದ ಸಂಭಾಷಣೆಗಳನ್ನು ಆಡಿಸಲಾಗಿದೆ. ಹಾಗೇ ರಾಮನಾಮ ಮಂತ್ರದ ಮಹಿಮೆಯನ್ನು ಎತ್ತಿ ಹಿಡಿಯುವುದು ಮುಖ್ಯವಾಗಿದೆ. ಓದುಗರು ಮೆಚ್ಚುವರೆಂದು ಭಾವಿಸಿದ್ದೇನೆ.

o o o

ಪದ್ಮಾ ಶ್ರೀಧರ್

ಪುರಂದರ ದಾಸರು

ಸ್ಥಳ : ಪುರಂದರ ಘಡದಲ್ಲಿ ಶ್ರೀನಿವಾಸ ನಾಯಕ್ಕರ ಮನೆ.

ಸಮಯ : ಪೂಜಾ ವೇಳೆ ಶ್ರೀನಿವಾಸ ನಾಯಕರ ಪತ್ನಿ ಸರಸ್ವತಿ ಬಾಯಿಯವರಿಂದ ಪೂಜೆ, ಪ್ರಾರ್ಥನೆ.

ಅದೃಶ್ಯದಲ್ಲಿ : ನಾರಾಯಣ

(ಸರಸ್ವತಿ ಬಾಯಿಯವರು ಮಂಗಳ ಹಾಡಿ ಮುಗಿಸುತ್ತಾರೆ)

ನಾರಾಯಣ : (ಅದೃಶ್ಯದಲ್ಲಿ, ಮೆಲ್ಲಧ್ವನಿ, ಆದರೆ ಸ್ಪಷ್ಟ)

ಆಹಾ ! ಈಕೆ ಮಹಾಸಾಧ್ವಿ, ದೈವಭಕ್ತೆ, ನನ್ನನ್ನು ಕೊಂಡಾಡುತ್ತಿದ್ದಾಳೆ. ಶ್ರೀನಿವಾಸ ನಾಯಕ ನಂತಹ ನವಕೋಟಿ ನಾರಾಯಣನನ್ನು ಪಡೆದೂ, ದೈನ್ಯಾವಸ್ಥೆಯಲ್ಲೇ ಇದ್ದಾಳೆ. ಈ ದೈನ್ಯ ನನ್ನ ಮೇಲಿನ ಭಕ್ತಿಯಿಂದಲ್ಲವೇ ಉಂಟಾಗಿರುವುದು ? ಇರಲಿ, ಈಕೆ ಮುಕ್ತಿಗೆ ಅರ್ಹಳು. ಆದರೆ ಪತಿಯ ಲೋಭವೃತ್ತಿ ಈಕೆಗೆ ಸ್ವಲ್ಪ ಅಡಚಣೆ ಆಗಿದೆ. ಆತನಿಗೂ ಪೂರ್ವ ಸಂಸ್ಕಾರವಿದೆ... ಭಕ್ತಶಿರೋಮಣಿ ಆಗಬಲ್ಲ ಸಂಸ್ಕಾರವಿದೆ. ಇದೇ ಸಮಯ ಅವರಿಗೆ, ಜ್ಞಾನೋದಯವಾಗುವಂತೆ ಮಾಡುವೆ.

ರತ್ನಪಡಿ ವ್ಯಾಪಾರದ ಅಂಗಡಿ. ಹಣವನ್ನು ಎಣಿಸುತ್ತಾ, ಕಬ್ಬಿಣದ ಪೆಟ್ಟಿಗೆಯಲ್ಲಿ ಸೇರಿಸುವ ಯುಕ್ತವಾದ ಶಬ್ದ) ನಂತರ ಯಾವುದೋ ರತ್ನವನ್ನು ಪರೀಕ್ಷಿಸುವ ಕ್ರಿಯೆ.

ಶ್ರೀನಿವಾಸ ನಾಯಕ : ಈ ರತ್ನದ ಬೆಲೆ ಹೆಚ್ಚಾಗಿದೆ. ರತ್ನ ಉತ್ತಮವಾದದ್ದೆಂದು ಕಾಣುತ್ತದೆ... (ಪರೀಕ್ಷೆ ಮಾಡಿದಂತೆ) ಹೂಂ ಚಿಂತೆ ಇಲ್ಲ ಉತ್ಕೃಷ್ಟ ರತ್ನ. ನಾನು ಇದನ್ನು ಸುಲಭ ಬೆಲೆಗೇ ತೆಗೆದುಕೊಂಡಿದ್ದೇನೆ. ಎರಡರಷ್ಟು ಹಣಕ್ಕೆ ಧಾರಾಳವಾಗಿ ಮಾರಬಹುದು...

(ಯಾರೋಬಾಗಿಲಲ್ಲಿ ನಿಂತ ಶಬ್ದ)

ಶ್ರೀನಿವಾಸ : ಯಾರದು ? .... ಏನಾಗಬೇಕು ?...

ಬಡಬ್ರಾಹ್ಮಣನ ವೇಶದಲ್ಲಿ ನಾರಾಯಣ : ನಾನು ಬಡಬ್ರಾಹ್ಮಣ, ಯಾಚನೆಗಾಗಿ ಬಂದಿದ್ದೇನೆ ನಾಳೆ ಬರುವಂತೆ ನನಗೆ ಅಪ್ಪಣೆ ಮಾಡಿದ್ದಿರಿ ಕೃಪೆ ಮಾಡಬೇಕು.

ಶ್ರೀನಿವಾಸ: (ಎತ್ತರದ ಧ್ವನಿಯಲ್ಲಿ) ಏನು? .. ಬ್ರಾಹ್ಮಣಾ!.. ನಿನಗೇನು ಸಮಯ ದಮಯ ಇಲ್ಲವೇ?... ಯಾಚಿಸುವುದು ನಿನಗೆ ಸುಲಭವಾಗಿರ ಬಹುದು. ಕೊಡುವವರಿಗೆ ಕಷ್ಟ...

ನಾರಾಯಣ : ದೈನ್ಯದ ನುಡಿ ಹಾಗೆನ್ನಬೇಡಿ ನಾಯಕರೇ... ನೀವು ಧನಿಕರು. ರತ್ನಪಡಿ ವ್ಯಾಪಾರದಲ್ಲಿ ಈ ಪ್ರಾಂತ್ಯಕ್ಕೆಲ್ಲಾ ಹೆಸರಾದವರು. ಅನೇಕರ ಬಾಯಲ್ಲಿ ನಿಮ್ಮ ಪ್ರಶಂಸೆ ಕೇಳಿದ್ದೇನೆ. ನಿಮ್ಮನ್ನು 'ನವಕೋಟಿ ನಾರಾಯಣ' ಎಂದು ಎಲ್ಲರೂ ಹೇಳುತ್ತಾರೆ. ಆದುದರಿಂದ ಇಲ್ಲಿಗೆ ಬರುತ್ತಿದ್ದೇನೆ. ಪ್ರಕೃತದಲ್ಲಿ ನನ್ನ ಮಗನ ಉಪನಯನವಾಗಬೇಕಾಗಿದೆ. ದ್ರವ್ಯ ಸಹಾಯ ಮಾಡಿ ಈ ಬಡವನನ್ನು ಉದ್ಧಾರ ಮಾಡಬೇಕು.

ಶ್ರೀನಿವಾಸ: (ಎತ್ತರದ ಧ್ವನಿಯಲ್ಲೇ) ದುಡಿದು ಸಂಪಾದಿಸಿದ ಹಣ ಅಷ್ಟು ಸುಲಭವಾಗಿ ದೊರಕುವುದಿಲ್ಲ. ಆದರೆ !... ಆದರೆ !! ಉಪನಯನ ವೆಂದು ಹೇಳಿದೆ. ನಾಳೆ ಸಂಜೆ ಬರಬಹುದು. ನೋಡುವ.

ನಾರಾಯಣ : ಆಗಲಿ ನಾಯಕರೆ, ತಮ್ಮ ದಯವಿರಲಿ. ನಾಳೆಯೇ ಬರುತ್ತೇನೆ. ನೆನ್ನೆಯೂ ಬಂದಿದ್ದೆ. ನಾಳೆ ಬರುವಂತೆ ಹೇಳಿದಿರಿ. ನಾಳೆಯಾದರೂ ನಿಮ್ಮ ದಯ ಉಂಟಾಗಲಿ.

(ಹೊರಟು ಹೋಗುವ ಕ್ರಿಯೆ)

ಶ್ರೀನಿವಾಸನಾಯಕ (ಸ್ವಗತ) ಈ ಯಾಚಕರುಗಳಿಂದ ನನ್ನ ಹಣ ಸವೆಯುತ್ತಿದೆ. ಸಂಪಾದಿಸಿದ ಹಣವನ್ನು ಏನೂ ಉಪಯೋಗಬಾರದ ಯಾಚಕರಿಗೆ ಕೊಟ್ಟರೆ ಲಾಭವೇನು ? ಬಡ ಬ್ರಾಹ್ಮಣನಂತೆ ದುಡಿದು ಸಂಪಾದನೆ ಮಾಡುವ ಯೋಗ್ಯತೆ ಇಲ್ಲ... ಯಾಚನೆಗೆ ಬರುತ್ತಾರೆ... ಹೀನಾಯ ವಿಲ್ಲದೆ ! ಇಂದು ಉಪನಯನ! ನಾಳೆಮದುವೆ ! .... ಈ ನೆಪಗಳಿಗೆ ಕೊನೆಯುಂಟೆ?

ನಾರಾಯಣ : (ಸ್ವಗತ) (ಸ್ವಲ್ಪ ದೂರ ಕಾಲ್ನಡಿಗೆ ನಂತರ ಅದೃಶ್ಯ)

ಶ್ರೀನಿವಾಸನಿಗೆ ಸಂಸ್ಕಾರವಿದೆ 'ಉಪನಯನ' ಎಂದು ಹೇಳಿದ ಮೇಲೆ, ಸ್ವಲ್ಪ ಮನಸ್ಸು ಮಾಡಿ, "ನಾಳೆ ಬಾ" ಎನ್ನುತ್ತಿದ್ದಾನೆ. "ಇಲ್ಲ" ಎನ್ನಲಿಲ್ಲ. ಈತನಿಗೆ ಜ್ಞಾನೋದಯ ವಾಗಬೇಕಷ್ಟೆ.! ಆಗಲಿ, ಜ್ಞಾನೋದಯ ವಾಗುವಂತೆ ಮಾಡುತ್ತೇನೆ....

ಮಾರನೇ ದಿನ ಶ್ರೀನಿವಾಸನಾಯಕರ ಮನೆ ಬಾಗಿಲನ್ನು ತಟ್ಟಿದ ಶಬ್ದ

ಸರಸ್ವತಿಬಾಯಿ : ಯಾರದು ಬಾಗಲಲ್ಲಿ ?

ನಾರಾಯಣ : ನಾನು ತಾಯಿ !... ನಾನೊಬ್ಬ ಬಡ ಬ್ರಾಹ್ಮಣ.

ಸರಸ್ವತಿ ಬಾಯಿ : (ಬಾಗಿಲನ್ನು ತೆಗೆದು ಕ್ರಿಯೆ) ಏನು ಬ್ರಾಹ್ಮಣೋತ್ತಮರೆ ? ... ಯಾವ ಕಾರ್ಯದ ನಿಮಿತ್ತ ಬಂದಿರಿ ?.... ಯಜಮಾನರು ಅಂಗಡಿಗೆ ಹೋಗಿದ್ದಾರೆ. ಅವರನ್ನೇ ನೋಡಿ !!

ನಾರಾಯಣ : ಬಹಳ ದೂರದಿಂದ ಬಂದಿದ್ದೇನೆ. ಆಯಾಸವಾಗಿದೆ. ಎಲ್ಲೂ ಹೋಗಲಾರೆ. ಯಾಚನೆಗಾಗಿ ಬಂದಿದ್ದೇನೆ. ಮಗನ ಉಪನಯನವಾಗ ಬೇಕಾಗಿದೆ. ಏನಾದರೂ ದ್ರವ್ಯ ಸಹಾಯ ಮಾಡಿ ಪುಣ್ಯಭಾಗಿಗಳಾಗಿ ತಾಯಿ !

ಸರಸ್ವತಿಬಾಯಿ : (ದೈನ್ಯಸ್ವರ) ಬ್ರಾಹ್ಮಣೋತ್ತಮರೆ, ಉಪನಯನವೆಂದು ಹೇಳಿದಿರಿ. ಪುಣ್ಯದ ಕೆಲಸವೇನೋ ಹೌದು... ಆದರೆ !.. ಆದರೆ !!

ನಾರಾಯಣ : ಹೇಳಿ ತಾಯಿ, ನಿಮ್ಮ ಅನುಮಾನವೇನು ?

ಸರಸ್ವತಿಬಾಯಿ : ಆದರೆ... ನನ್ನಲ್ಲಿ ಕೊಡಲು ಏನೂ ಇಲ್ಲವಲ್ಲಾ !

ನಾರಾಯಣ : ಹಾಗೆನ್ನಬೇಡಿ ತಾಯಿ, ನೀವು ಅಗರ್ಭ ಶ್ರೀಮಂತರೆಂದು ಲೋಕ ಪ್ರಸಿದ್ಧವಾಗಿದೆ. ನಿಮ್ಮಲ್ಲಿ ಇಲ್ಲದಿರುವುದೂ ಉಂಟೆ? ನಿಮ್ಮ ಯಜಮಾನರು "ನವಕೋಟಿ ನಾರಾಯಣ"ನೆಂದು ಪ್ರಸಿದ್ಧರಾಗಿದ್ದಾರೆ.

ಸರಸ್ವತಿ ಬಾಯಿ : (ಕ್ಷೀಣಾವಸ್ಥೆಯಲ್ಲಿ ಮಾತು) ಆದರೆ .. ಈಗ... ನನ್ನಲ್ಲಿ ಏನೂ ಇಲ್ಲ. ಬ್ರಾಹ್ಮಣರೇ.... (ದುಃಖದ ಧ್ವನಿ)

ನಾರಾಯಣ : ಹಣವಿಲ್ಲದಿದ್ದರೇನು ತಾಯಿ ! ಬೆಲೆ ಬಾಳುವ ಏನಾದರೂ ವಸ್ತುವನ್ನು ಕೊಟ್ಟರೂ ಆದೀತು...

ಸರಸ್ವತಿಬಾಯಿ : ಅಂತಹ ವಸ್ತುವೇನಿದೆ ?... ಎಲ್ಲಾ ಅಂಗಡಿಯಲ್ಲಿರುತ್ತದೆ.

ನಾರಾಯಣ : ಆದರೂ, ನಿಮ್ಮ ಮೂಗುತಿ ಇದೆ. ನೀವು ದಾನಮಾಡುವುದಾದರೆ ಸಾಕು.

ಸರಸ್ವತಿಬಾಯಿ : (ಬೆಚ್ಚಿದಂತೆ) ಹಾಂ!... ಮೂಗುತಿಯೇ?... ಹೌದೂ ಅದೊಂದಿದೆ. ... ಆಗಲಿ ಅದನ್ನೇ ತೆಗೆದುಕೊಳ್ಳಿ... ಕಳಚಿದಂತೆ ಮಾಡಿ... ಶ್ರೀ ಕೃಷ್ಣಾರ್ಪಣಮಸ್ತು...ಎಂದು ಹೇಳಿ ನೀಡುವಳು

ನಾರಾಯಣ : ತಾಯಿ !.... ನೀವು ಧನ್ಯರು. ಭಗವಂತನು ನಿಮಗೆ ಅಪಾರ ಕರುಣೆಯನ್ನು ದಯ ಪಾಲಿಸಲಿ. ನಿಮಗೆ ಮಂಗಳವಾಗಲಿ.... ಹೋಗಿ ಬರುತ್ತೇನೆ... (ಹೊರಟು ಹೋಗುವ ಸಪ್ಪಳ)

ಸರಸ್ವತಿಬಾಯಿ : ಆ ದಯಾಮಯ ಭಗವಂತ ಹೇಗಾದರೂ ನನ್ನನ್ನು ಉದ್ಧಾರ ಮಾಡಲಿ ಎಲ್ಲಾ ಅವನಿಗೇ ಅರ್ಪಿತ.

ಅಂಗಡಿ

ಶ್ರೀನಿವಾಸ ನಾಯಕ : ಹೋ... ಬ್ರಾಹ್ಮಣ...ಮತ್ತೆ ಬಂದು ಬಿಟ್ಟೆಯಾ ?....

ನಾರಾಯಣ : ಈಗ ನಿಮ್ಮನ್ನು ಯಾಚಿಸಲಾರೆ ನಾಯಕರೆ, ದಯಮಾಡಿ, ಈ ಮೂಗುತಿಯನ್ನು ಕೊಂಡು ನನಗೆ ಮಗನ ಉಪನಯನಕ್ಕಾಗಿ ಹಣ ವನ್ನು ಕೊಡಿ.

ಶ್ರೀನಿವಾಸ ನಾಯಕ : ಮೂಗುತಿಯನ್ನು ನೋಡಿ ಆಶ್ಚರ್ಯಪಡುತ್ತಾನೆ. ಮನಸ್ಸು ಅದುರುತ್ತದೆ... ಕುಳ್ಳಿರಿಸಿ ಮಾತನಾಡುವುದು)

ಅಂ... ಮೂಗುತಿಯನ್ನು ಪಡೆದು ಹಣಕೊಡಬೇಕೆ?.... ಹುಂ... ತೆಗೆದುಕೊಳ್ಳಿ... (ಹಣ ಎಣಿಸಿ ಕೊಡುವ ಕ್ರಿಯೆ)

ಶ್ರೀನಿವಾಸನಾಯಕ : ಬ್ರಾಹ್ಮಣ ಹಣ ಪಡೆದು ಹೋದ ಈತ ಯಾರು ?... ಕೇಳಲೇ ಇಲ್ಲ... ಈ ಮೂಗುತಿ, ನನ್ನ ಲಕ್ಷ್ಮಿಯದಂತಿದೆ, ಲಕ್ಷ್ಮಿಯದೇ ಎಂದು ಖಚಿತವಾಗಿ ಕೋರುತ್ತದೆ. ಈಗೇನು ಮಾಡಲಿ ? ... ಇದನ್ನು ಇಲ್ಲೇ ಭದ್ರಪಡಿಸಿ, ಮನೆಗೆ ಹೋಗಿ ನೋಡುತ್ತೇನೆ. ಈ ಬಡ ಬ್ರಾಹ್ಮಣನಿಗೆ ಈ ಮೂಗುತಿ ಹೇಗೆ ಬಂತೋ ತಿಳಿಯದಲ್ಲಾ! (ಮೂಗುತಿಯನ್ನು ಕಟ್ಟಿ, ಕಬ್ಬಿಣದ ಸಂದೂಕದಲ್ಲಿ ಸೇರಿಸುವ ಕ್ರಿಯೆ. ಅಂಗಡಿಯನ್ನು ಮುಚ್ಚುವ ಕ್ರಿಯೆ... ನಡೆಯುವ ಕ್ರಿಯೆ)

ಸರಸ್ವತಿಬಾಯಿ : ಯಾರದು, ಬಾಗಿಲನ್ನು ತಟ್ಟುವುದು ?

ಶ್ರೀನಿವಾಸನಾಯಕ : ನಾನು ಲಕ್ಷ್ಮೀ ಬಾಗಿಲು ತೆಗೆ (ಬಾಗಿಲು ತೆಗೆದ ಕ್ರಿಯೆ)

ಶ್ರೀನಿವಾಸ: ಲಕ್ಷ್ಮೀ ! ನಿನ್ನ ಮೂಗುತಿ ಎಲ್ಲಿ? ಬೇಗ ತೆಗೆದುಕೊಂಡು ಬಾ. ನಾನು ನೋಡ ಬೇಕಾಗಿದೆ. *ಮೂಗುತಿ ಇಲ್ಲದ್ದನ್ನು ಗಮನಿಸುವನು*

ಸರಸ್ವತಿಬಾಯಿ : ಅಷ್ಟು ಆತುರವೆ?... ಅಂ... ನನ್ನ ಮೂಗುತಿಯೇ... (ತಡವರಿಸುತ್ತಾ)... ಒಳಗಿನಿಂದ ತರುತ್ತೇನೆ. .... ಕೂಡಿರಿ... (ಸರಸ್ವತಿ ಬಾಯಿ, ಒಳಗೆ ನಡೆದು, ಒಂದು ಕೊಠಡಿಯ ಬಾಗಿಲನ್ನು ಮುಚ್ಚಿದಂತೆ ಧ್ವನಿ)

ಸರಸ್ವತಿಬಾಯಿ (ಸ್ವಗತ) .... ಹೇ ! ದಯಾಮಯಾ?... ಈಗ ಮೂಗುತಿ ಎಲ್ಲಿದೆ ?.... ಅವರಿಗೆ ತರುತ್ತೇನೆಂದು ಹೇಳಿಬಿಟ್ಟೆ.... ಪರಮಾತ್ಮಾ....

ನನ್ನ ಪೂರ್ಣ ಪರೀಕ್ಷೆ ಆಗುತ್ತಿದೆ... ಏನು ಮಾಡಲಿ ?... ದೇವಾ ! ನನ್ನನ್ನು ಕಾಪಾಡು.... ನಾನು ಅವರಿಗೆ "ಮೂಗುತಿಯನ್ನು ದಾನ ಮಾಡಿದೆ" ಎಂದು ಹೇಗೆ ಹೇಳಲಿ ? ಅವರು ಖಂಡಿತಾ ಕೋಪಿಷ್ಠ ರಾಗುವರು. ನನ್ನ ವರ್ತನೆಯನ್ನು ಖಂಡಿಸುವರು. ಮನೆಯಿಂದ ಹೊರಗೆ ಹಾಕಲೂ ಹಿಂಜರಿಯರು... ಇದು ಅಂತ್ಯ ಘಟ್ಟ. .. ಏನು ಮಾಡಲಿ? .... ದೇವಾ ! ... ಈ ಸಂದಿಗ್ಧ ಸ್ಥಿತಿಯನ್ನು ಸಹಿಸಲಾರೆ !... ಸಹಿ..ಸ.. ಲಾರೆ!!.. ಪ್ರಾಣತ್ಯಾಗವೇ ಇದರ ಅಂತ್ಯ. ವಿಷವಿದೆ... ಸೇವಿಸಿ ಬಿಡುತ್ತೇನೆ. ಪ್ರಪಂಚದಿಂದಲಾದರೂ ಪಾರಾಗಿ ಬಿಡುವೆ... (ವಿಷವನ್ನು ಬಟ್ಟಲಿಗೆ ಹಾಕುವ ಕ್ರಿಯೆ).....

ಶ್ರೀಮನ್ನಾರಾಯಣ! ಇದೇ ನನ್ನ ಕೊನೆ ಪ್ರಾರ್ಥನೆ. ಧರ್ಮಯುಕ್ತ ದಾನಮಾಡಿದ್ದೇನೆ. ಅದು ನಿನಗೇ ಅರ್ಪಿತ ಇದೋ!... ಈ ಕಾರ್ಕೋಟಕದಿಂದ ನನ್ನ ಶರೀರ ತ್ಯಾಗವಾಗಲೀ... ನಾರಾಯಣಾ !.... ನಾರಾಯಣ!! (ಟನ್ ಎಂಬ ಸದ್ದು) (ವಿಷದ ಬಟ್ಟಲಲ್ಲಿ ಏನೋ ಬಿದ್ದಂತಾಯಿತು)

.... ಹಾಂ !.... ಏನಿದು, ಏನು ಬಿದ್ದಿತು... ನನ್ನ ಮೂಗುತಿ !.... ನನ್ನ ಮೂಗುತಿ !!... ಎಲ್ಲಿಂದ ಬಂದಿತು ?.... ನೀನು ?... ನೀನು ದಯಾಮಯನಾದ ಭಗವಂತನೇ ಹೌದು. ದಾನ ಮಾಡುವಾಗ ಈ ನಿರ್ಭಾಗ್ಯೆ ಗುರುತಿಸಲಿಲ್ಲ...(ಹರ್ಷಧ್ವನಿ)... ದಯಾ ಳೋ ...ನನ್ನನ್ನು ಪಾರುಮಾಡಿದೆ.. ಇದೋ ಈ ಮೂಗುತಿಯನ್ನು ಅವರಿಗೆ ಕೊಡುತ್ತೇನೆ. .. (ಹೊರಗೆ ಬರುವಕ್ರಿಯೆ)... ಮೂಗುತಿ ತೆಗೆದುಕೊಳ್ಳಿ... ಕೊಡುವಳು

ಶ್ರೀನಿವಾಸ: (ಆಶ್ಚರ್ಯದಿಂದ) ಆ... ಮೂಗುತಿ... ಹೌದು.... ಅದೇ ಮೂಗುತಿ... ನಾನು ಭದ್ರವಾಗಿ ಅಂಗಡಿಯಲ್ಲಿ ಇಟ್ಟಿದ್ದ ಮೂಗುತಿ!... ಇದೇನು! ...ಇದೇನೂ ಮಾಯೆ?... ಪುನಃ ಅಂಗಡಿಯಲ್ಲಿ ನೋಡುತ್ತೇನೆ. (ನಡೆದುಹೋದ ಶಬ್ದ... ಆತುರದಿಂದ ಬೇಗ ಬೇಗ)

ಬಾಗಿಲೆಲ್ಲಾ ಭದ್ರವಾಗಿದೆ ಕಬ್ಬಿಣದ ಸಂದೂಕವೂ ಭದ್ರವಾಗಿದೆ. ನಾನಿಟ್ಟ ಮೂಗುತಿ ಇಲ್ಲ... ಪರಮಾತ್ಮಾ... ಇದೇನು ಮಾಯೆ!... ನನ್ನನ್ನು ಚೆನ್ನಾಗಿ ಪರೀಕ್ಷಿಸಿಬಿಟ್ಟೆ... ದೇವಾ... ನೀ ಮಾಯೆಯೇ... ನಿನ್ನೊಳು ಮಾಯೆಯೋ, ಅರಿಯೆ.

ಬ್ರಾಹ್ಮಣ ವೇಷದಲ್ಲಿ ಬಂದು, ನನ್ನನ್ನು ಪರೀಕ್ಷಿಸಿದೆ. ನಾನೆಂಥ ಲೋಭಿ?... ನೀನು ಪರಮಾತ್ಮನೆಂದು... ಈ ಅಂಧನಿಗೆ ಹೇಗೆ

ಗೊತ್ತಾದೀತು?... ಈ ಧನ, ಸಂಪತ್ತು... ಎಲ್ಲಾ ನಿನ್ನ ಮಾಯೆಯಲ್ಲೇ ಅಡಕವಾಗಿದೆ... ಕೊಟ್ಟು ಶ್ರೀಮಂತನನ್ನಾಗಿ ಮಾಡಿದವನು ನೀನೇ... ಪರಮಾತ್ಮಾ ಇದೆಲ್ಲಾ ಮಾಯೆ... ನೀನು ಬಯಸಿದ್ದು ಆಗುವುದು ಖಚಿತ... ಇಂದಿನ ಅಪರಾಧ ನೀನು ಬಯಸಿದ ಕ್ಷಣಮಾತ್ರದಲ್ಲಿ ಮಾಯವಾಗಬಲ್ಲದು... ಅಶಾಶ್ವತ!... ನಿನ್ನ ಅನುಗ್ರಹದ ಮುಂದೆ ಇದೆಲ್ಲಾ ವ್ಯರ್ಥ!.. ವ್ಯರ್ಥ!! ಆಕೆಯೇ ಧನ್ಯೆ.. ಆಕೆ... ಪರಮ ಧನ್ಯೆ

ಹೋಗೋಣ ... ಇದೋ ನನ್ನ ಎಲ್ಲಾ ಸ್ವತ್ತುಗಳನ್ನು ದಾನ ಮಾಡಿ ಬಿಡುತ್ತೇನೆ. ಜ್ಞಾನ ವೈರಾಗ್ಯಗಳನ್ನು ಗಳಿಸಲು ಗುರುವ್ಯಾಸರಾಯರ ಸನ್ನಿಧಿಗೆ ಹೋಗುವೆ. *ಹೊರಡುವನು*

ವ್ಯಾಸರಾಯರು: ಕೋಟೆ ನಾರಾಯಣ! ಸೀನಪ್ಪ ನಾಯಕಾ, ಇದೇನು?... ಭಕ್ತಿಯಲ್ಲಿ ಬಂದಿಳಿದೆ ಸಕಲ ಭೋಗಗಳನ್ನು ತ್ಯಾಗಮಾಡಿಬಿಟ್ಟೆಯಾ?

ಸೀನಪ್ಪ: ನನ್ನ... ಮನೆಯಲ್ಲಿ ನಡೆದ ಘಟನೆಯಿಂದ ಕಣ್ಣು ತೆರೆದಂತಾಗಿದೆ. ಗುರುವರ್ಯಾ! ನನಗೆ ಜ್ಞಾನಸಂಪಾದನೆಯೇ ಬೇಕಾಗಿದೆ ಕೃಪೆ ಮಾಡಬೇಕು

ವ್ಯಾಸರಾಯ: ನೀನು ಸ್ವತಃ ಸುಶಿಕ್ಷಿತ. ಸೂಕ್ಷ್ಮಮತಿಯೂ ಹೌದು ಕೆಲುವು ದಿನ ಇಲ್ಲೇ ಇದ್ದು ವೇದವೇದಾಂಗಗಳ ಮರ್ಮವನ್ನು ತಿಳಿ. ಸಾಧನೆ ಮಾಡು ಸಂತೋಷದಿಂದ ಮಾರ್ಗ ದರ್ಶನ ಮಾಡುವೆ. ಅಂದ ಹಾಗೆ ನಿನಗೆ ಸಂಗೀತ ಶಿಕ್ಷಣವೂ ಆಗಿದೆಯೆಂದು ತೋರುತ್ತದೆ. ಶ್ರೀ ಕೃಷ್ಣನ ಬಗೆಗೆ ರಚನೆಗಳನ್ನು ಮಾಡಿ ಹಾಡು. ನೀನೂ ಉದ್ಧಾರವಾಗುತ್ತೀಯೇ ನಿನ್ನ ಹಾಡುಗಳನ್ನು ಕೇಳಿ ಪ್ರಪಂಚವೂ ಉದ್ಧಾರವಾದೀತು. ಲೋಕೋಪ ಕಾರವೂ ಆದಂತೆ ಆಗುತ್ತದೆ.

ಸೀನಪ್ಪ: ಅಪ್ಪಣೆ ಗುರುವರ್ಯ ಇಲ್ಲಿಯೇ ಎಲ್ಲಾ ಅಭ್ಯಾಸಗಳನ್ನು ಮಾಡುತ್ತೇನೆ.

ವ್ಯಾಸರಾಯ: ನಿನಗೆ ಮಂಗಳವಾಗಲಿ. ನೀನು ಶ್ರೀ ಕೃಷ್ಣ ಭಗವಂತನ ಪರಮ ಭಕ್ತನೆಂದು ನನಗೆ ತಿಳಿದಿದೆ.

ಸೀನಪ್ಪ: ಮಹಾಪ್ರಸಾದವಾಯಿತು!

* * *

ಸೀನಪ್ಪ: ಗುರುವರ್ಯ! ಸಾಕಷ್ಟು ಅಭ್ಯಾಸವಾಗಿದೆ. ಮುಂದೇನು ಅಪ್ಪಣೆ?

ವ್ಯಾಸರಾಯರು: ನಿನ್ನ ಅಭ್ಯಾಸವಾಗುತ್ತಿದ್ದಂತೆ ಸುಂದರವಾದ ನಾನಾ ಕೀರ್ತನೆ ಗಳನ್ನು ಕೇಳಿ ತೃಪ್ತಿಗೊಂಡಿದ್ದೇನೆ. ನೀನು ತೀರ್ಥಯಾತ್ರೆಗಳನ್ನು ಮಾಡು. ದೇವರನಾಮಗಳನ್ನು ರಚಿಸು. ಪುರಂದರ, ವಿಠಲ ನಾಮಾಂಕಿತದಲ್ಲಿ ರಚಿಸಬಹುದು. ಇನ್ನು ಮುಂದೆ ನೀನು ದಾಸ ಪಂಕ್ತಿಗೆ ಸೇರಿದೆ...

"ಪುರಂದರದಾಸ" ನೆಂದು ನಿನ್ನನ್ನು ಕರೆಯುತ್ತೇವೆ. ದಾಸರೆಂದರೆ ಪುರಂದರದಾಸರೆಂಬ ಶ್ರೇಷ್ಠ ಬಿರುದು ನಿನಗೆ ಸಿಗಲಿ.

ಹೋಗಿಬಾ... "ಜ್ಞಾನ ವೈರಾಗ್ಯ ಸಿದ್ಧಿರಸ್ತು", "ವಿಜಯೀ ಭವ" ಹಾರೈಸುವರು

ಸೀನಪ್ಪ : ಧ್ಯನ್ಯನಾದೆ ಗುರುವರ್ಯ ! ನಿಮ್ಮ ಅಪ್ಪಣೆಯಂತೆ ನಡೆಯುತ್ತೇನೆ...

ವ್ಯಾಸರಾಯರು: ತೀರ್ಥಯಾತ್ರೆ ಪರ್ಯಟನದಲ್ಲಿ ಮೆಲ್ಲ ಧ್ವನಿಯಲ್ಲಿ ತಂಬೂರಿ ಯೊಂದಿಗೆ ಅನನ್ಯ ನಾಮಗಳನ್ನು ರಚಿಸಿ ಹಾಡು !... ಲೋಕೋಪಯೋಗವಾಗಲಿ !.... ಕೃಷ್ಣ ಪರಮಾತ್ಮನು ನಿನ್ನ ನಾಮ ಕೀರ್ತನೆಯೊಂದಿಗೆ ನಲಿದಾಡಲಿ !... ಎಲ್ಲರಿಗೂ ಮಂಗಳವಾಗಲಿ.

ಕೆರೆಯ ನೀರನು ಕೆರೆಗೆ ಚೆಲ್ಲಿ
ವರವ ಪಡೆದವರಂತೆ ಕಾಣಿರೋ....
ಹರಿಯ ಚರಣದೊಳಾದ ಭಾಗ್ಯವ
ಹರಿ ಸಮರ್ಪಣೆ ಮಾಡಿ ಬದುಕಿರೋ....
ಶ್ರೀಪುರಂದರ ವಿಠಲರಾಯನ
ಚರಣ ಕಮಲವ ನಂಬಿ ಬದುಕಿರೋ

ಆದದ್ದೆಲ್ಲಾ ಒಳಿತೇ ಆಯಿತು ನಮ್ಮ
ಶ್ರೀಧರನ ಸೇವೆಗೆ ಸಾಧನೆ ಸಂಪತ್ತಾಯಿತು.....

ಗ್ರಹಸ್ಥ : ದಾಸರಾಯರು ಬರುತ್ತಿದ್ದಾನೆ. ಅವರ ಕೀರ್ತನೆಗಳನ್ನು ಕೇಳಿ ಧನ್ಯರಾಗುವ! ಎರಡು ದೇವರನಾಮಗಳು

ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ
ಕಲ್ಲು ಸಕ್ಕರೆ ಕೊಳ್ಳಿರೋ

ಜಗದೋದ್ಧಾರನ ಆಡಿಸಿದಳೆಶೋದೆ
ಜಗದೋದ್ಧಾರನ...

o o o

ಸ್ನೇಹ ಮಿಲನ

ಮಾಲಾ : ಓ ಸುಮ... ಹಾಯ್ ಏನೇ ನೀನು ಇಲ್ಲಿ, ಎಷ್ಟು ದಿನವಾಯ್ತೇ ನಿನ್ನ ನೋಡಿ, ಹೇಗಿದ್ದೀಯೆ...?

ಸುಮ : ಓ.... ಮಾಲಾ ನಾನು ಚೆನ್ನಾಗಿದ್ದೀನಿ. ನೀನು ಹೇಗಿದ್ದೀಯೆ ? ನನ್ಗೆ ಎಷ್ಟು ಖುಷಿ ಆಗ್ತಿದೆ ಗೊತ್ತಾ ? ಬಾರೇ ಇಲ್ಲೇ ಕಲ್ ಬೆಂಚ್ ಮೇಲೆ ಕೂತು ಮಾತಾಡೋಣ.

ಮಾಲಾ : ಏನ್ ಸಮಾಚಾರ, ಇಲ್ಲೇನೋ ಜನ ಸಮೂಹ... ಏನು ? ಎಂಥಾ ಸಮಾರಂಭ?

ಸುಮ : ಓ ಅದಾ, ಇದು ಯೋಗಾ ಕೇಂದ್ರ ಕಣೆ, ನಾನು ಇಲ್ಲೇ ಕ್ಲಾಸ್‌ಗೆ ಬರ್ತೀನಿ. ಇವತ್ತು "ಸ್ನೇಹ ಮಿಲನ " ಎಂಬ ಪ್ರೋಗ್ರಾಮ್ ನಡೀತಾ ಇದೆ. ಎಲ್ಲಾ ಬ್ಯಾಚ್‌ರವರು ಸೇರಿದ್ದಾರೆ.

ಮಾಲಾ : ಹೌದೇನೇ ನೀನು ಯಾವಾಗಿನಿಂದ ಯೋಗಕ್ಕೆ ಹೋಗ್ತಿದೀಯೇ ? ಅದರಿಂದ ಏನಾದರೂ ಪ್ರಯೋಜನ ಆಗಿದೆಯೇನೆ ?

ಸುಮ : ಯಾಕೇ ಇಲ್ಲ. ನಾನು ಒಂದು ದಿನ ತರಗತಿಗೆ ಹೋಗದೇ ಇದ್ರೆ ಹೇಗೇಗೋ ಆಗುತ್ತೆ. ಒಂದಿಷ್ಟು ಹೊತ್ತು ಬಂದು ಯೋಗ ಪ್ರಾಣಾ ಯಾಮ ಮಾಡದೆ ಹೋದ್ರೆ ಸಮಾಧಾನ ಇರುಲ್ಲ, ಜೊತೆಗೆ ಸ್ನೇಹಿತರು ಸಿಕ್ತಾರೆ, ಒಂದಿಷ್ಟು ಅದೂ ಇದು ಮಾತು. ಮನೇಲಿ ಏನೂ ಮಾಡೋಕೆ ಆಗುಲ್ಲಾ ಕಣೇ.

ಮಾಲಾ : ಏನೇ ಹಾಗಂತೀಯಾ, ಈಗ ನೋಡು ನಾನು ಮನೇಲೇ ಬಿಟ್ಟು ಎಲ್ಲಿ ಪುರಸತ್ತು, ಅಷ್ಟಲ್ಲದೆ ಇಲ್ಲಿಗೆ ಫೀಸ್ ಬೇರೆ ಕೊಡಬೇಕು. ಎಲ್ಲಿಂದ ತರುವುದು? ಅದೇ ಇದ್ದರೆ ತರಕಾರಿಗಾದರೂ ಆಗುತ್ತೆ.

ಸುಮ : ಇಲ್ಲಾ ಕಣೇ ನೀನು ತಪ್ಪು ತಿಳಿದಿದ್ದೀಯಾ ? ಹೆಂಗಸರು ಅಂದರೆ

ಬರಿ ಮನೆ ಗಂಡ ಮಕ್ಕಳು ಅಷ್ಟೇನಾ? ಅವರು ಒಂದು ಜೀವ, ಅವರಿಗೆ ವ್ಯಕ್ತಿತ್ವ ಇದೆ. ಆರೋಗ್ಯವಂತರಾಗಿ ಸಂತೋಷವಾಗಿರಲು ಅಧಿಕಾರ ಇದೆ.

ಮಾಲಾ : ಅಯ್ಯೋ ಬಿಡೆ, ಈಗ ನಾನೇನು ಆಗಿದ್ದೀನಿ, ನಾನು ಎಲ್ಲರ ತರಹ ಬೆಳಗ್ಗೆ ವಾಕ್ ಹೋಗ್ತೀನಿ, ಡೆಯಟ್ ಮಾಡ್ತೀನಿ, ಅದರ ಜೊತೆಗೆ ಮನೆ ಕೆಲಸ ಮಾಡ್ತೀನಿ, ಚೆನ್ನಾಗಿ ಮನೆ ನೋಡಿಕೋಳ್ತೀನಿ ಇನ್ನೇನು ಬೇಕು ಹೇಳು.

ಸುಮ : ಹೌದೇನೇ ಹೋಗ್ಲಿ ಬಿಡು, ಎಲ್ಲಾ ಅವರವರ ಇಷ್ಟ. ನಿನ್ನ ದಿನಚರಿ ಏನೇ, ನಿನ್ನ ಮಕ್ಳು ಏನ್ ಮಾಡ್ತಾ ಇದ್ದಾರೆ.

ಮಾಲಾ : ಒಬ್ಬನೇ ಮಗ ಕಣೇ ಅವನಿನ್ನು ಎಲ್.ಕೆ.ಜಿ. ಓದ್ತಾ ಇದ್ದಾನೆ. ಅತ್ತೆ ಮಾವ ಎಲ್ಲಾ ಇದ್ದಾರೆ. ಒಂದು ನಿಮಿಷ ಪುರಸತ್ತು ಇರುಲ್ಲ. ದಿನವೆಲ್ಲಾ ಬರಿ ಕೆಲಸ.

ಸುಮ : ಅದ್ಕಾಗೆ ಮನೇಲೇ ಇರ್ತೀಯೋ. ಈ ಕೆಲಸ ಎಲ್ಲಾ ಹೆಂಗಸು ಮಾಡ್ತಾರೆ. ಒಂದಿಷ್ಟು ಹೊರಗಿನ ಗಾಳಿ ಕುಡೀಬೇಕಲ್ಲ.

ಮಾಲಾ : ಅದಕ್ಕೆ ಕಣೆ ಬೆಳಗ್ಗೆ ಅಷ್ಟು ಹೊತ್ತಿಗೇ ವಾಕ್ ಹೊರಡ್ತೀನಿ. ಹತ್ತಿರ ಪಾರ್ಕ್ ಇದೆ. ಅಲ್ಲಿ ನನ್ನ ಸ್ನೇಹಿತರು ಬಂದಿರುತ್ತಾರೆ. ಅಪ್ಪಾ ! ಅಷ್ಟು ನಡೆದು ಬರುವ ಹೊತ್ತಿಗೆ ಸಾಕಾಗಿ ಹೋಗುತ್ತೆ. ಅಲ್ಲಿ ಕಲ್ ಬೆಂಚ್ ಮೇಲೆ ಕೂತು ಹರಟೆ ಹೋಡಿತೀವಿ. ಹೂಂ ಇರುತ್ತಲ್ಲಾ ವಿಚಾರ. ಎಲ್ಲರ ಮನೆ ದೋಸೆ ತೂತು ಅಂತ. ಹೊತ್ತು ಹೋಗುವುದೇ ಗೊತ್ತಾಗುಲ್ಲ. ಅಷ್ಟು ಹೊತ್ತಿಗೆ ನನ್ನ ಗಂಡ ಬಂದು ಬಿಡ್ತಾರೆ. ಆಫೀಸ್‌ಗೆ ತನ್ನ ಮಗಂಗೆ ಹೊತ್ತಾಯ್ತು ಅಂತ. ಸಧ್ಯ ನಡೆಯುವ ಗೋಜಿಲ್ಲ. ಹೇಗೂ ಕಾರ್ ತಂದಿರುತ್ತಾರೆ.

ಸುಮ : ಆಯ್ತಾಲ್ಲಾ ನಿನ್ನ ವಾಕ್, ಅದಕ್ಕೆ ನೀನು ಗುಂಡು ಗುಂಡಗೆ ಹೀಗಿರುವುದು ಆಮೇಲೆ ?

ಮಾಲಾ : ಬರುವ ಹೊತ್ತಿಗೆ ಮಾವ ಪೂಜೆ ಮಾಡಿ ಪಂಚಾಮೃತ ಇಟ್ಟಿರುತ್ತಾ ರೆಂದ್ರೆ ಬಂದ ತಕ್ಷಣ ಸಾಕಾಗಿರುತ್ತೆ ಒಂದು ಗ್ಲಾಸ್ ಭರ್ತಿ ಕುಡಿದು ಬಿಡ್ತೀನಿ. ಒಳ್ಳೆ ಹೊಟ್ಟೆ ತುಂಬಿಕೊಂಡ್ಹಾಗಿರುತ್ತೆ.

ಸುಮ : ನಿಮ್ಮತ್ತೆ ಮಾವ ನಿನ್ನ ಚೆನ್ನಾಗಿ ನೋಡಿ ಕೊಳ್ತಾರಾ, ಮನೇಲಿ ಏನೂ ತೊಂದರೆ ಇಲ್ವಾ?

ಮಾಲಾ : ತೊಂದರೆ ಏನು? ಮಾವ ಸಾಮಾನು ಗೀಮಾನು ತಂದುಕೊಂಡು

ಹೊರಗಿನ ಕೆಲಸ ಮಾಡ್ತಾರೆ. ಅತ್ತೆ ಅಡಿಗೆ ಕೆಲಸ ಮಾಡ್ತಾರೆ. ನನ್ನ ಮಗೂನ ನೋಡಿಕೊಳ್ತಾರೆ. ನನಗೇನೂ ಕೆಲಸವೇ ಇಲ್ಲ.

ಸುಮ : ಈಗ್ತಾನೆ ಹೇಳ್ದೆಯಲ್ಲೇ ಮನೆ ಕೆಲಸ ಅಂತ. ಹೂಂ ಪಾಪ ದೊಡ್ಡ ಮನೆ, ಮನೆ ತುಂಬ ಆಳು ಕಾಳು. ಎಲ್ಲರನ್ನೂ ನೋಡ್‌ಕೊಳ್‌ಬೇಕಲ್ಲ.

ಮಾಲಾ : ಹೂಂ.... ಸಧ್ಯ ನನ್ನ ಕಷ್ಟ ನಿನಗಾದ್ರು ಗೊತ್ತಾಯಿತಲ್ಲಾ... ಇಲ್ ಕೇಳೇ. ಈ ಕಡೆ ಆ ಕಡೆ ಓಡಾಡುವುದರಲ್ಲಿ, ಅತ್ತೆ ತಿಂಡಿ ಮಾಡಿ ಕೂಗ್ತಾರೆ. ಎಲ್ಲಾ ಹೇಳ್ತಾರಲ್ಲ ಬೆಳಗಿನ ಉಪಾಹಾರ ಹೊಟ್ಟೆ ತುಂಬ ತಿನ್ನಬೇಕು ಅಂತ. ಹಾಗೇ ಮಾಡ್ತೀನಿ. ತಿಂಡಿ ತಿಂದ ಮಂಪರು ಹಾಗೇ ಅಲ್ಲೇ ಒಂದಿಷ್ಟು ತೂಕಡಿಸುತ್ತೇನೆ. ಮಗ ಬಂದೇ ಬಿಡ್ತಾನೆ. ಅವನೇ ನನ್ನ ಎಬ್ಬಿಸೋದು.

ಸುಮ : ಹೌದೇನೇ ನೀನು ಎಂತಹ ಅದೃಷ್ಟವಂತೆ. ನಿನಗೆ ಮನೆಯೇ ಸ್ವರ್ಗ ಅಲ್ಲವೇನೇ?

ಮಾಲಾ : ಅದಕ್ಕೂ ಕಣೆ ನಾನು ಕಿಟ್ಟಿ ಪಾರ್ಟಿ ಅದು ಇದು ಸಿನಿಮಾಕ್ಕೆ ಹೋಗೋದು. ಅದೆಲ್ಲಾ ಮಾಡ್ತೀನಿ, ಇಲ್ದೆ ಹೋದ್ರೆ ಎಂಥಾ ಜೀವನ.

ಸುಮ : ಹೌದು ಅದೇನೋ ನಿಜ ಅನ್ನು... ಕೆಲವರಿಗೆ ಕೆಲವು ತರಹ. ನಿನಗೆ ಅವೆಲ್ಲಾ ಇಷ್ಟ ಆದರೆ, ನನಗೆ ಬೇರೆ ತರಹ. ಒಟ್ಟಿನಲ್ಲಿ ಯಾರಿಗೆ ಯಾವುದು ಇಷ್ಟವೋ ಖುಷಿ ಕೊಡುತ್ತೋ ಅದನ್ನು ಮಾಡಿದರೆ ಆಯ್ತು.

ಮಾಲಾ : ಅಲ್ವೇ ಬೆಳಗ್ಗೇನೂ ನಿದ್ರೆ ಮಾಡ್ತಿ. ರಾತ್ರೇನು ನಿದ್ದೆ ಮಾಡ್ತೀಯ. ಹೇಗೆ ನಿದ್ರೆ ಬರುತ್ತೆ ? ಒಳ್ಳೆ ಅಭ್ಯಾಸ ಕಣೇ. ನನಗಂತೂ ಅಷ್ಟು ನಿದ್ರೆ ಬರೂದಿಲ್ಲ. ನಾನು ನಿದ್ರೆ ಮಾಡೋದು ಇಲ್ಲ. ಯಾಕೆ ಗೊತ್ತಾ. ಅಷ್ಟು ನಿದ್ರೆ ಮಾಡಬಾರ್ದು, ಒಳ್ಳೆ ಜಷ್ಮ.

ಮಾಲಾ : ಹಾಗಾದ್ರೆ ಏನ್ ಮಾಡ್ ಬೇಕು ಅಂತೀಯಾ ?

ಸುಮ : ಒಂದ್ ಕೆಲ್ಸ ಮಾಡು, ನೀನು ಬಂದು ಯೋಗಾ ಕ್ಲಾಸ್‌ಗೆ ಸೇರು ಅದರಿಂದ ಇರಸರಿಕೆ, ನಡವಳಿಕೆ, ಚಿತ್ತಶಾಂತತೆ, ಸಂಯಮ ಎಲ್ಲಾ ಸಿಕ್ಕುತ್ತೆ ಕಣೆ.

ಮಾಲಾ : ಹೌದು ಕಣೇ ನನ್ಗೆ ಈ ವಯಸ್ಸಿಗೆ ನೂರಿಪ್ಪತ್ತು ಖಾಯಿಲೆ. ಕೈ ಕಾಲು ನೋವು. ಕೈಯಲ್ಲಿ ಆಗ್ದೇ ಹೋದ್ದೋನು ಮೈಯಿ ಪರಚಿಕೊಂಡ ಅಂತ. ಕೋಪ ಬರುತ್ತೇ.. ಬರುತ್ತೇ ಅಂದ್ರೆ ಅಷ್ಟಿಷ್ಟಲ್ಲ ಚೆನ್ನಾಗಿ ಕೂಗಿ ಕಿರುಚಿ ಮಾಡಿ ಬಿಡ್ತೀನಿ. ತಕ್ಷಣ ಬಿ.ಪಿ. ಏರುತ್ತೆ.

ಸುಮ : ಅಯ್ಯೋ... ಅಯ್ಯೋ... ಯಾಕೆ ಹಾಗೆ ಮಾಡ್ತೀಯ. ನಾನು ಹೇಳ್ದ

ಹಾಗೆ ಮಾಡು. ಬಂದು ನಾಳೇನೇ ಕ್ಲಾಸ್‌ಗೆ ಸೇರಿಕೋ. ಒಂದು ತರಹ ಚೆನ್ನಾಗಿರುತ್ತೆ.

ಮಾಲಾ : ಹೂಂ... ನೋಡ್ತೀನಿ. ಎಲ್ಲಾ ಸರಿ. ನೀನು ಏನೇನು ಆಸನ ಮಾಡ್ತೀಯೆ? ಪ್ರಾಣಿಗಳ ಹೆಸರಿನ ಆಸನ ಇರುತ್ತಂತೆ. ಹಾಗಾದ್ರೆ ನೀನು ಪ್ರಾಣಿ ಆಗಿ ಬಿಡ್ತೀಯ ಅನ್ನು.

ಸುಮ : ಅಯ್ಯೋ... ನಿನ್ನ ಬುದ್ಧಿಗೆ ಏನ್ ಹೇಳ್ಲಿ. ಪ್ರಾಣಿ ಆಸನ ಮಾಡ್ದ್ರೆ ಪ್ರಾಣಿ ಆಗುಕ್ಕೆ ಆಗುತ್ತೇನೇ? ಪ್ರಾಣಿಗಳಂತೆ ಒಳ್ಳೆ ಬುದ್ಧಿ ಕಲಿತು ಆರೋಗ್ಯವಾಗಿ ಚೆನ್ನಾಗಿ ಇರಬಹುದು ಅಷ್ಟೆ.

ಮಾಲಾ : ಓ... ಅಷ್ಟೇನಾ? ನಾನು ಏನೋ ಅಂತ ಇದ್ದೆ. ಹೋಗ್ಲಿ ಅದ್ಯಾವ ಪ್ರಾಣಿ ಹೆಸರಿನ ಆಸನಗಳು ಹೇಳೆ ?

ಸುಮ : ಅದೇ ಕಣೆ ಮಂಡೂಕಾಸನ, ಮಯೂರಾಸನ, ಮತ್ಸ್ಯಾಸನ, ಸಿಂಹಾಸನ, ಚತುರ್ ಪಾದಾಸನ, ಕುಕ್ಕಟಾಸನ, ಶ್ವಾನಾಸನ, ಹೀಗೇ ಇನ್ನು ಏನೇನೋ....

ಮಾಲಾ : ಹಾಗಾದ್ರೆ ಕತ್ತೆ ಆಸನ ಅಂತ ಇಲ್ವೇನೆ ? ಅಲ್ಲಾ ಸಂಸ್ಕೃತ ಪದ ಗಧಾಸನ ಅಂತ ?

ಸುಮ : ಹೋಗೇ ನಿನಗೆ ತಮಾಶಿ ಅನ್ನಿಸುತ್ತೆ, ನಿನ್‌ಗೇನು ಗೊತ್ತು....? ಈ ಆಸನಗಳಿಂದ ಆಗುವ ಉಪಯೋಗ ? ಮಾಡುವಾಗ ಆಸನಗಳಲ್ಲಿ ಸಿಕ್ಕುವ ಆನಂದ, ಅದರ ಫಲ ಹೇಳೋಕ್ಕೆ ಆಗುಲ್ಲ.

ಮಾಲಾ : ಏನೋಪ್ಪ ನನಗಂತೂ ಗೊತ್ತಾಗುಲ್ಲ, ಮನೆಯಲ್ಲಿ ಹಾಯಾಗಿ ಇರದೇ ಮೈಯಿ ಕೈಯಿ ನೋಯಿಸಿಕೊಂಡು, ದುಡ್ಡು ಬೇರೆ ಕೊಟ್ಟು ಹುಚ್ಚು ಹಿಡಿಸಿಕೊಂಡ ಹಾಗೆ.

ಸುಮ ಹಾಗೆನ್ನಬೇಡ್ವೆ ನಮ್ಮ ಪುರಾತನ ಪದ್ಧತಿಗಳಲ್ಲಿ ತುಂಬ ಸತ್ವ ಇದೆ, ಆಯುರ್ವೇದ ಔಷದಿ ಪದ್ಧತಿ ಈಚೆಗೆ ಹೊರ ದೇಶಗಳಲ್ಲೂ ಪ್ರಸಿದ್ಧವಾಗಿದೆ, ಋಷಿಮುನಿಗಳ ಕಾಲದಿಂದ ಯೋಗಾಸನ, ಪ್ರಾಣಾ ಯಾಮ ನಡೆದು ಬಂದಿದೆ.

ಮಾಲಾ : ಇಲ್ಲಾ ಕಣೇ ನಂಗೇನೋ ನಂಬಿಕೆ ಇಲ್ಲ, ಈ ಇಂಗ್ಲೀಷ್ ಔಷಧಿ ಗಳಲ್ಲಿ ಬೇಗ ವಾಸಿ ಆಗುವ ಹಾಗೆ ಅದರಲ್ಲಿ ಎಲ್ಲಿ ಆಗುತ್ತೆ.

ಸುಮ : ನೀನು ತಪ್ಪು ತಿಳಿದುಕೊಂಡಿದ್ದೀಯ... ಸ್ವಲ್ಪ ನಿಧಾನ ಅನಿಸಿದರೂ, ಆಯುರ್ವೇದ ರೋಗಗಳನ್ನು ಸಂಪೂರ್ಣ ವಾಸಿಮಾಡಿ, ಶರೀರದ ಬೇರೆ ಭಾಗಗಳಿಗೆ ತೊಂದರೆ ಕೊಡದೇ ರಕ್ಷಣೆ ಮಾಡುತ್ತೆ.

ಮಾಲಾ : ಅದೂ ಸರಿ, ಈಗಿನ ಕಾಲದಲ್ಲಿ ಔಷಧಿ ಉಪಚಾರಕ್ಕೆ ತುಂಬ ಖರ್ಚು ಆಗುತ್ತೆ. ಮಾತೆತ್ತಿದ್ದರೆ ಆಪರೇಶನ್‌ಗಳು, ಅಬ್ಬಾ ಆಪರೇಶನ್ ಅಂದರೆ ಹೆದರಿಕೆ.

ಸುಮ : ಹೌದು ಕಣೆ. ಅಂತಹ ಉಲ್ಬಣ ಅವಸ್ಥೆಗೆ ಬರದಂತೆ ಯೋಗಾಸನ ದಲ್ಲಿ ರೋಗಗಳನ್ನು ತಡೆಯುತ್ತೆ. ಆಯಸ್ಸು ಹೆಚ್ಚಾಗುತ್ತೆ. ಎಲ್ಲದಕ್ಕಿಂತ ಮನಸ್ಸಿಗೆ ಉಲ್ಲಾಸ ಸಿಕ್ಕುತ್ತೆ. ಒಳ್ಳೆಯದನ್ನು ಯೋಚಿಸುವ ಶಕ್ತಿ ಬರುತ್ತೆ, ಕೋಪತಾಪ ಕಡಮೆ ಆಗುತ್ತೆ.

ಮಾಲಾ : ಓ... ಓಂ... ಸಾಕು ಸಧ್ಯ ನಿಲ್ಸೆ, ಏನು ಬ್ರೇಕ್ ಇಲ್ಲದ ಹಾಗೇ ಮಾತು ಆಡ್ತಾ ಇದ್ದೀಯಾ...

ಸುಮ : ಹೂಂ... ಕಣೇ ನನಗೆ ಹಾಗೆ ಯೋಗ ಅಂದರೆ ತುಂಬ ಇಷ್ಟ. ಕ್ಲಾಸಿನ ಹೊತ್ತು ಬಂದು ಬಿಟ್ಟರೆ ಮನೆ ಕೆಲಸ ಎಲ್ಲಾ ಬಿಟ್ಟು ಓಡೋಡಿ ಬಂದು ಬಿಡುತ್ತೇನೆ.

ಮಾಲಾ : ನೀನು ಹೇಳೋದು ಕೇಳಿದರೆ ನಾನೂ ಬಂದರೂ ಬರಬಹುದು ಅಂತ ಅನ್ನಿಸುತ್ತೆ, ಯೋಚಿಸುತ್ತೇನೆ.

ಸುಮ : ಯೋಚ್ನೆ ಮಾಡು, ಇಲ್ಲದೇ ಹೋದರೆ ಒಬ್ಬ ಜ್ಯೋತಿಷಿಯನ್ನು ಭೇಟಿ ಮಾಡಿ, ಲಗ್ನ ಇಡಿಸಿ ನೋಡಿ ಬಾರೇ.

ಮಾಲಾ : ಥೂ... ಹೋಗೇ... ನಿನಗೆ ನಾನು ಅಂದ್ರೆ ಹೀಗೆ ಹಾಸ್ಯ.

ಸುಮ : ಮಾಲಾ... ಬರಿ ಆಸನಗಳನ್ನು ಮಾಡುವುದು ಒಂದೇ ಅಲ್ಲ. ಅದರ ಜೊತೆ ಪ್ರಾಣಾಯಾಮ, ಮಿತ ಆಹಾರ, ಪುಷ್ಠಿಯಾದ ಆಹಾರ, ವಿಹಾರ, ಶಿಷ್ಠರ ಸ್ನೇಹ, ಭಜನೆ, ದೇವರ ಧ್ಯಾನ ಮಾನ ಇವುಗಳು ತುಂಬ ಮುಖ್ಯ. ನಾವು ದೊಡ್ಡವರು, ನಮ್ಮ ಜೀವನಕ್ಕೆ ಇದ್ನೆಲಾ ಅಳವಡಿಸಿ ಕೊಂಡರೆ, ನಮ್ಮ ಮಕ್ಕಳು ಸ್ನೇಹಿತರು, ನಮ್ಮ ಜೊತೆ ಇರುವವರು ಎಲ್ಲರಿಗೂ, ಬೋಧನೆ ಮಾಡಬಹುದು.

ಮಾಲಾ : ನೀನೂ ಸರಿ... ನೀನು ಬೋಧನೆ ಮಾಡಿದರೆ ಕೇಳುವವರ್‍ಯಾರು ? ಎಲ್ಲವುದಕ್ಕೂ ಪುರಸತ್ತು ಎಲ್ಲಿ ? ಜನಗಳಿಗೆ ವ್ಯಾಪಾರ ಹಣ ಸಂಪಾದನೆ ಒಂದೇ ಧ್ಯೇಯ ಅದಕ್ಕೆ ಹೊತ್ತು ಸಾಲದು ಎಷ್ಟಿದ್ದರೂ ಸಾಲದು, ಈ ತುಟ್ಟಿ ಕಾಲದಲ್ಲಿ.

ಸುಮ : ಹೌದು ನಿಜ... ಆದರೆ ದುರಾಸೆ ಇರಬಾರದು. ತೃಪ್ತಿ ಇರಬೇಕು. ದೇವರು ಕೊಟ್ಟಷ್ಟು, ಸಾಕು ಅಂತ ಅಂದುಕೊಳ್ಳಬೇಕು, ಮಾಲಾ... ಬಾರೇ, ಪ್ರೋಗ್ರಾಮ್ ಶುರುವಾಗಿದೆ.

ಸುಮ : ಹೂಂ... ಕಣೇ ಬಾ ಹೋಗೋಣ... ಬಾರೇ ನಾವು ಒಳ್ಳೆ ಸಮಯಕ್ಕೆ ಬಂದಿದ್ದೇವೆ.

ಮಾಲಾ : ಇದೇನೇ...? ಇವರು ತಲೆ ಮೇಲೆ ನಿಂತಂತಿದೆ ಬಿದ್ರೆ ಗತಿ ಏನೆ ?

ಸುಮ : ನೋಡದ್ಯಾ ಅದನ್ನೇ ನಾನು ಹೇಳಿದ್ದು, ಎಷ್ಟು ಅದ್ಭುತ ಇದನ್ನೇ ಶಿರಸಾಸನ ಅಂತ ಅಂತಾರೇ, ದೇಹಕ್ಕೆ ಒಳ್ಳೆ ಸುಖ ಶಾಂತಿ ಸಿಕ್ಕುತ್ತೆ.

ಮಾಲಾ : ಅಯ್ಯಯ್ಯೋ... ತಲೆ ಕೆಟ್ಟು ಹೋಗುತ್ತೆ ಅಷ್ಟೆ ಬಾರೇ ವಾಪಸ್ ಹೋಗೋಣ, ಇಲ್ಲಾ ತಡಿ ಇನ್ನೂ ಪ್ರಾಣಿ, ವೃಕ್ಷ ಎಲ್ಲಾ ನೋಡಿಯೇ ಹೋಗೋಣ, ಇನ್ನೂ ಹುಚ್ಚು ಹಿಡಿದೇ ಬಿಡಲಿ.

ಸುಮ : ಸಧ್ಯ ನಿನಗೆ ಅಷ್ಟಾದರು ಆಸಕ್ತಿ ಬಂತಲ್ಲಾ

ಮಾಲಾ : ಹೌದು ಕಣೇ ನೋಡೇ ಕಪ್ಪೆ ತರಹವೇ ಕಾಣ್ತಾರೆ. ನೋಡೇ ಹೇಗೆ ಮೊಸಳೆ ಹಾಗೇ ಓಹೋ ಸಿಂಹದ ಘರ್ಜನೆ. ನಾಯಿ ತರಹ ನಾಲಿಗೆ ಚಾಚಿ ಹೈ ಹೈ ಅಂತ ಅದೇ ಸದ್ದು, ಉಸಿರಾಟ.

ಸುಮ : ಹೌದು ಕಣೇ ಒಂದು ತರಹ ಖುಷಿ ಆಗುತ್ತೆ ಅಲ್ವಾ

ಮಾಲಾ : ಹೇಗೂ ಪ್ರಾಣಿ, ಪರಿಸರ ನಮ್ಮ ಜೀವನದಲ್ಲಿ ಹಾಸುಹೊಕ್ಕಿದೆ ಅಲ್ಲವೇನೆ ?

ಸುಮ : ಅಂದ ಹಾಗೇ ವೇದಿಕೆ ಮೇಲೆ ನೋಡೇ ವೃಕ್ಷಾಸನ ಮರದ ಹಾಗೇ ಕಾಣೋಲ್ವ.

ಮಾಲಾ : ಹೌದು ಕಣೆ ವೃಕ್ಷ, ಹೂವು ಹಣ್ಣು ಅವೆಲ್ಲಾ ಯಾವಾಗಲೂ ನಮ್ಮ ಸಂಗಡ, ಅವು ಇಲ್ಲದೇ ನಾವಿಲ್ಲ ನಾವಿಲ್ಲದೇ ಅವುಗಳು ಇಲ್ಲ.

ಸುಮ : ಅಷ್ಟೇ ಅಲ್ಲ ಕಣೇ ಈಗ ನೋಡು ಹನುಮಾಸನ ಮಾಡ್ತಾ ಇದ್ದಾರೆ ಆಂಜನೇಯ ಗಾಳಿಯಲ್ಲಿ ಹಾರಿ ಹೋಗುವ ಹಾಗೇ ಇದೆ, ಭಾರದ್ವಾಜ ಆಸನ ಋಷಿಮುನಿಗಳ ಹೆಸರು.

ಮಾಲಾ : ನೀನು ಅದರಲ್ಲಿ ತುಂಬ ಮುಳುಗಿದೀಯಾ ಅದಕ್ಕೆ ನಿನಗೆ ಎಷ್ಟು ಆನಂದ ಸಿಕ್ಕುತ್ತೆ ನೋಡು, ನಿನ್ನ ನೋಡಿದ್ರೆ ನಾನು ಏಕೆ ಹಾಗಿಲ್ಲ ಅಂತ ಅನ್ನಿಸುತ್ತೆ.

ಸುಮ : ಸುಖ ಸಂತೋಷ ಉತ್ಸಾಹ ಎಲ್ಲಾ ನಾವೇ ತಂದುಕೊಳ್ಳಬೇಕು. ಯಾವಾಗಲೂ ನಗುತ್ತ ಇರಬೇಕು ಅದೇ ಆರೋಗ್ಯದ ಗುಟ್ಟು.

ಮಾಲಾ : ನಮ್ಮ ಮನೆ ಎದುರಿಗೆ ಪಾರ್ಕ್‌ನಲ್ಲಿ ಲಾಫಿಂಗ್ ಕ್ಲಬ್ ಅಂತ ಜನ ಸೇರುತ್ತಾರೆ ಒಳ್ಳೆ ತರಹಾವರಿ ನಗು ನೋಡಿದರೆ ಏನಾದರು ಅವರಿಗೆ ಹುಚ್ಚು ಹಿಡಿದಿದ್ದೀಯಾ ಅಂತ ಅನ್ನಿಸುತ್ತೆ.

ಸುಮ : ಇಲ್ಲ ಕಣೇ ದಿನ ಬೆಳಗ್ಗೆ ಅಷ್ಟು ವ್ಯಾಯಾಮ ಮಾಡಿ ಬಂದರೆ ದಿನವೆಲ್ಲಾ ಲವಲವಿಕೆಯಿಂದ ಇರಬಹುದು ಗಂಡಂದಿರು ಮಕ್ಕಳು ಸಂಸಾರ, ಸಿಡಿಮಿಡಿ ಗುಟ್ಟುವುದು ಅದರಲ್ಲೇ ಸುಖ ಸಂತೋಷ ಕಾಣಬಹುದು.

ಮಾಲಾ : ಸುಮ ನಾನು ಮರತೇ ಬಿಟ್ಟಿದ್ದೆ ಕಣೇ ನಾಳೆ ಕಿಟ್ಟಿ ಪಾರ್ಟಿ ಇದೇ ಕಣೇ ಹೊಸ ಟೈಪಿನ ಸೀರೆ ತೆಗೆದುಕೊಳ್ಳಬೇಕು. ಅಲ್ಲಿ ನಾನು ಸ್ಪೆಷಲ್ ಆಗಿ ಕಾಣಬೇಕು. ಎಲ್ಲರೂ ನನ್ನನ್ನೇ ನೋಡ್ತಾ ಇರಬೇಕು. ಹೊಗಳಬೇಕು, ಎಷ್ಟು ಚೆನ್ನ ಅಲ್ವಾ. ನಿನಗೇನ್ ಅನ್ನಿಸುತ್ತೆ.

ಸುಮ : ಸರಿ ಕಣೇ ಹಾಗಾದ್ರೆ ನೀನು ಹೋಗೆ, ನನ್ನ ನಿನ್ನ ಸ್ವಭಾವ ಹೊಂದುಲ್ಲ. ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ.

ಮಾಲಾ : ಹಾಗೆನ್ನಬೇಡವೇ, ನೋಡ್ತೀನಿ ಇಷ್ಟು ಹೇಳಿದ್ದೀಯಾ ನಾನು ನಾಳೇನೇ ಬಂದು ಕ್ಲಾಸ್‌ಗೆ ಸೇರ್‍ತೀನಿ. ಆದರೆ ದೇವ್ರಿಗೆ ಗೊತ್ತು ನನ್ನ ಕೈಯಲ್ಲಿ ಆಗುತ್ತೋ ಆಗುಲ್ವೋ.

ಸುಮ : ಯಾಕೆ ಆಗುಲ್ಲ, ಇದೇ ಇನ್ನೊಂದು ವರುಷಕ್ಕೆ ನೋಡ್ತಾ ಇರು. ನೀನು ನನ್ನ ಅಪ್ಪ ಆಗಿರ್‍ತೀಯ. ನನಗೆ ಪಾಠ ಹೇಳ್ತೀಯ.

ಮಾಲಾ : ಹೂಂ ಹಾಗೇ ಆಗಲಿ, ಇವತ್ತಿಗೆ ಸಾಕು ಮಾಡೋಣ, ನಾನು ಹೊರಡ್ತೀನಿ, ಟಾ...ಟಾ...

ಸುಮ : ಈ ಇದು ಸ್ನೇಹ ಮಿಲನ, ಇಬ್ಬರು ಸ್ನೇಹಿತೆಯರು ದಾರಿ ಬೇರೆ ಆದರೂ ಒಬ್ಬರನೊಬ್ಬರು ಹೊಂದಿಕೊಂಡು ಕೆಲವು ನಮ್ಮ ಇಷ್ಟದಂತೆ ಕೆಲವು ಅವಳ ಇಷ್ಟದಂತೆ ಒಂದಾಗಿ ಹಸ್ತಗಳನ್ನು ಬೆಸೆಯೋಣ ಹೂಂ... ಹೋಗಿ ಬಾರೇ, ಆಗ ಈಗ ಬರ್‍ತಾ ಇರು. ನಮ್ಮ ಸ್ನೇಹ ಹೀಗೆ ಇರಲಿ, ಬಾಯ್...

೦ ೦ ೦

ಚಿಕ್ಕಮೂರ್ತಿ - ದೊಡ್ಡ ಕೀರ್ತಿ

ದೇವೇಂದ್ರ : (ಬೃಹಸ್ಪತ್ಯಾಚಾರ್ಯರೊಡನೆ ಸಂಭಾಷಣೆ) ಆಚಾರ್ಯಾ ! ಕೇಳಿದಿರಾ... ಶತಾಶ್ವಮೇಧಯಜ್ಞವನ್ನು ಮಾಡುವ ದೀಕ್ಷೆಯಿಂದ ಬಲೀಂದ್ರನು ಈಗಾಗಲೇ ತೊಂಬತ್ತೊಂಭತ್ತು ಯಾಗಗಳನ್ನು ಪೂರೈಸಿದ್ದಾನೆ. ಇನ್ನೊಂದು ಯಾಗ ಪೂರೈಸಿದರೆ ನನ್ನ ಇಂದ್ರ ಪದವಿಗೆ ತಿಲಾಂಜಲಿ ಇಟ್ಟಂತಯೇ ಅಲ್ಲವೆ ?

ಬೃಹಸ್ಪತ್ಯಾಚಾರ್ಯ : ಹೌದು ದೇವೇಂದ್ರ ! ಆ, ದಾನವೇಂದ್ರ ಮಹಾಸಾಹಸಿ, ಮಹಾಭಕ್ತನೂ ಅಹುದು. ದಾನವನಾದರೂ ಅವನ ರಕ್ತದಲ್ಲಿ ಭಕ್ತಿ ಹರಿಯುತ್ತಿದೆ. ಎಷ್ಟೇ ಆದರೂ ಪ್ರಹ್ಲಾದನ ಮೊಮ್ಮಗನಲ್ಲವೆ ? ಶ್ರೀ ಹರಿಯ ಕೃಪೆಯಿಂದ ದೇವತೆಗಳಿಗೆ ತೊಂದರೆ ಆಗಲಾರದೆಂದು ಭಾವಿಸಿದ್ದೇನೆ.

ದೇವೇಂದ್ರ : ಆತ ಉಳಿದಿರುವ ಒಂದು ಯಜ್ಞವನ್ನು ಪೂರೈಸಿದನೆಂದರೆ ನಾನು ಅವನ ದಾಸಾನುದಾಸನಾಗಬೇಕು. ಈ ಪರಿಸ್ಥಿತಿಯನ್ನು ನಾನು ಹೇಗೆ ಸಹಿಸಲಿ! ಆಚಾರ್ಯ?

ಬೃಹಸ್ಪತ್ಯಾಚಾರ್ಯ : ಅದು ನನಗೆ ಚೆನ್ನಾಗಿ ಗೊತ್ತು ದೇವೇಂದ್ರ ! ಅದಕ್ಕಾಗಿಯೇ ಅಲ್ಲವೆ ನಾವೆಲ್ಲಾ ನಮ್ಮ ಮಹಾಮಾತೆಯಾದ ಅದಿತಿ ದೇವಿಯನ್ನು ಮೊರೆ ಹೊಕ್ಕಿದ್ದು... ಅದಿರಲಿ ! ದೇವೇಂದ್ರಾ !... ಕೇಳಿದೆಯಾ ?.... ಅದಿತಿದೇವಿಯಲ್ಲಿ ಪುತ್ರರತ್ನ ಜನನವಾಗಿದೆಯಂತೆ !

ದೇವೇಂದ್ರ : ಕೇಳಿದೆ ಆಚಾರ್ಯ ! ಸ್ವಯಂ ಶ್ರೀ ಹರಿಯೇ ಅದಿತಿಯ ಗರ್ಭದಿಂದ ಜನ್ಮ ವೆತ್ತಿದ್ದಾನೆಂದು ನಮ್ಮ ಭಾವನೆ. ಏನೇ ಆದರೂ, ಇದೆಲ್ಲಾ ಗೋಪ್ಯವಲ್ಲವೆ?

ಬೃಹಸ್ಪತ್ಯಾಚಾರ್ಯ : ದೇವೇಂದ್ರ !... ಇನ್ನು ನಿರ್ಭೀತನಾಗಿರು. ನಿನ್ನ ಕಾರ್ಯ

ಶೀಘ್ರವಾಗಿ ನೆರವೇರುತ್ತದೆ. ಸ್ವಯಂ ಶ್ರೀ ಹರಿಯೇ ಕಾರ್ಯನಿರತನಾಗಿದ್ದಾನೆ !...

ದೇವೇಂದ್ರ : ಹೂ.... ಒಂದೇ ಒಂದು ಯಾಗ ಉಳಿದಿದೆ. ಅದು ಮುಗಿಯುವ ಮುನ್ನವೇ ನಮ್ಮ ಕಾರ್ಯವಾಗಬೇಕಲ್ಲವೇ ? ಯಾಗ ಮುಗಿದು ಬಿಟ್ಟರೆ ಯಾರು ಏನೂ ಮಾಡುವಂತಿಲ್ಲ. ನನ್ನ ಆತಂಕ ಹೆಚ್ಚುತ್ತಿದೆ. ಆದರೂ ಕಾದು ನೋಡದೆ ವಿಧಿಯಿಲ್ಲ.

ಬೃಹಸ್ಪತ್ಯಾಚಾರ್ಯ: ಅದು ನಿಜ. ಕಾದು ನೋಡಲೇಬೇಕಾದ ಸ್ಥಿತಿ ಇದೆ... ಭಯ ಪಡಬೇಡ ದೇವೇಂದ್ರ !... ಶ್ರೀ ಹರಿ ಇದ್ದಾನೆ... ನಾನಿನ್ನು ಬರುತ್ತೇನೆ... (ನಿರ್ಗಮನ)

(ಅದಿತಿ ದೇವಿಯ ಆಶ್ರಮ ಶಾಲೆ, ತಾಯಿ ಮಗನ ಸಂಭಾಷಣೆ)

ಮತ್ತೊಂದು ದೃಶ್ಯ

ಅದಿತಿದೇವಿ : ಮಗೂ ! ನಾನು ಧ್ಯಾನಮಗ್ನಳಾಗಿ ಶ್ರೀ ಮನ್ನಾರಾಯಣನನ್ನು ಸ್ಮರಿಸಲು ಯತ್ನಿಸಿದರೆ, ನೀನೇ ಮುಂದೆ ಬಂದಂತಾಗುತ್ತದೆ... ಇದಕ್ಕೆ ಕಾರಣವೇನಿರಬಹುದು?

ಮಗ (ವಾಮನ) : ಅದು ಸರಿ ತಾಯೇ ! ಎಲ್ಲರೂ ನಿನ್ನನ್ನು 'ದೇವಮಾತೆ' ಎಂದೇ ತಿಳಿದಿರು ತ್ತಾರೆ. ಈ ನಿನ್ನ ಪುತ್ರನೂ ನಿನ್ನ ಒಬ್ಬ ದೇವಪುತ್ರನೇ ಅಲ್ಲವೇ ?.. ನನ್ನನ್ನು ಪಡೆಯಲು ನೀನು ರಹಸ್ಯವಾಗಿ ತಪಸ್ಸು ಮಾಡಿದ್ದನ್ನು ಮರೆತೆಯಾ ? ದೇವತೆಗಳು ಉದ್ಧಾರವಾಗಬೇಕಷ್ಟೆ ? ಆದುದರಿಂದ ನನ್ನಲ್ಲಿ ನಿನಗೆ ಹೆಚ್ಚು ವಾತ್ಸಲ್ಯ ಬರುವುದು ಖಂಡಿತಾ !

ಅದಿತಿದೇವಿ : ಸದ್ಗತಿಯನ್ನು ಪಡೆಯಲು ಬೇರೆ ಮಾರ್ಗವೆಲ್ಲಿ ಮಗೂ !... ಶ್ರೀಮನ್ನಾರಾಯಣನನ್ನು ಮನಸಾರ ಧ್ಯಾನಿಸುತ್ತಿರಬೇಕು. ನೀನು ಧ್ಯಾನಮಧ್ಯದಲ್ಲಿ ನನ್ನ ಮುಂದೆ ಬಂದರೆ ಅದೇನು ಸ್ವರ್ಣ ಶೃಂಖಲೆಯೋ ಏನೋ ತಿಳಿಯದು ಅದಕ್ಕಾಗಿ ಹೇಳಿದೆ.

ವಾಮನ : ಚಿಂತೆಇಲ್ಲ ತಾಯೇ ಈ ವಾಮನ ನಾಮಧೇಯ ಉಳ್ಳ ಪುತ್ರ ಯಾರೆಂಬುದು ನಿನಗೆ ಗೊತ್ತೇ ಇದೆ. ಶ್ರೀ ಹರಿಯು ಬೇರೆಲ್ಲಿದ್ದಾನೆ?

ಅದಿತಿ : ಧನ್ಯ ಧನ್ಯ ! ನಿಜ ಮಗೂ, ನಿನ್ನನ್ನು ಪಡೆದು ನನಗೆ ಸರ್ವಸ್ವವೂ ಬಂದಂತಾಯಿತು. ಅದಿರಲಿ ! ನಿನ್ನ ಉಪನಯನವಾಗಬೇಕಲ್ಲವೆ ? ನಿನ್ನ ತಂದೆ ಎಲ್ಲೋ ಅದೃಶ್ಯ ಲೋಕದಲ್ಲಿದ್ದಾರೆ. ಅವರನ್ನು ಕರೆ

ತರುವ ಬಗೆ ಹೇಗೆ ?

ವಾಮನ : ಚಿಂತಿಸಬೇಡ ತಾಯೇ ! ನಾನೇ ಅವರಲ್ಲಿಗೆ ಹೋಗುವೆ. ಉಪನೀತನಾಗುತ್ತೇನೆ. ದೇವಕಾರ್ಯದ ಸಮಯ ಸಮೀಪವಾಗುತ್ತಿದೆ... ನಾನು ಬರುತ್ತೇನೆ ತಾಯಿ !.... |ಹರಸಿ ಬೀಳ್ಕೊಡು....

ಅದಿತಿ : ಮಂಗಳವಾಗಲೀ ಮಗೂ... ಹೋಗಿಬಾ... (ನಿರ್ಗಮನವಾದಂತೆ)

ವಾಮನ : (ದಾರಿ ನಡೆಯುತ್ತಿದ್ದಂತೆ ತನ್ನಲ್ಲಿ ತಾನು ಮಾತನಾಡುತ್ತಾನೆ) ಬಲೀಂದ್ರ ಮಹಾಭಕ್ತನೇನೋ ಹೌದು. ಆದರೆ ಇಂದ್ರನ ಪದವಿಯನ್ನು ಬಲಾತ್ಕಾರವಾಗಿ ಆಕ್ರಮಿಸಿ, ಈಗ ಅದನ್ನು ಸುಭದ್ರಗೊಳಿಸುತ್ತಿದ್ದಾನೆ. ಇದೊಂದು ಯಾಗ ಪೂರೈಸಿದರೆ, ಅವನ ಆಶೆ ಪೂರ್ಣವಾಗುವುದು ಖಂಡಿತಾ ! ತಂದೆಯಿಂದ ಉಪನೀತನಾಗಿ ಕೂಡಲೇ ಕಾರ್ಯೋನ್ಮುಖ ನಾಗಬೇಕು. ಬಲೀಂದ್ರನು ಭಕ್ತನಾದರೂ, ದೇವತೆಗಳಲ್ಲಿ ದ್ವೇಷ, ಛಲ ಸಾಧಿಸುತ್ತಿದ್ದಾನೆ. ಇವನ ದಾನವ ಪ್ರವೃತ್ತಿಗೆ ತಡೆ ಹಾಕಲೇ ಬೇಕಲ್ಲವೆ ....?

(ನಡೆಯುತ್ತಾ ಹೋಗುತ್ತಿರುವಂತೆ, ದೂರದೂರ ಶಬ್ದ ಕಡಿಮೆ ಆದಂತೆ)

ಬಲೀಂದ್ರನ ಯಜ್ಞಶಾಲೆ,

ಯಜ್ಞ ಸಂಭ್ರಮಗಳೆಲ್ಲಾ ನಡೆಯುತ್ತಿದೆ. ಹೋಮ ನಡೆಯುತ್ತಿರುವಂತೆ. ಸ್ವಾಹಾ !.... ನಮಮ.... ಭೂರ್ಭುವಸ್ಸುವ ಸ್ವಾಹಾ.... ಪ್ರಾಜಪತೆ ಇದನ್ನ ಮಮ.

ಬಲೀಂದ್ರ : ಓಹೋ !... ಅದೋ ನೋಡಿ, ಆಚಾರ್ಯ... ಯಾರೋ ತೇಜ(ಸ್ವಿ) ಬ್ರಹ್ಮ ಚಾರಿಗಳು ನಮ್ಮ ಆಶ್ರಮದ ಕಡೆ ಬರುತ್ತಿದ್ದಾರೆ. ಅಬ್ಬಾ !.... ಏನು ತೇಜಸ್ಸು! ಈತನ ವರ್ಚಸ್ಸಿನಿಂದ ನನ್ನ ಯಜ್ಞ ಶಾಲೆ ಪಾವನವಾಗುತ್ತದೆ... ಇಲ್ಲೇ ಬರಲಿ!

ಶುಕ್ರಾಚಾರ್ಯ : ಆಹಾ ! ಹೌದು.... ಮಹಾ ತೇಜಸ್ವಿ !! ಮಹಾ ತಪಸ್ವಿಯೂ ಇರಬೇಕು. ಬಾಲ್ಯದಲ್ಲೇ ಮಹತ್ಸಾಧನೆಯನ್ನು ಮಾಡಿದ ಮಹಾಪುರುಷನಂತೆ ಕಾಣುತ್ತದೆ. ಬರಲಿ. ಸತ್ಕರಿಸೋಣ... ಆದರೆ... ಬಲೀಂದ್ರ !.... ಈಗ ನೀನು ನಿನ್ನ ಸಾಧನೆಯ ಅಂತಿಮಘಟ್ಟದಲ್ಲಿ ದ್ದೀಯೇ... ಜಾಗರೂಕನಾಗಿರಬೇಕು... ಯಜ್ಞಭಂಗವಾಗಬಾರದು.

ಮಾಯಾವಿ ದೇವತೆಗಳು ಏನನ್ನಾದರೂ ಮಾಡಿಯಾರು !

ಬಲೀಂದ್ರ : ಈ ಅಂತಿಮ ಯಜ್ಞದಲ್ಲಾದರೂ, ಒಬ್ಬ ತೇಜಸ್ವಿ, ಬ್ರಹ್ಮಚಾರಿ ಬಂದು ನನ್ನ ಯಜ್ಞ ಶಾಲೆಯನ್ನು ಪವಿತ್ರಗೊಳಿಸಿದ್ದಾರೆ. ಈ ತೇಜಸ್ವಿಗೆ ನನ್ನ ಸರ್ವಸ್ವವನ್ನು ಅರ್ಪಿಸಿ ಬಿಡುವ ಮನಸ್ಸಾಗುತ್ತದೆ. ಅವರನ್ನು ಗೌರವದಿಂದ ಸತ್ಕರಿಸಬೇಕಲ್ಲವೆ? ... ಆಚಾರ್ಯಾ !....

ಶುಕ್ರಾಚಾರ್ಯ : ಅದು ನಿಜ... ಬಲೀಂದ್ರ... ಆದರೂ ಜಾಗರೂಕನಾಗಿರಲು ಎಚ್ಚರಿಸಿದ್ದೇನೆ. (ಬ್ರಹ್ಮಚಾರಿ ವಾಮನನ ಪ್ರವೇಶವಾದಂತೆ)

ವಾಮನ : ದಾನವೇಂದ್ರನಿಗೆ ಜಯವಾಗಲಿ ! ಆಚಾರ್ಯರಿಗೆ ಜ್ಞಾನ ವೈರಾಗ್ಯ ಉಂಟಾಗಲಿ! ದಾನವೇಂದ್ರ ಯಜ್ಞವು ಸಾಂಗವಾಗಿ ನೆರವೇರುತ್ತಿದೆಯಷ್ಟೆ?

ಬಲೀಂದ್ರ : ಶ್ರೀ ಹರಿಯ ಕೃಪೆಯಿಂದ ಸಾಂಗವಾಗಿ ನೆರವೇರುತ್ತಿದೆ. ಇತ್ತ ಬನ್ನಿ... ಇದೋ ಅರ್ಘ್ಯ, ಪಾದ್ಯಾದಿಗಳನ್ನು ಸ್ವೀಕರಿಸಬೇಕು... ಇದೋ ಆಸನ, ಕುಳಿತುಕೊಳ್ಳ ಬೇಕು.... ಇಂದು ನನ್ನ ಯಜ್ಞಶಾಲೆ ಪವಿತ್ರವಾಯಿತು. ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಸ್ವೀಕರಿಸಿ ಆಶೀರ್ವದಿಸಿರಿ!

ಬ್ರಹ್ಮಚಾರಿಗಳೆ ! ತಾವು ಎಲ್ಲಿಂದ ಬಂದಿರಿ ! ನಾಮಧೇಯವೇನು ? ನನ್ನಿಂದ ನಿಮಗೇನಾದರೂ ಕಾರ್ಯವಾಗಬೇಕೇ? ನಾನು ಯಜ್ಞದೀಕ್ಷೆಯಲ್ಲಿದ್ದೇನೆಂಬುದು ತಮಗೆ ವೇದ್ಯವಾಗಿದೆ. ಈ ಸ್ಥಿತಿಯಲ್ಲಿ ನಾನು ಮಾಡಬಹುದಾದ ಯೋಗ್ಯ ಸಹಾಯವನ್ನು ಖಂಡಿತಾ ಮಾಡಬಲ್ಲೆ.. ದಯವಿಟ್ಟು ಹೇಳಿರಿ!

ವಾಮನ : ಸಾಧು ! ಸಾಧು !!.... ನಿನ್ನಭಕ್ತಿ ಸಾಮ್ರಾಜ್ಯದಲ್ಲಿ ಬೆಳಗುತ್ತಿರುವ ಯಜ್ಞಕಾರ್ಯವನ್ನು ನೋಡಿ ನನಗೆ ಬಹಳ ಆನಂದವಾಯಿತು. ಶ್ರೀಹರಿಯು ನಿನಗೆ ಅನನ್ಯ ಭಕ್ತಿಯನ್ನು ಕೊಟ್ಟು ಕಾಪಾಡಲಿ!

ನಾನು ಒಬ್ಬ ಬ್ರಹ್ಮಚಾರಿ... ವಾಮನನೆಂದು ನಾಮಧೇಯ... ಈಗ ನಾನು ಒಂದು ಕಾರ್ಯಾರ್ಥಿಯಾಗಿ ಬಂದಿದ್ದೇನೆ. ನಾನು ತಪಸ್ಸನ್ನಾಚರಿಸಬೇಕು. ಸರಿಯಾದ ಆಶ್ರಮವಾಗಲೀ, ಸ್ಥಳವಾಗಲೀ ದೊರಕಲಿಲ್ಲ. ಆದುದರಿಂದ ನಿನ್ನಲ್ಲಿ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಪಡೆಯಲು ಬಂದಿದ್ದೇನೆ. ನಿನಗೆ ಸಮ್ಮತವಿದ್ದರೆ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಕೊಡು ದಾನವೇಂದ್ರಾ! ...

ಬಲೀಂದ್ರ : ಕೃತಾರ್ಥನಾದೆ ! ಧನ್ಯನಾದೆ ! ತಮಗೆ ಮೂರು ಹೆಜ್ಜೆ ನೆಲವನ್ನು ಕೊಡುವುದು ನನಗೆ ಕಷ್ಟವೆ ?... ಅದೂ ಈ ಯಜ್ಞಶಾಲೆಯಲ್ಲಿಕೊಡುವ ದಾನ ಶ್ರೇಷ್ಠ ವಾದುದಲ್ಲವೆ ? ನನ್ನ ಯಜ್ಞವು ಸಾರ್ಥಕವಾಯಿತು. ಇದೋ ದಾನ ಸ್ವೀಕರಿಸಲು ಸಿದ್ಧರಾಗಿ !

(ತಿರುಗಿಕೊಂಡು ಮಾತನಾಡಿದಂತೆ)- ಆಚಾರರೇ ! ನನ್ನ ಕಮಂಡಲ, ತುಳಸೀ ದಳ ಇತ್ಯಾದಿ ದಾನ ಸಾಮಗ್ರಿಗಳನ್ನು ತನ್ನಿ... ಆಚಾರ್ಯರೇ ! ಸಂಕಲ್ಪ ಹೇಳುವರರಾಗಿ...

ಶುಕ್ರಾಚಾರ್ಯ : ಬಲೀಂದ್ರ! ಈ ಯಜ್ಞದ ಸಮಯದಲ್ಲಿ ದಾನ ಮಾಡುವುದೇನೋ ಶ್ರೇಷ್ಠ.... ಸರಿ.... ಆದರೆ... ಆದರೆ ಬಲೀಂದ್ರ !.... ಈ ದಾನ ಮಾಡುವುದರಿಂದ ಏನೂ ತೊಂದರೆ ಇಲ್ಲವೆ ?.... ಯಜ್ಞಕಾರ್ಯಕ್ಕೆ ಭಂಗವೇನೂ ಇಲ್ಲವೆ ?.... ಆಲೋಚಿಸು!

ಬಲೀಂದ್ರ : (ಚಕಿತನಾದವನಂತೆ) ಏನು ಆಚಾರ್ಯರೆ ?.... ಇಂದು ನೀವೇಕೋ ಬಹಳ ತಾಮಸಿಗಳಾದಂತೆ ಕಾಣುತ್ತೀರಿ. ಈಗ ದಾನ ಮಾಡುವುದೂ ಕರ್ತವ್ಯವಲ್ಲವೆ ? ಮೇಲಾಗಿ, ಈ ತೇಜಸ್ವಿ ಬ್ರಹ್ಮಚಾರಿ ಹೆಸರಿಗೆ ತಕ್ಕಂತೆ ಚಿಕ್ಕಮೂರ್ತಿ... ಮೂರು ಹೆಜ್ಜೆ ಭೂಮಿ ಎಷ್ಟಾದೀತು ? ನಾನು ದಾನ ಮಾಡುವ ವಚನ ಬದ್ಧನಾಗಿದ್ದೇನೆ.

ಶುಕ್ರಾಚಾರ್ಯ : (ಬಲೀಂದ್ರನನ್ನು ಒಂದು ಪಕ್ಕಕ್ಕೆ ಕರೆದು ಕೊಂಡು ಹೋಗಿ ಗುಟ್ಟಾಗಿ ಮಾತನಾಡುವಂತೆ).... ಬಲೀಂದ್ರ ! ಇದರಲ್ಲಿ ಏನೋ ರಹಸ್ಯವಿದೆ. ಯಜ್ಞಕ್ಕೆ ವಿಘ್ನ ತರುವ ಯಾವುದೋ ಹಂಚಿಕೆ ನಡೆಯುತ್ತಿರುವ ಅನುಮಾನವಾಗುತ್ತಿದೆ... ನಿಧಾನಮಾಡು !.... ಯೋಚಿಸು !!

ಬಲೀಂದ್ರ : ಗುರುವರ್ಯಾ ! ಯಜ್ಞ ಕಾಲದಲ್ಲಿ ದಾನ ಮಾಡುತ್ತಿರುವ ನನ್ನನ್ನು ಯಾವ ವಿಧದಲ್ಲಿಯೂ ತಡೆಯಲಾಗದು. ಶ್ರೀಹರಿಯ ಪ್ರೀತಿಗಾಗಿ ಸಲ್ಲಿಸುವ ಈ ದಾನವು ನಮಗೆ ಶ್ರೇಯಸ್ಕರವೆಂಬುದು ಖಂಡಿತ. ಶ್ರೀ ಹರಿಯನ್ನೇ ನಂಬಿ ನಮ್ಮ ಪಿತಾಮಹರಾದ ಪ್ರಹ್ಲಾದರು ಸಾಯೋಜ್ಯವನ್ನು ಪಡೆಯಲಿಲ್ಲವೆ ?....

ಇದೋ ಕಮಂಡಲ ಬಂದಿತು. ಆಚಾರ್ಯಾ ! ಸಂಕಲ್ಪವನ್ನು ಹೇಳೋಣವಾಗಲಿ!

(ಸಂಕಲ್ಪ ಹೇಳುತ್ತಾ ಆಚಾರ್ಯರು ಅದೃಶ್ಯರಾದಂತೆ)

ವಾಮನ : ಧನ್ಯ ! ಧನ್ಯ!! ಬಲೀಂದ್ರ !... ನಿನ್ನ ಈ ದಾನವು ಜಗದ್ವಿಖ್ಯಾತವಾಗಲಿ ! ಈ ದಾನವು ನಿನ್ನ ಕೀರ್ತಿಯನ್ನು ಅಮರವನ್ನಾಗಿ ಮಾಡಲಿ... ದಾನವೇಂದ್ರ... ಇದೋ ನೋಡು... ಮೂರು ಹೆಜ್ಜೆ ಇಡುವೆ...

(ವಾಮನಾಕಾರವು ಬೃಹದಾಕಾರವಾಗಿ ಬೆಳೆಯುವ ಸಂಭ್ರಮವನ್ನು ತೋರಿಸುವುದು)

ದೊಡ್ಡ ಆಕಾರಕ್ಕೆ ತಕ್ಕಂತೆ ಧ್ವನಿ ಬದಲಾವಣೆಯನ್ನೂ ಮಾಡಿಕೊಂಡು : ಆಚಾರ್ಯಾ!

ಶುಕ್ರಾಚಾರ್ಯ: (ಎಲ್ಲಿಂದಲೋ ಬಂದವನಂತೆ).... ಅಹೋ... ನಾರಾಯಣ!....

ನಿನಗೆ ಮೂರು ಹೆಜ್ಜೆ ಭೂಮಿಯು ದಾನವಾಗಿ ಸಿಕ್ಕಿತು. ನೀನು ಭೂಮ್ಯಾಕಾಶಗಳನ್ನು ಒಂದು ಮಾಡುವಂತೆ ಬೆಳೆದೆ... ದಾನವೇಂದ್ರ! ... ಮೋಸ... ಮೋಸ ವಾಯಿತು!... ಇದೋ ನೋಡು, ದೇವತೆಗಳು ನಿನ್ನ ಯಜ್ಞವನ್ನು ಭಂಗ ಮಾಡಲು ಶ್ರೀಮನ್ನಾರಾಯಣನನ್ನೇ ದಾನಕ್ಕಾಗಿ ಕಳುಹಿಸಿದ್ದಾರೆ.... ಅಯ್ಯೋ... ದ್ರಾನ ವೇಂದ್ರ ನೀನು ಕೆಟ್ಟೆ.

ಬಲೀಂದ್ರ : ಆಚಾರ್ಯ !.. ಸಂಕಲ್ಪ ಹೇಳುತ್ತಿದ್ದಂತೆ ಅದೃಶ್ಯರಾಗಿ ಎಲ್ಲಿ ಹೋಗಿದ್ದಿರಿ? .... ಎಲ್ಲಿಂದ ಬಂದಿರಿ?.... ನಿಮ್ಮ ಕಣ್ಣಿನಲ್ಲಿ ಕಣ್ಣೀರೇಕೆ ?.... ಕಣ್ಣಿನಲ್ಲಿ ರಕ್ತತುಂಬಿರುತ್ತಿರುವಂತಿದೆಯಲ್ಲಾ !.... ಇದೆಲ್ಲಾ ಏನು ?.... ಏನಾಗುತ್ತಿದೆ ? ....

ವಾಮನ :(ದೊಡ್ಡ ಧ್ವನಿಯಲ್ಲೇ) ದಾನವೇಂದ್ರ ! ಏನೆಂದು ನಾನೇ ಹೇಳುತ್ತೇನೆ. ನಿನ್ನ ದಾನ ಪಾತ್ರೆಯಾದ ಕಮಂಡಲದ ಗಿಂಡಿಯಿಂದ ನೀರು ಬೀಳದಂತೆ ಆಚಾರ್ಯರು ಅಡ್ಡವಾಗಿ ಹೋಗಿದ್ದರು. ಏಕೆಂದರೆ ನೀರು ಬಿದ್ದರೆ ದಾನಕಾರ್ಯ ಪೂರ್ಣವಾಗಿಬಿಡುತ್ತದೆ. ಆದರೆ ನೀನು ಕಂಡಂತೆ... ನಾನು ಒಂದು ದರ್ಭೆಯಿಂದ ಗಿಂಡಿಯ ಅಡಚಣೆಯನ್ನು ನಿವಾರಿಸಿದೆ. ಆ ಸಂದರ್ಭದಲ್ಲಿ ಆಚಾರ್ಯರ ಒಂದು ಕಣ್ಣು ಹೋಗಿ ಬಿಟ್ಟಿತು. ಅದಕ್ಕಾಗಿ ರಕ್ತ ಹರಿಯುತ್ತಿದೆ. ಈಗ ಶುಕ್ರಾಚಾರ್ಯರಿಗೆ ಒಂದೇ ಕಣ್ಣು!

ಶುಕ್ರಾಚಾರ್ಯ : ... ಶ್ರೀಮನ್ನಾರಾಯಣ !... ಮಾಯಾವಿ?... ವಾಮನನ ರೂಪದಲ್ಲಿ ಬಂದು ಬಲೀಂದ್ರನನ್ನು ವಂಚಿಸಿದ್ದಲ್ಲದೆ, ನನ್ನ ಒಂದು ಕಣ್ಣನ್ನೂ ನೀಗಿದೆ... ಇದಕ್ಕೆ ಕಾರಣವೇನು ?.... ವಂಚನೆ !.... ವಂಚನೆ!! ನಾವು ಮಾಡಿದ ಅಪರಾಧವೇನು? .... ದೇವಾ!!

ಬಲೀಂದ್ರ : ಈ ವಾಮನ ಬ್ರಹ್ಮಚಾರಿಗಳು ಶ್ರೀಮನ್ನಾರಾಯಣನ ಅವತಾರವೆಂದು ಮೊದಲೇ ಗೊತ್ತಿದ್ದರೆ, ಅವರು ಕೇಳುವ ಮುನ್ನವೇ ನನ್ನ ಸರ್ವಸ್ವವನ್ನೂ ಅರ್ಪಿಸಿ ಬಿಡುತ್ತಿದ್ದೆ..... ನಾನು ಧನ್ಯ..... ನನ್ನ ಪಿತಾಮಹನ ಹರಿಭಕ್ತಿಯು. ನನ್ನಲ್ಲಿಯೂ ಹರಿದುಬಂದು, ಈ ಉತ್ತುಂಗ ದಾನವನ್ನು ಮಾಡಿಸಿದೆ...ನನಗೆ ಚಿಂತೆ ಇಲ್ಲ.... ನಾರಾಯಣ!... ನಿನ್ನ ಇಷ್ಟವಿದ್ದಂತಾಗಲಿ ಹೆಜ್ಜೆ ಇಡು.

ಶುಕ್ರಾಚಾರ್ಯ : ನಾರಾಯಣ !.... ನಿನ್ನ ಒಂದೇ ಹೆಜ್ಜೆ ಭೂಮಿಯನ್ನೆಲ್ಲಾ ಅಳೆದು ಬಿಟ್ಟಿತು... ಇದೋ ಎರಡನೆ ಹೆಜ್ಜೆ ಆಕಾಶವನ್ನೆಲ್ಲಾ ಆಕ್ರಮಿಸಿಬಿಟ್ಟಿದೆ. ಮೂರನೇ ಹೆಜ್ಜೆಗೆ ಅವಕಾಶವೆಲ್ಲಿ?... ಬಲೀಂದ್ರ! ನಿನ್ನ ದಾನಪೂರ್ಣವಾಗುವುದಿಲ್ಲ. ನಿನ್ನ ಯಜ್ಞ ಕೆಟ್ಟಿತು. ನಿನ್ನದೆಲ್ಲಾ

ದಾನವಾಗಿ ಬಿಟ್ಟಿದೆ ....

ಬಲೀಂದ್ರ : ಉಹುಂ.... ಹಾಗಾಗುವುದಿಲ್ಲ !... ಹಾಗಾಗುವುದಿಲ್ಲ !!, ಪ್ರಭೋ! ಶ್ರೀ ಹರಿ II, ಇದೋ ನಾನು ಕುಳಿತಿದ್ದೇನೆ, ನಿನ್ನ ಮೂರನೆ ಹೆಜ್ಜೆಯನ್ನು ನನ್ನ ಮಸ್ತಕದ ಮೇಲಿಟ್ಟು ನನ್ನನ್ನು ಕೃತಾರ್ಥನನ್ನಾಗಿ ಮಾಡು.... ದಾನವನ್ನಾದರೂ ಪೂರ್ಣಗೊಳಿಸು.

ವಾಮನ ರೂಪಿ ನಾರಾಯಣ : (ದೊಡ್ಡ ಧ್ವನಿಯಲ್ಲೇ) ಧನ್ಯ ! ಧನ್ಯ !! ಬಲೀಂದ್ರ !!! ಇದೋ ನನ್ನ ಮೂರನೆ ಹೆಜ್ಜೆಯನ್ನು ನಿನ್ನ ಮಸ್ತಕದ ಮೇಲೆ ಇಡುವೆ. ಅದರಿಂದಾಗಿ ನೀನು ಪಾತಾಳ ಲೋಕವನ್ನು ಸೇರುವೆ. ಅಲ್ಲೇ ನಿನ್ನ ವಾಸ... ಸಿದ್ಧನಾಗು...

(ತಳ್ಳಿದ ಶಬ್ದ, ಬಲೀಂದ್ರ ಪಾತಾಳ ಲೋಕ ಸೇರಿದಂತೆ)

ಬಲೀಂದ್ರ ! ನಿನ್ನ ಭಕ್ತಿ ಮತ್ತು ನಿಷ್ಠೆಗೆ ನಾನು ಒಲಿದಿದ್ದೇನೆ. ಪಾತಾಳಕ್ಕೆ ಬಂದೆನೆಂದು ದುಃಖಿಸಬೇಡ. ನೀನು ಭಕ್ತಾಗ್ರಗಣ್ಯನೇ ಹೊರತು, ದೇವೇಂದ್ರ ಪದವಿಗೆ ತಕ್ಕ ದೈವಬಲವಿಲ್ಲದವನು. ಆದರೇನು, ನಾನು ಭಕ್ತರ ಅಧೀನನಾದವನು ಇನ್ನು ನಿನಗೆ ಏನು ಬೇಕೋ ಕೇಳು....

ಬಲೀಂದ್ರ : ಭಗವಾನ್, ಶ್ರೀಹರಿ !, ನಿನ್ನ ಅನುಗ್ರಹಕ್ಕೆ ಪಾತ್ರನಾದ ನನ್ನ ಪುಣ್ಯ ಅಪಾರ ವಾದುದು. ದೇವತೆಗಳ ಬಗೆಗೆ ನನ್ನ ವಿಚಾರ ಬದಲಾಯಿತು. ಇಂದ್ರ ಪದವಿಯ ಆಕಾಂಕ್ಷೆ ಬಿಟ್ಟಿತು.

ದೇವ ! ನನ್ನ ಈ ಆಸೆಯನ್ನು ಪೂರ್ಣಗೊಳಿಸು ... ಸದಾ ಕಾಲವೂ ನಾನು ನಿನ್ನ ದರ್ಶನವನ್ನು ಪಡೆಯುವಂತಾಗಲಿ. ಇಷ್ಟನ್ನು ಕರುಣಿಸು ಅದೇ ನನ್ನ ಸೌಭಾಗ್ಯ

ವಾಮನ : ಭಲೆ ! ಬಲೀಂದ್ರ !! ನಿನ್ನ ಭಕ್ತಿಯು ನಿನ್ನ ಪಿತಾಮಹನಾದ ಪ್ರಹ್ಲಾದನ ಭಕ್ತಿಯಂತೆಯೇ ಯೋಗ್ಯವಾದುದು. ನಾನು ಯಾವಾಗಲೂ ನಿನ್ನ ದ್ವಾರದ ಮುಂದೆಯೇ ಇರುತ್ತೇನೆ. ದರ್ಶನ ಬೇಕಾದರೆ ದರ್ಶನ ಪಡೆ. ಅಲ್ಲದೆ ವರ್ಷಕ್ಕೊಮ್ಮೆ ನನ್ನೊಡನೆ ನೀನು ಭೂಲೋಕಕ್ಕೆ ಬಂದು ಭೂದರ್ಶನವನ್ನೂ ಮಾಡು. ಅಂದು ಬಲಿಪಾಡ್ಯಮಿಯಂದಾಗಲಿ! ಲೋಕವು ಹರ್ಷ ಸಂಭ್ರಮಗಳಿಂದ ಹಬ್ಬವನ್ನು ಆಚರಿಸಲಿ.

ಬಲೀಂದ್ರ : ಧನ್ಯನಾದೆ ಪ್ರಭೋ !... ನೀನು ವಾಮನನಾಗಿ ಬಂದೆ - ಚಿಕ್ಕಮೂರ್ತಿ ಆಗಿತ್ತು ಆದರೆ, ನಿನ್ನ ಕೀರ್ತಿ ದೊಡ್ಡದು. ಇದೋ ಸಾಷ್ಟಾಂಗ ಪ್ರಣಾಮಗಳು.

o o o

ಸ್ತ್ರೀ ಮೋಹದಿಂದ ಶ್ರೀರಾಮನ ಪ್ರೇಮಕ್ಕೆ

ನೀರಸ ಸರಸಿ

ತುಲಸೀದಾಸ್ -ಮೊದಲು ತುಲಾರಾಂ, ಸರಯೂಪರಿ ಬ್ರಾಹ್ಮಣ. ತಂದೆ- ಆತ್ಮಾರಾಂ. ತಾಯಿ ಹುಲಸೀಅಭುಕ್ತ ಮೂಲದಲ್ಲಿ ಜನನವಾದ್ದರಿಂದ, ಪಿತೃಗಳು ಇವರನ್ನು ತ್ಯಜಿಸಿದರು (೫ ವರ್ಷದ ಮಗುವಿನಂತೆ, ಹಲ್ಲುಗಳ ಇದ್ದು ಹುಟ್ಟಿದವರು) ಆದುದರಿಂದ ರಾಕ್ಷಸ ಎಂದು ತಿಳಿದರು. ತಂದೆ ಉಪೇಕ್ಷೆ ಮಾಡಿದರು ತಾಯಿ ತನ್ನ ದಾಸಿಮಗಳಿಗೆ ದಾನ ಕೊಟ್ಟು, ಸಾಕುವಂತೆ ಮಾಡಿದಳು. ೫ ವರ್ಷದ ನಂತರ ದಾಸಿ ಮಗಳೂ ಸತ್ತಳು ತುಲಾರಾಂ ಜೀವನ ಕಷ್ಟದಲ್ಲಿ ಸಿಕ್ಕಿ ಹೇಗೋ ನಡೆಯಿತು. ಬಾಬಾ ನರಸಿಂಹದಾಸ್ ಅವರನ್ನು ಪೋಷಿಸಿ ವಿದ್ಯೆ ಕಲಿಸಿದರು. ಗುರುವಿನೊಡನೆ ಕಾಶಿಗೆ ಬಂದು ರಾಮಾನಂದ ಸ್ವಾಮಿಯಲ್ಲಿ ನೆಲೆಸಿದರು.

ಮಹಾತ್ಮ ಶೇಷಸನಾತನಿ ಎಂಬುವರು ಅವರಿಗೆ ವೇದಾದಿಗಳನ್ನು ಕಲಿಸಿದರು. ೧೫ ವರ್ಷದ ಅಧ್ಯಯನದ ನಂತರ ತಮ್ಮ ಊರಿಗೆ ವಾಪಸ್ಸು ಬಂದರು (ರಾಜಾಪುರಿ) ಆದರೆ ಅಲ್ಲಿ ಅವರವರು ಯಾರೂ ಇರಲಿಲ್ಲ. ಭಾರದ್ವಾಜ ಬ್ರಾಹ್ಮಣ, ಕನ್ಯಾ ವಿವಾಹ, ವರಹ ಇತ್ಯಾದಿ.

ೲ ೲ ೲ ೲ ೲ

ಸ್ತ್ರೀ ಮೋಹದಿಂದ ಶ್ರೀರಾಮನ ಪ್ರೇಮಕ್ಕೆ

ಆತ್ಮಾರಾಂ : ಹೇ ಭಗವಾನ್ !... ಇದೇನಿದು !... ಈ ಮಗು ಬೆಳದ ೫ ವರ್ಷದ ಮಗು ವಂತಿದೆ. ಹಲ್ಲುಗಳೂ ಬಂದಿವೆ. ಈಗ ತಾನೆ ಹುಟ್ಟಿದ ಮಕ್ಕಳು ಹೀಗಿರುವುದೂ ಉಂಟೆ !... ದೇವ!... ಇದೇನು ವಿಚಿತ್ರ!... ರಾಕ್ಷಸನೊಬ್ಬನು ನನ್ನ ಮನೆಯಲ್ಲಿ ಜನಿಸಿರಬಹುದೆ!.... ಅಂ ! ಇದು ವಿಚಿತ್ರ, ಯಾವುದೋ ಕೆಡಕಿನ ರಾಕ್ಷಸ ಜನ್ಮವೇ ಇರಬೇಕು.... ಈ ಸಂತಾನವನ್ನು ನಾನು ಅಪೇಕ್ಷಿಸಿರಲಿಲ್ಲ... ಇಲ್ಲ !... ಇಲ್ಲ !!.... ಈ ಮಗು ನನಗೆ ಬೇಡ !....ಬೇಡವೇ ಬೇಡ !!.... ಭಗವಂತಾ ಇದು ನಿನಗೇ ಅರ್ಪಿತ !!.... ತ್ಯಜಿಸಿ ಬಿಡುವುದೇ ಸರಿ.... ಹುಲ್‌ಸೀ! ..... ಹುಲ್‌ಸೀ!.... (ಪತ್ನಿಯನ್ನು ಕರೆಯುವನು)

ಹುಲಸೀ : ಏನು ?.... ಏನಿದು..... ನೀವು ಗಾಬರಿಯಾಗಿರುವಿರಲ್ಲಾ.... ಏಕೆ ಉದ್ವಿಗ್ನ ರಾಗಿದ್ದೀರಿ?....

ಆತ್ಮಾರಾಂ : ಹುಲ್‌ಸೀ! .... ಈ ಮಗು.... ನಿನ್ನ ಉದರದಲ್ಲಿ ಹುಟ್ಟಿದ ಈ ಮಗು ರಾಕ್ಷಸನಂತೆ ಇದ್ದಾನೆ ಇವನನ್ನು ನಾವು ಮಗುವೆಂದು ಸ್ವೀಕರಿಸಿ ಸಾಕುವುದು ಬೇಡ.... ತ್ಯಜಿಸಿಬಿಡುವ.... ಎಲ್ಲಾದರೂ ಕಾಡಿನಲ್ಲಿ ಬಿಟ್ಟು ಬಾ..... ನಮಗೆ ಬೇಡ..... ಬೇಡವೇ ಬೇಡ.

ಹುಲ್‌ಸೀ : ಅಯ್ಯೋ ಇದೇನಿದು.... ನಮ್ಮ ಗರ್ಭದಲ್ಲೇ ಜನಿಸಿದ ಈ ಮಗುವನ್ನು ತ್ಯಜಿಸುವುದು ಹೇಗೆ ?.. ಅಯ್ಯೋ ! ಇದು ಸಾಧ್ಯವಿಲ್ಲ. ತಾಯಿಯಾದ ನನ್ನ ಕರಳು ಹಿಂಡುತ್ತಿದೆ. ಅದು ಹೇಗೇ ಇರಲಿ.... ಅದು ನನ್ನ ಮಗು !... ಹೇಗೆ ತ್ಯಾಗ ಮಾಡಲಿ !... ನಾಥಾ... ಕ್ಷಮಿಸಬೇಕು. ಈ ಮಗು ನಮ್ಮಿಬ್ಬರ ಪಾಪದ ಫಲವೋ, ಪುಣ್ಯದ ಫಲವೋ ತಿಳಿಯದು. ತ್ಯಜಿಸುವುದು ಮಾತ್ರ ನನ್ನಿಂದ ಆಗದು.

ಆತ್ಮಾರಾಂ : ದೇವಿ !.... ನಮ್ಮ ಬಾಳು ಹಸನಾಗಿರಬೇಕಾದರೆ, ಈ ಮಗುವು ನಮ್ಮಲ್ಲಿರಲು ಸಾಧ್ಯವಿಲ್ಲ.... ಸಮಾಜದ ಓರೆಕೋರೆ ದೃಷ್ಟಿಗಳನ್ನು ಸಹಿಸಲು ಆಗುವುದಿಲ್ಲ... ನಿಂದನೆಗೆ ಗುರಿಯಾಗಿ, ನಮ್ಮ ಬಾಳು ನರಕ ಪ್ರಾಯವಾದೀತು. ಬೇಡ!.... ಬೇಡ!! ತ್ಯಜಿಸಿ ಬಿಡೋಣ. ... ಒಂದು ವೇಳೆ ನೀನು ಸಮ್ಮತಿ ಕೊಡದಿದ್ದಲ್ಲಿ, ನಾನೇ ದೇಶಾಂತರ ಗತಿಯಾಗಿ ಹೋಗಿಬಿಡುತ್ತೆನೆ.

ಹುಲ್‌ಸಿ : ಅಯ್ಯೋ!.. ದೇವ!!... ಪರಮಾತ್ಮಾ... ಈ ಉಭಯ ಸಂತಾಪ ವನ್ನು ನನಗೇಕೆ... ಒದಗಿಸಿದೆ !.... (ಅಳುವ ಧ್ವನಿಯಲ್ಲಿ).... ಹೇಗೆ ಬಿಡಲೀ ?.... ಈ ನನ್ನ ಕಂದನನ್ನು ಹೇಗೆ ತ್ಯಜಿಸಲಿ !.... ನಾನಾದರೂ ಜೀವ ಕಳೆದುಕೊಳ್ಳಲೇ?.. ಏನು ಮಾಡಲಿ?.. ನಾಥಾ.. ದಯವಿಟ್ಟು...

ಆತ್ಮಾರಾಂ : ಆಗದು.. ಆಗದು !! ನೀನು ತ್ಯಜಿಸಲೇಬೇಕು....ಇಲ್ಲವಾದರೆ ... ನಾನೇ ಗೃಹ ತ್ಯಾಗಮಾಡಬೇಕು. ಈ ಎರಡರಲ್ಲಿ ಒಂದು ಖಂಡಿತ....

ಹುಲ್‌ಸೀ : ಭಗವಾನ್ !.... ಈ ನಿರ್ದಯತೆ ? ಸಮಾಜ !... ಓಹ್.... ಆಡಿಕೆ... ಓರೆಗಣ್ಣು !.... ಇವೆಲ್ಲಾ ತಾಯಿಯಾದ ನನಗೆ ಏಕೆ ?.... ಮಗು ?... ಮಗುವೇ ನನಗೆ ಹೆಚ್ಚಲ್ಲವೇ ?.... ಅಂ !... ಉಫ್.... ಇರಲಿ !.... ನಾಥಾ !.... ತ್ಯಜಿಸುತ್ತೇನೆ, ಆದರೆ ಹೇಗೆ ?... ಎಂಬುದನ್ನು ನೀವು ಕೇಳಬಾರದು... ಬಾಲಕ ನಮ್ಮಲ್ಲಿರುವುದಿಲ್ಲ.... ಸಾಲದೆ ?

ಆತ್ಮಾರಾಂ : ಹೇಗಾದರೂ ಮಾಡು.... ನನಗೆ ನೋವು ಇಲ್ಲದೇ ಇಲ್ಲ... ಆದರೆ... ಅಸಹಾಯಕನಾಗಿದ್ದೇನೆ.... ಹೇಗಾದರೂ ತ್ಯಜಿಸು.... ನಿನ್ನನ್ನು ನಾನು ಪ್ರಶ್ನಿಸುವುದಿಲ್ಲ.... ಮಗುವನ್ನು ಮರೆಯಲು ಸಹಾಯ ಮಾಡು.

ಹುಲ್‌ಸೀ : ನೀವು ಮರೆಯಲು ಸಾಧ್ಯವಿರಬಹುದು... ನಾನು ?.... ಇರಲಿ.... ಬೆಳಗಾಗುವುದರಲ್ಲಿ ತ್ಯಜಿಸಿರುತ್ತೇನೆ....

ಹುಲ್‌ಸೀ : ಕನ್ಯಾ.... ನೀನು ದಾಸೀ ಪುತ್ರಿ ಇರಬಹುದು... ಆದರೆ... ನನಗೆ ನಿಜವಾದ ತಂಗಿಯಂತಿದ್ದೀಯೆ ?.... ನನ್ನದೊಂದು ಪ್ರಾರ್ಥನೆಯನ್ನು ನೆರವೇರಿಸಿ ಕೊಡುವೆಯಾ ?....

ಕನ್ಯಾ : ಹೇಳಿ ತಾಯಿ.... ಅದೇನು....ಇಷ್ಟ ದೈನ್ಯರಾಗಿ, ನನ್ನಂತಹ ದಾಸೀಪುತ್ರಿಯನ್ನು ಕೇಳುವುದು ಸರಿಯಿಲ್ಲ. ನೀವು ಏನು ಹೇಳಿದರೂ

ಅದು ಆಜ್ಞೆ ಆಗಿರಬೇಕಲ್ಲವೆ? .... ಹೇಳಿ !... ಹೇಳಿ ತಾಯಿ... ನಿಮ್ಮ ಆಜ್ಞೆಯನ್ನು ಶಕ್ತಿಮೀರಿ ನಡೆಸುತ್ತೇನೆ... ಹೇಳಿ!

ಹುಲ್‌ಸೀ : ಕನ್ಯಾ !.... (ನಡುಗುವ ಧ್ವನಿ) ಕನ್ಯಾ !! ನನ್ನ ಈ ನವಜಾತ ಶಿಶುವನ್ನು ನೀನು ಪಾಲಿಸುವೆಯಾ ?.. ತಾಯಿಯಂತೆ ಪಾಲಿಸುವೆಯಾ? .... ಈ ನಿರ್ಭಾಗ್ಯ ಮಗು, ಸಹಜವಾದ ಹಸುಳೆಯಂತೆ ಜನಿಸಲಿಲ್ಲ. ಬಹುದೊಡ್ಡ ದೇಹ.... ಹಲ್ಲುಗಳೂ ಬಂದಿವೆ... ನನ್ನ ಪತಿಯು ಇದನ್ನು ನಿರಾಕರಿಸುತ್ತಿದ್ದಾರೆ.. ನಮಗೆ ಬೇಡವೆಂದು ಹೇಳುತ್ತಿದ್ದಾರೆ... ಸಮಾಜದ ಕುಹಕಕ್ಕೆ ಹೆದರುತ್ತಿದ್ದಾರೆ.... ಆದುದರಿಂದ ಇದನ್ನು ನಿರ್ವಾಹವಿಲ್ಲದೆ ತ್ಯಜಿಸಬೇಕಾಗಿದೆ.. (ಅಳುವ ಧ್ವನಿಯಲ್ಲಿ) .. ಆದರೆ! .... ಆದರೆ ತಾಯಿಯಾದ ನನ್ನ ಕರಳು ಹಿಂಡುತ್ತಿದೆ... ಎಲ್ಲಾದರೂ ಸುಖವಾಗಿರಲೆಂಬ ಹೆಬ್ಬಯಕೆಯಿಂದ ನಿನ್ನನ್ನು ಕೇಳಿಕೊಳ್ಳುತ್ತಿದ್ದೇನೆ... ಸಾಕಿ ದೊಡ್ಡವನನ್ನಾಗಿ ಮಾಡುವೆಯಾ ?

ಕನ್ಯೆ : ಓಹ್ !... ಎಂತಹ ಮಾತು ?... ತಾಯೀ ಒಂದು ಬಾಲಕನನ್ನು, ಅದೃಷವಶಾತ್ ಪಡೆದಂತಾಯಿತು. ಸಾಕದೇ ಏನು? ಬಹಳ ಸಂತೋಷ ದಿಂದ ಸಾಕುತ್ತೇನೆ. ನಮಗೂ ಮಕ್ಕಳಿಲ್ಲ... ನನ್ನ ಪತಿಯೂ ಸಂತೋಷ ದಿಂದ ಸಾಕುತ್ತಾರೆ. ನೀವು ಚಿಂತಿಸದಿರಿ.... ಕೊಡಿರಿ... ಚಿಂತಿಸಬೇಡಿ... ನನ್ನ ಮಗುವೆಂದೇ ಸಾಕುತ್ತೇನೆ....

ಹುಲ್‌ಸೀ : ನಾನು ಧನ್ಯೆ: ನೀನು ಎಲ್ಲಿ ನಿರಾಕರಿಸಿಬಿಡುವೆಯೋ ಎಂತಿದ್ದೆ. ಕನ್ಯೆ! ... ಇದೊ ತೆಗೆದುಕೊ !... ಅಳುತ್ತಾ... ಚೆನ್ನಾಗಿ ಸಾಕು... ಅಯ್ಯೋ! ... ನನ್ನ ಕಂದಾ.... (ಅಳುವಳು) ... ತುಲಾರಾಂ!... ಕನ್ಯೆ ಮಗುವನ್ನು ಎತ್ತಿಕೊಂಡು ಹೋಗುತ್ತಾ... ತುಲಾರಾಂ)... ಈಗ ನೀನು ನನ್ನ ಪುತ್ರ... ತುಲಾರಾಂ!!... ನನ್ನಪತಿಯ ಮನೆಗೇ ಹೋಗಿ ನಿನ್ನನ್ನು ಸಾಕುತ್ತೇನೆ ... (ಹುಲಸಿಯ ಅಳು ಕ್ಷೀಣವಾಗುತ್ತಾ ನಿಲ್ಲುವುದು)

ಸಾಧು : ಈ ಸ್ಥಳ !... ಗಂಗಾನದಿ...ಎಲ್ಲಾ ಮನೋಹರವಾಗಿದೆ. ಹೃದಯವು ಉಬ್ಬುತ್ತದೆ. ಆದರೆ, ನನಗೆ ಎಲ್ಲೋ ನೋವಾಗುತ್ತಿದೆ.... ಇದೇನು? .... ಮನಸ್ಸಿನಲ್ಲಿ ಸಂತೋಷವಿಲ್ಲವಲ್ಲಾ!... ಏಕೆ ?... ಹಾಂ!... ಹೌದು... ಈ ಅಪಾರ ವಿದ್ಯೆಯ ಸದುಪಯೋಗವಾಗಿಲ್ಲ... ನನ್ನಲ್ಲೇ ಅಡಗಿದೆ... ಯೋಗ್ಯರಾದವರಾರೂ ನನ್ನಲ್ಲಿ ಕಲಿಯಲು ಬರಲಿಲ್ಲ... ದೈವಾಜ್ಞೆ !... ಅವನ ಚಿತ್ತ ಹೇಗಿದೆಯೋ ಗೊತ್ತಿಲ್ಲ... ಹೇಗೂ ಅವನು ನಡೆಸಿದಂತೆ ಆಗುತ್ತದೆ... ವೇದ, ವೇದಾಂಗ, ಶಿಕ್ಷಾ, ವ್ಯಾಕರಣಾದಿ

ಗಳನ್ನು ನನಗೆ ಭಗವಂತನು ದಯಪಾಲಿಸಿದ್ದಾನೆ... ಆದರೆ... ವಿನಿಯೋಗವಾಗಿಲ್ಲವಲ್ಲಾ!... ಹಾಂ!... ಏನಿದು ?... ಆ ಸಣ್ಣ ಮನೆ ಯಿಂದ ಯಾರೋ ನರಳುತ್ತಿರುವ ಶಬ್ದ ಕೇಳಿ ಬರುತ್ತಿದೆಯಲ್ಲಾ !... ಯಾರಿರಬಹುದು ... ಹಾಂ !... ಹೌದು.... ಯಾರೋ ಸ್ತ್ರೀ ಇರ ಬೇಕು... ನರಳಿಕೆ ಹೆಚ್ಚುತ್ತಿದೆ... ಹೋಗುತ್ತೇನೆ... ಆಕೆಗೆ ಸಹಾಯ ವಾಗುವುದಾದರೆ, ನನ್ನ ಜನ್ಮ ಸಾರ್ಥಕ ! (ಬಾಗಿಲು ತಟ್ಟುವ ಶಬ್ದ) ತುಲಾರಾಂ ಬಾಗಿಲು ತೆಗೆಯುತ್ತಾನೆ.

ತುಲಾರಾಂ: ಒಹ್ !... ನಮಸ್ತೆ, ಸಾಧು ಮಹಾಶಯರೆ ?... ಬನ್ನಿ... ನಮ್ಮಿಂದ ಏನಾಗಬೇಕೋ ಸಂಕೋಚವಿಲ್ಲದೆ ಹೇಳಿ...

ಸಾಧು : ಭಲೆ ಬಾಲಕ !..ಬಹಳ ವಿನಯಶೀಲನಾಗಿದ್ದೀಯೆ... ನಿನ್ನ ಹೆಸರು?

ತುಲಾರಾಂ : "ತುಲಾರಾಂ"...

ಸಾಧು : ಒಳ್ಳೆಯದು... ತುಲಾರಾಂ!.... ಅತ್ತ ನರಳುತ್ತಿರುವವರಾರು ?.... ನನ್ನಿಂದೇನಾದರೂ ಸಹಾಯ ಬೇಕೆ ?.... ಶಬ್ದ ಕೇಳಿಸಿತು ಸಹಾಯ ನೀಡಲು ಬಂದೆ.... ಸಾಧ್ಯವಾದರೆ !....

ತುಲಾರಾಂ: (ಅಳುವ ಧ್ವನಿಯಲ್ಲಿ)... ಈಕೆ ... ನನ್ನ ತಾಯಿ... ತುಂಬಾ ನರಳು ತ್ತಿದ್ದಾಳೆ.... ಏನು ಮಾಡುವುದಕ್ಕೂ ತೋಚುವುದಿಲ್ಲ... ತಂದೆ ಇಲ್ಲ... ಅಸಹಾಯಕನಾಗಿದ್ದೇನೆ... ಆಕೆ ಬದುಕುವಂತೆ ತೋರುತ್ತಿಲ್ಲ.

ಸಾಧು : ಬಾಲಕಾ !.... ಭಯ ಪಡಬೇಡ.... ಎಲ್ಲಾ ಭಗವಂತನ ದಯೆ. ನೋಡುವ.... ಏನು ತಾಯಿ... ಏನು ಸಂಕಟ.... ಹೀಗೇಕೆ ?....

ಕನ್ಯೆ : ನಡುಗುವ ಧ್ವನಿಯಲ್ಲಿ... ಸಾಧು ಮಹಾಶಯಾ... ಇದು... ಇದು. ... ನನ್ನ ಅಂತ್ಯಕಾಲ... ಬದುಕಲಾರೆ.... ಈ, ಈ, ನನ್ನ ಬಾಲಕ!... ಇವನಿಗಾಗಿ ಚಿಂತೆ!.... ಏನು ಮಾಡಲಿ? ಸಾಧು ವರ್‍ಯ! ಏನು ಮಾಡಲಿ? .... ಓಫ್... ಉಸಿರು ಕಟ್ಟುತ್ತಿದೆ... ನಾರಾಯಣಾ! ಸಾಧು ಮಹಾ ಶಯಾ. ... ಈ... ಬಾಲ... ಬಾ.... ಉಫ್.... (ಕೊನೆಯುಸಿರು)

ಸಾಧು : ಓ, ಸಾಧ್ವಿ ! ಇಷ್ಟು ಬೇಗ ಪ್ರಾಣ ತ್ಯಜಿಸಿದೆಯಾ !

ತುಲಾರಾಂ: (ಅಳುತ್ತಿದ್ದಂತೆ)... ಹೇ ಭಗವಾನ್ !... ಎಂತಹ ವಿಪತ್ತನ್ನು ಕೊಟ್ಟೆ... ದೇವಾ ?.. ನನ್ನ ಏಕಮಾತ್ರ ಆಸರೆಯಾಗಿದ್ದ... ಈ ತಾಯಿಯನ್ನು ... ಕಿತ್ತುಕೊಂಡುಬಿಟ್ಟೆಯಾ?... ಇನ್ನೇನು ಗತಿ ?... ರಾಮಾ? ... ಕಾಪಾಡು!... ಕಾಪಾಡು! ... ರಾಮಾ!!...

ಸಾಧು : ಮಗೂ, ಮುಗಿದುಹೋದ ವಿಚಾರಕ್ಕೆ ಮರುಗಿ ಪ್ರಯೋಜನವಿಲ್ಲ.

ಏಳು ! ಅಂತ್ಯ ಸಂಸ್ಕಾರವನ್ನು ಆಚರಿಸು.

ತುಲಾರಾಂ: (ಅಳುತ್ತಾ !) ನನ್ನ ಜನ್ಮ ದುಃಖಮಯವಾಗಿಯೇ ಕಳೆಯುತ್ತಿದೆ. ಸಾಧುವರ್ಯ ಜನ್ಮವಿತ್ತ ಮಾತಾಪಿತೃಗಳು, ನನ್ನ ವಿಕಾರ ಸ್ವರೂಪವನ್ನು ನೋಡಿ ನನ್ನನ್ನು ತ್ಯಜಿಸಿಬಿಟ್ಟರು... ಈಗ ಅವರೂ ಇಲ್ಲ... ಈ ಮಹಾ ತಾಯಿ ನನ್ನನ್ನು ಸಾಕಿದಳು... ಸಲಹಿದಳು... ನನಗಾಗಿ ಎಲ್ಲವನ್ನೂ ಮಾಡಿದಳು.... ಆದರೆ.... ರಾಮನಿಗೆ ನನ್ನ ಮೇಲೆ ದಯೆ ಬರಲಿಲ್ಲ... ಹೇ ರಾಮಾ !!.... ಇನ್ನೇನು ಗತಿ !!!

ಸಾಧು : ದುಃಖಿಸಿ ಪ್ರಯೋಜನವಿಲ್ಲ ತುಲಾರಾಂ !.... ನೀನು ರಾಮಭಕ್ತನೆಂದು ನನಗೆ ಗೊತ್ತಿದೆ. ಆದರೂ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದೀಯೆ! .... ಇದೋ, ಭಯ ಬೇಡ ನಿರ್ಭೀತನಾಗಿ ನನ್ನ ಆಶ್ರಯದಲ್ಲೇ ಇರು.... ಈಗ ಅಂತ್ಯ ಸಮಸ್ಕಾರ ಮಾಡು...

ತುಲಾರಾಂ: ಅಂ !.... ಓಹ್ !! ಸಾಧು ಮಹಾಶಯಾ !.... ನನ್ನಲ್ಲಿ ಇಷ್ಟೊಂದು ಕರುಣೆಯನ್ನು ದಯಪಾಲಿಸುವಿರಾ !... ಧನ್ಯನಾದೆ... ಸಾಧುವರ್ಯ! .... ನಿಮ್ಮ ಮಾತಿನಂತೆ ನಡೆಯಲು ಸಿದ್ಧನೇ ಇದ್ದೇನೆ.... ಇದೋ ಅಂತ್ಯ ಸಂಸ್ಕಾರ ಮಾಡುತ್ತೇನೆ... ತಾಯೀ! ನನ್ನ ಅಂತ್ಯ ಪ್ರಮಾಣವನ್ನು ಸ್ವೀಕರಿಸು... ರಾಮ ನಿನಗೆ ಸಾಯೋಜ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ... ಓಫ್... ತಾಯಿ...

ಸಾಧು : ತುಲಾರಾಂ !... ನಿನಗೆ ಈಗ ಯಾರೂ ಬಂಧುಗಳಿಲ್ಲ... ನನ್ನನ್ನೇ ಬಂಧುವೆಂದು ತಿಳಿ.... ನನ್ನನ್ನು ಅನುಸರಿಸು... ಭಗವಂತ ಕೊಟ್ಟಿದುದನ್ನು ಅನುಭವಿಸಿ ಬಾಳೋಣ.... ಅಂದಹಾಗೆ.... ನಿನಗೆ ವಿದ್ಯಾಭ್ಯಾಸವಾಗಿಲ್ಲ.... ನನ್ನಲ್ಲಿರುವ ವಿದ್ಯೆಯನ್ನೆಲ್ಲಾ ನಿನಗೆ ಕಲಿಸುವೆನು. ಸರಿಯಾಗಿ ಶಿಷ್ಯವೃತ್ತಿಯನ್ನೇ ಮಾಡು.... ದೇವರು ಕಾಪಾಡಲಿ.

ತುಲಾರಾಂ: ಧನ್ಯನಾದೆ, ಸಾಧುವರ್ಯ.... ಧನ್ಯನಾದೆ. ನಿಮ್ಮಲ್ಲೇ ನನ್ನ ಶ್ರೇಯಸ್ಸು. ... ನೀವೇ ಮಾತಾಪಿತೃಗಳು.... ಸದ್ಗುರುವೂ ನೀವೇ.... ನಿಮ್ಮ ಅನುಗ್ರಹವೇ ನನಗೆ ಸರ್ವಸ್ವ.

ಸಾಧು : ಆಯಿತು.... ತುಲಾರಾಂ.... ನೀನು ನನ್ನಲ್ಲಿ ಬಂದಿರುವೆ.... ಇದು ದಾಸವೃತ್ತಿ.... ಇನ್ನು ನೀನು ಹಿಂದಿನದನ್ನು ಕಳಚಿಬಿಡು.... ಈಗ ಹೊಸದನ್ನು ಸ್ವೀಕರಿಸು .... ದೀಕ್ಷೆ ಇದ್ದಂತೆ.

ತುಲಾರಾಂ: ಮಹಾದಾಜ್ಞೆ.... ಗುರುವರ್ಯ !.... ತಮ್ಮ ಅನುಗ್ರಹ ಇದ್ದಂತೆ ಆಗಲಿ.

ಸಾದು : ಸರಿ, ಇನ್ನು ಮುಂದೆ ಅಧ್ಯಯನ ಮಾಡು.

ತುಲಾರಾಂ: ಅಪ್ಪಣೆ... ಗುರೋ!... ರಾಮಚಂದ್ರಾ!.. ಶ್ರೀ ಗುರುಭ್ಯೋನ್ನಮಃ ... ಹರಿಃ ಓಂ....

ತುಲಾರಾಂ: ಗುರುವರ್ಯಾ.... ನಿಮ್ಮ ಋಣವನ್ನು ಹೇಗೆ ತೀರಿಸಲಿ / ಬಹು ಪ್ರೇಮದಿಂದ ನನ್ನನ್ನು, ವೇದ ವೇದಾಂಗ, ಶಿಕ್ಷೆ, ವ್ಯಾಕರಣಶಾಸ್ತ್ರ ತರ್ಕ, ಎಲ್ಲದರಲ್ಲೂ ಪಾರಂಗತನನ್ನಾಗಿ ಮಾಡಿದಿರಿ !... ಓಘ್.... ನೀವೂ ಈ ಲೋಕವನ್ನು ತ್ಯಜಿಸಿದಿರಿ. ಗುರುದಕ್ಷಿಣೆಯನ್ನೂ ಅರ್ಪಿಸಲು ಸಾಧ್ಯವಾಗಲಿಲ್ಲ. ರಾಮಾ !.... ನನಗೆ ದಾರಿ ತೋರಿಸು... ಏನು ಮಾಡಲಿ !....

ಗ್ರಾಮಸ್ಥ : ಪ್ರಣಾಮ್ ! ಭರದ್ವಾಜರೇ... ನದೀ ಸ್ನಾನಕ್ಕೆ ಬಂದಿರಾ !... ಒಳ್ಳೆಯದು. ನಿಮ್ಮನ್ನು ಈಚೆಗೆ ಕಂಡೇ ಇರಲಿಲ್ಲ.

ಭರದ್ವಾಜ್ : ಹೌದು... ಈಗ.... ಬೇರೆ ಊರುಗಳಿಗೆ ಹೋಗಿ ಬರುತ್ತಿದ್ದೇನೆ. ನನ್ನ ಮಗಳಿಗೆ ಯೋಗ್ಯನಾದ ವರನನ್ನು ಹುಡುಕುತ್ತಿದ್ದೇನೆ...

ಗ್ರಾಮಸ್ಥ : ಓಹೋ.... ವರಾನ್ವೇಷಣೆಯಲ್ಲಿ ತೊಡಗಿದ್ದೀರಾ....ಒಳ್ಳೆಯದು... ನೀವೇನಪ್ಪ ಒಳ್ಳೆ ಅನುಕೂಲಸ್ಥರು. ಎಲ್ಲಿಯಾದರೂ ಸಿಕ್ಕುತ್ತಾರೆ.

ಭರದ್ವಾಜ: ಇದ್ದಾರೆ, ಆದರೆ, ಅನುರೂಪನಾದ ಮತ್ತು ವಿದ್ಯಾವಂತನಾದ ವರನನ್ನು ಹುಡುಕುತ್ತಿದ್ದೇನೆ. ಅಂತಹವರು ಇನ್ನೂ ದೊರಕಿಲ್ಲ.

ಗ್ರಾಮಸ್ಥ : ನಿಮಗೆ ವಿದ್ಯಾವಂತನಾಗಿರುವುದು ಮುಖ್ಯವೋ, ಅನುಕೂಲಸ್ಥನಾಗಿರುವ ಮುಖ್ಯವೋ ಅಥವಾ ಎರಡಬೇಕೆಂದು ಬಯಕೆಯೆ ತಿಳಿಯದು.

ಭರದ್ವಾಜ: ದೇವರ ದಯದಿಂದ, ನನಗೆ ಎಲ್ಲಾ ಅನುಕೂಲಗಳೂ ಇವೆ. ಬಡ ಬ್ರಾಹ್ಮಣ ನಾದರೂ ಸರಿ, ಅನುರೂಪನಾಗಿಯೂ, ಹೆಚ್ಚು ವಿದ್ಯಾವಂತನಾಗಿಯೂ ಇರುವ ಯುವಕ ದೊರೆತರೆ ಸಾಕೆಂದು ನನ್ನ ಎಣಿಕೆ.

ಗ್ರಾಮಸ್ಥ : ಇಲ್ಲಿ ತುಲಾರಾಂರೆಂಬ ಘನ ವಿದ್ವಾಂಸರಿದ್ದಾರೆ, ಆದರೆ ಕಡು ಬಡವರು ಬಂಧು ಗಳಾರೂ ಇಲ್ಲ. ಹೇಗೋ ಕಾಲ ಹಾಕುತ್ತಿದ್ದಾರೆ. ಯೋಗ್ಯ ಯುವಕ, ತೇಜೋವಂತ, ಅನುರೂಪನೆಂದೇ ಹೇಳಬಹುದು...

ಭರದ್ವಾಜ: ಹಾಗಾದರೆ ಅವರನ್ನು ಭೇಟಿಯಾಗಬಹುದೇ ?

ಗ್ರಾಮಸ್ಥ : ಓಹೋ ! ಬನ್ನಿ ಹೋಗುವ.

ಗ್ರಾಮಸ್ಥ : ನಮಸ್ತೆ ತುಲಾರಾಂ ರೇ.... ಇವರು ಭರದ್ವಾಜರು, ಬ್ರಾಹ್ಮಣರು,... ನದಿಯಿಂದ ಆ ಕಡೆ ಇರುವ ಗ್ರಾಮಸ್ಥರು ನಿಮ್ಮನ್ನು ನೋಡಲು ಬಂದಿದ್ದಾರೆ.

ತುಲಾರಾಂ: ನಮಸ್ತೆ.... ಅಗತ್ಯವಾಗಿ ಆಗಲಿ, ದಯಮಾಡಿ, ಈ ಪೀಠದಲ್ಲಿ ಕುಳ್ಳಿರಿ. ...

ಭರದ್ವಾಜ: ತಾಲಾರಾಂ !.... ನಿಮ್ಮ ವಿದ್ಯಾ ವಿನಯಗಳನ್ನು ತಿಳಿದು ಹಾಗೂ ನಿಮ್ಮನ್ನು ಪ್ರತ್ಯಕ್ಷವಾಗಿ ಕಂಡದ್ದಾಯಿತು. ನನ್ನ ಮಗಳ ವಿವಾಹವಾಗ ಬೇಕಾಗಿದೆ. ತಾವು ಸ್ವೀಕರಿಸುವುದಾದರೆ ಸಂತೋಷ....

ತುಲಾರಾಂ: ಮಹನೀಯರೇ !... ನನ್ನಲ್ಲಿ ವಿದ್ಯೆ ಒಂದು ಹೊರತು ಮತ್ತೇನೂ ಇಲ್ಲ. ಬಂಧುಗಳೆಲ್ಲಾ ದೈವಾಧೀನರಾದರು. ನನ್ನ ಗುರುವಿನ ಆಶ್ರಯದಲ್ಲಿದ್ದೆ. ಆವರೂ, ಇಹಲೋಕವನ್ನು ತ್ಯಜಿಸಿದರು. ಈ ಸ್ಥಿತಿಯಲ್ಲಿ ನನ್ನನ್ನು ಅಳಿಯನನ್ನಾಗಿ ಸ್ವೀಕರಿಸುವಿರಾ !....

ಭರದ್ವಾಜ: ಚಿಂತೆ ಇಲ್ಲ.... ನಾವು ನಿಮ್ಮ ಆರ್ಥಿಕ ಮತ್ತು ಬಂಧು ವರ್ಗಗಳನ್ನು ನೋಡಿದ್ದೇವೆ ವಿವಾಹ ಜರುಗುವುದು. *ಕೆಲವು ದಿನಗಳ ನಂತರ .*

ದೇವಿ : ನಾಥಾ !.... ನನ್ನದೊಂದು ಪ್ರಾರ್ಥನೆ... ತವರೂರಿಗೆ ಹೋಗಿ ಬರುವ ಆಸೆ ಇದೆ. ಹೋಗಿ ಬರಲೆ ?

ತುಲಾರಾಂ: ಆಂ !... ತೌರೂರಿಗೆ ?... ಹಾಂ.... ಆಗಲಿ, ಹೋಗಿಬಾ.... ಬೇಗ ಬರುವೆ ತಾನೇ, ನಿನ್ನನ್ನು ಬಿಟ್ಟು ಇರುವುದೇ ನಗೆ ಸಹಿಸುವುದಿಲ್ಲ.... ಬೇಗ ಬಂದುಬಿಡು.

ದೇವಿ : ಆಗಲಿ ! ... ಇನ್ನು ಹೋಗಿ ಬರುತ್ತೇನೆ.

ತುಲಾರಾಂ: ಹೊರಟೇಬಿಟ್ಟೆಯಾ.... ದೇವಿ!.... ಆಂ!.... ಹೋಗಿಬಾ ..... ಜಾಗ್ರತೆ.....

ತುಲಾರಾಂ: ದೇವಿ ತೌರೂರಿಗೆ ಹೋಗೇ ಬಿಟ್ಟಳು.... ನಾನು ಹೇಗೆ ಕಾಲ ಕಳೆಯಲಿ !... ಶ್ರೀರಾಮ ನನ್ನಿಂದ ದೇವಿಯನ್ನು ಅರೆ ಘಳಿಗೆಯಾದರೂ ಮರೆಯಲು ಸಾಧ್ಯವಾಗುತ್ತಿಲ್ಲವಲ್ಲಾ.... ದೇವೀ.... ದೇವಿ.... ನೀನು ಇಂದೇ ಹೋಗಿದ್ದೀಯೆ. ... ಈಗಲೇ ಬರಲು ಸಾಧ್ಯವೇ ?.... ಇಲ್ಲ! .... ಇಲ್ಲ.... ಆಕೆ ಬರಲು ಸಾಧ್ಯವಿಲ್ಲ.... ನಾನು ವಿರಹವನ್ನು ಸಹಿಸ ಲಾರೆನಲ್ಲಾ !... ದೇವೀ... ದೇವೀ! ನಿನ್ನಲ್ಲಿ ಪ್ರೇಮವು ಗಾಢವಾಗಿ ಊರಿದೆ... ಬಿಡಲಾರೆ... ಪ್ರೇಮ ಜ್ವಾಲೆಯನ್ನು ಸಹಿಸಲು ಆಗುವುದಿಲ್ಲ. ... ದೇವೀ !.... ಇಲ್ಲ.... ಸಹಿಸಲಾಗುವುದಿಲ್ಲ.... ನನಗೆ ದೇವಿಯನ್ನು

ಬಿಟ್ಟು ಒಂದು ನಿಮಿಷವೂ ಇರಲು ಸಾಧ್ಯವಿಲ್ಲ... ಏನು ಮಾಡಲಿ !... ಏ...ನು ಮಾಡಲೀ...?

ಸಾಧ್ಯವಿಲ್ಲ ...ದೇವೀ !...ಈಗಲೇ... ಈ ಕಾಳ ರಾತ್ರಿಯಲ್ಲೇ, ನಿನ್ನನ್ನು ನೋಡಲು ಹೊರಡುತ್ತೇನೆ... ತಾಳಲಾರೆ... ಇದೋ ಬಂದೆ... *ಹೊರಡುವನು*

ದೇವಿ : (ಗಾಬರಿಯಿಂದ)... ಇದೇನು ?... ಯಾರು ಬಂದವರು ?... ಈ ನಡು ರಾತ್ರಿಯಲ್ಲಿ ಯಾರು ಬಂದರು ?... ಚೋರರೊ?... ಕೂಗಿ ಕೊಳ್ಳಲೆ ?... ಯಾರದು ?...

ತುಲಾರಾಂ: ದೇವೀ.... ದೇವಿ!!... ನಾನು ಬಂದಿದ್ದೇನೆ.... ನಿನ್ನ ಪ್ರೇಮದ ಪತಿ.... ನಿನ್ನನ್ನು ಅಗಲಿರಲು ಸಾಧ್ಯವಿಲ್ಲ... ರಾತ್ರಿಯೇ ಬಂದೆ... ಹಗ್ಗ ಒಂದನ್ನು ಹಿಡಿದು ನಿನ್ನ ಉಪ್ಪರಿಗೆಗೆ ನುಸುಳಿ ಬಂದೆ... ಕ್ಷಮಿಸು ದೇವಿ !.... ನಿನ್ನ ವಿರಹವು ನನ್ನನ್ನು ದಹಿಸುತ್ತಿದೆ.... ಪ್ರೇಮಮಯಿ....

ದೇವಿ : ಸಾಕು ! ಸಾಕು!! ಇದೆಂತಹ.... ಹುಚ್ಚು ಪ್ರೇಮ... ಅಯ್ಯೋ ರಾಮಚಂದ್ರಾ! ನಾನು ಇಲ್ಲಿಗೆ ಬಂದರೂ ಹಿಂದೆಯೇ ಬಂದು ಬಿಟ್ಟಿರಾ....

ತುಲಾರಾಂ: ತಡೆಯಲಾಗಲಿಲ್ಲ... ದೇವಿ.... ಬಂದುಬಿಟ್ಟೆ... ಕ್ಷಮಿಸು...

ದೇವಿ : ಧಿಕ್ಕಾರವಿರಲಿ ನಿಮ್ಮ ಈ ಸ್ತ್ರೀ ಮೋಹಕ್ಕೆ ನನ್ನ ಮೂಳೆ ಮಾಂಸಗಳ ಶರೀರದಲ್ಲಿ ಪ್ರೇಮವೆ ? ನಾಥಾ.... ಅಂತಹ ಪ್ರೇಮಕ್ಕೆ... ಧಿಕ್ಕಾರ ! ... ಧಿಕ್ಕಾರ.

ಇದೇ ಪ್ರೇಮವನ್ನು ಶ್ರೀರಾಮನಲ್ಲಿಟ್ಟರೆ ಭವಬಂಧನದಿಂದ ಪಾರಾಗುವಿರಿ... ಅಲ್ಲವೆ ?.... ಇದು ಹೀನಪ್ರೇಮ .... ಕೇವಲ ಮೋಹ !

ತುಲಾರಾಂ : ಆಂ !.... ಓಹ್.... ಅಷ್ಟೊಂದು ಪ್ರೇಮೋತ್ಸಾಹದಿಂದ ಬಂದ ನನ್ನನ್ನು... ಧಿಕ್ಕರಿಸುತ್ತಿದ್ದೀಯಾ? .... ಅಯ್ಯೋ ! ನರಜನ್ಮವೇ .... ಧಿಕ್ಕಾರ !... ನಿರಾಕರಣೆ! .. ನಡುಗುವ ಧ್ವನಿಯಲ್ಲಿ)... ಹೌದು ದೇವಿ !... ಅಸ್ಥಿ ಮಾಂಸಗಳಿಂದ ಆದ ಈ ದೇಹದಲ್ಲಿ ಪ್ರೇಮವೆ?... ಧಿಕ್ ! ಧಿಕ್!.. ಇಲ್ಲ.. ಇಲ್ಲಾ ! ಶಾಶ್ವತ ವಲ್ಲದ ದೇಹದಲ್ಲಿ ಪ್ರೇಮ ! ನಿಸಾರ ದೀಪದ ಮೇಲೆ ಬಿದ್ದು ಪ್ರಾಣ ಬಿಡುವ ಪತಂಗದಂತೆ.... ಓಹ್.... ಇದು ಅಶಾಶ್ವತ ದೇವಿ !.... ಇದೋ, ನಿನ್ನ ನುಡಿಯಂತೆ, ಆ ರಾಮನಲ್ಲೇ ಪ್ರೇಮ ಬೆಳೆಸುತ್ತೇನೆ... ನನಗೆ ಆಜ್ಞೆ ಕೊಡು... ಇದೊ ಹೊರಟೆ... (ಜೋರಾಗಿ ಹೊರಡುವ ಶಬ್ದ)

ತುಲಾರಾಂ: ಹೇರಾಮ ! ವಿರಕ್ತನಾದೆ .... ನನ್ನನ್ನು ಅಂಧಕಾರದಿಂದ ಪಾರು ಮಾಡಿದೆ. ಆ ದೇವಿಯೇ ನನಗೆ ದೈವ ಸ್ವರೂಪಳು.... ಈ ನಶ್ವರ ಪ್ರಪಂಚದಲ್ಲಿ ದೇಹದ ಮೋಹ ಸಲ್ಲದು....

ಕಾಶೀನಗರದಲ್ಲಿ ಅನೇಕ ಸಂತರಿದ್ದಾರೆ. ಅವರೊಡನೆ ಬೆರತು, ಶ್ರೀರಾಮ ಧ್ಯಾನದಲ್ಲಿ ಮಗ್ನನಾಗುವುದೇ ಒಳ್ಳೆಯದು... ಮುಕ್ತಿ ಮಾರ್ಗ ಇಲ್ಲೇ ಗೋಸಾಯಿಗಳಿದ್ದಾರೆ ಹೋಗುತ್ತೇನೆ. ಮಹಾಶಯರುಗಳಿಗೆ ಇದೋ ದಂಡ ಪ್ರಣಾಮ !

ಒಬ್ಬ ಸಂತರು : ಯಾರಪ್ಪ ನೀನು ?

ಇನ್ನೊಬ್ಬರು: ನಾವೆಲ್ಲಾ ವಿರಕ್ತರು ಗೋಸಾಯಿಗಳು ತೀರ್ಥಯಾತ್ರೆಗೆ ಹೊರಟಿದ್ದೇವೆ... ನಮ್ಮಿಂದೇನಾಗಬೇಕು ಮಹಾಶಯ !

ತುಲಾರಾಂ: ತಮ್ಮೆಲ್ಲರ ಸಹಯೋಗವನ್ನು ಬಯಸಿಯೇ ಗೃಹವನ್ನು ತ್ಯಜಿಸಿ, ವಿರಕ್ತನಾಗಿ ಬಂದಿದ್ದೇನೆ, ಕೃಪೆ ಮಾಡಬೇಕು.... ನಾನೂ ತೀರ್ಥಯಾತ್ರೆಗೆ ಬರಲು ಸಿದ್ಧ... ದಯವಿಟ್ಟು ಸಹಯೋಗವನ್ನು ನೀಡಿ... ಗೋಸಾಯಿಗಳೆ... ನನ್ನ ಹೆಸರು ತುಲಾರಾಂ... ಜನ್ಮವಿತ್ತ ತಂದೆ ಆತ್ಮಾರಾಂ... ತಾಯಿ ಹುಲಸೀದೇವಿ.

ಸಂತರು : ಓಹ್ ! ಮಹಾ ತೇಜಸ್ವಿ... ಈತ ವಿದ್ಯಾವಂತನೆಂದು ಮುಖದರ್ಶನದಿಂದಲೇ ಗೊತ್ತಾಗುತ್ತದೆ... ದೈವೇಚ್ಛೆ..... ಆಗಬಹುದು ತುಲಾರಾಂ. ... ಆದರೆ ನೀನು.... ತುಲಾರಾಂ ಆಗಿರುವುದು ನಮ್ಮ ಪಂಥಕ್ಕೆ ಸರಿಹೊಂದುವುದಿಲ್ಲ. ಇಂದಿನಿಂದ ನಿಮ್ಮನ್ನು ಗೋಸ್ವಾಮಿ ಎಂದು ಕರೆಯಬೇಕು.

ಮತ್ತೊಬ್ಬ ಸಂತ : ಅದು ಸರಿ, ಅವರನ್ನು ಮುಂದೆ 'ಗೋಸ್ವಾಮಿ ತುಲಸೀದಾಸ್" ಎಂದು ಕರೆಯೋಣ.

ಸಂತರುಗಳು: ಸಾಧು... ಸಾಧು... ಅದು ಹಾಗೆಯೇ ಸರಿ.

ತುಲಾರಾಂ: ತಮ್ಮೆಲ್ಲರ ಆಜ್ಞೆ... ಇದೋ ಇಂದಿನಿಂದ ನನ್ನನ್ನು "ಗೋಸ್ವಾಮಿ ತುಲಸೀ ದಾಸ್" ಎಂದೇ ಕರೆಯಿರಿ.

ಸಂತರು : ತಥಾಸ್ತು

o o o

ಗೋಸ್ವಾಮಿ ತುಲಸೀದಾಸ್ : ರಘುವರಾ !.... ಶ್ರೀರಾಮ... ನಿನ್ನ ಅನುಗ್ರಹದಿಂದ ತೀರ್ಥಯಾತ್ರೆಗಳು ಆದವು, ರಾಮೇಶ್ವರದಿಂದ ಬದರಿಕಾಶ್ರಮದವರೆಗೂ ನಿನ್ನ ಮಹಿಮೆಯನ್ನು ಕೊಂಡಾಡಿ ಬಂದದ್ದಾಯಿತು.

ಕಾಶಿಯಲ್ಲೇ ನೆಲೆಸಿದ್ದೇನೆ. ನಿನ್ನ ಅಮೃತೋಪಮಾನವಾದ ಚರಿತೆಯನ್ನು ತಿಳಿಭಾಷೆಯಲ್ಲಿ ಬರೆದಿದ್ದೇನೆ... ಅನುಗ್ರಹಿಸು ದೇವಾ ಶ್ರೀರಾಮ !.... ಲೋಕ ಕಲ್ಯಾಣವಾಗಲಿ!

(ಕಾಶಿಯಲ್ಲಿ) ಒಬ್ಬ : ಈ ಕಾಶೀನಗರದಲ್ಲಿ ಗೋಸ್ವಾಮಿ ತುಳಸೀದಾಸರಂತೆ ಬೇರೆ ನಿರಕ್ತರು ಇಲ್ಲ.... ಅವರು ಬರೆದಿರುವ "ರಾಮಚರಿತ ಮಾನಸ".... ಶ್ರೀರಾಮರ ಚರಿತ್ರೆ... ಹೃದಯಂಗಮವಾಗಿದೆ. ಶ್ರೀ ರಾಮನೇ ಅದರಲ್ಲಿ ಪ್ರತ್ಯಕ್ಷನಾಗಿದ್ದಾನೋ ಎಂಬಂತೆ ಕಾಣುತ್ತದೆ. ಅದು ಲೋಕ ಪ್ರಸಿದ್ಧವಾಗಲು ತಡವಿಲ್ಲ... ಅಮೋಘವಾದ ಗ್ರಂಥ!

ಕಾಶೀನಗರದ ಮತ್ತೊಬ್ಬ: "ಎಲ್ಲರ ಮುಖದಲ್ಲಿಯೂ ರಾಮಚರಿತ ಮಾನಸದ ನುಡಿಯೇ ಹೊರಬರುತ್ತಿದೆ. ಏನಾಶ್ಚರ್ಯ ?..... ಶ್ರೀರಾಮ ಎಲ್ಲಾ ನೀನು ಗೋಸ್ವಾಮಿ ತುಳಸೀದಾಸರಂತಹ ಭಕ್ತ ಶಿರೋಮಣಿಯ ಮೂಲಕ.... ಲೋಕಕ್ಕೆ ಮಾಡಿದ ದೊಡ್ಡ ಶಿಷ್ಟ ಪರಿಪಾಲನೆ ಅಲ್ಲವೆ? .... 'ಜೈ ಶ್ರೀರಾಮ್ ಜೀ ಕೀ' ಜೈ ಗೋಸ್ವಾಮಿ ತುಳಸೀದಾಸ್ ಕೀ....

ಇನ್ನೊಬ್ಬ : ಗೋಸ್ವಾಮಿ ತುಲಸೀದಾಸ್‌ರವರು ಶ್ರೀರಾಮನ ಕೃಪೆಗೆ ಪಾತ್ರರಾದ ಭಕ್ತ ಶಿರೋಮಣಿ... ಅವರ "ರಾಮಚರಿತ ಮಾನಸ" ಗ್ರಂಥವನ್ನು ಯಾರೋ ಅಪಹರಿಸಲು ಹೋಗಿದ್ದರಂತೆ ಗ್ರಂಥದ ಬಳಿ ಸಾಗುತ್ತಲೇ ಅಗ್ನಿಜ್ವಾಲೆ ಎದ್ದಿತಂತೆ ಅಪಹರಣಕಾರರು ಭೀತಿಗೊಂಡು ಹಿಂದೆಗೆದರು. ಗೋಸ್ವಾಮಿ ತುಳಸೀದಾಸರಲ್ಲಿ ಕ್ಷಮೆ ಬೇಡಿದರು. ನಂತರ ಅವರ ಅನುನಾಯಿಗಳಾದರು.

ಬೇರೊಬ್ಬ: ಅಪಹಾಸ್ಯ ಪರಿಸ್ಥಿತಿಯಲ್ಲೇ ಜೀವನವನ್ನು ಕಳೆಯುತ್ತಾ ಬಂದರು. ಆಶ್ಚರ್ಯ ಜೀವನವನ್ನು ಕಳೆಯುತ್ತಾ ಬಂದರು. ಆಶ್ಚರ್ಯಕರವಾಗಿ ಅವರಿಗೆ ಶ್ರೀರಾಮನ ಅನುಗ್ರಹವಾಗುತ್ತಲೇ ಇದ್ದಿತು.... ಎಲ್ಲಿಂದಲೋ ಸಹಾಯ ದೊರಕುತ್ತಲೇ ಇದ್ದಿತು.... ಕೊನೆಗೆ ಅವರ ಪತ್ನಿಯೇ ಉಪದೇಶಕಳಾದಳು. ಅವರು ಸ್ತ್ರೀ ಮೋಹದಿಂದ ಬೇರಾಗಿ ಶ್ರೀರಾಮ ಪ್ರೇಮಿಗಳಾದರು. ಭಗವಂತ ಅವರಲ್ಲಿ ಉತ್ತಮ ರೀತಿಯಲ್ಲಿ ನೆಲೆಯಾಗಿದ್ದಾನೆ. 'ಜೈ, ಶ್ರೀರಾಮ್‌ಜೀ ಕೀ"

ಮಂಗಳಂ

೦ ೦ ೦

ಶ್ರೀ

ಜಗದ್ಗುರು ಶ್ರೀ ಶಂಕರಾಚಾರ್ಯ

ಪರಿಚಯ : ಈಗ್ಯೆ ಸುಮಾರು ೧೩೦೦ ವರ್ಷಗಳ ಹಿಂದೆ, ನಮ್ಮ ಭಾರತದಲ್ಲಿ ಪ್ರತಿಭಾವಂತರಾದ ಜಗದ್ಗುರು ಶಂಕರಾಚಾರ್ಯರು ಅವತರಿಸಿದರು. ಅವರ ತಂದೆ ಶಿವಗುರು ಮತ್ತು ತಾಯಿ ಆರ್ಯಾಂಬೆಯವರು ಬಹುಕಾಲ ತಪಸ್ಸನ್ನು ಆಚರಿಸಿ ಶ್ರೀ ಶಂಕರರನ್ನು ಪಡೆದರು. ಅವರು ತಂದೆತಾಯಿಗಳ ಒಬ್ಬರೇ ಪುತ್ರರು.

ತಂದೆಯವರು ಬೇಗ ದೈವಾಧೀನರಾದರು. ಇನ್ನೂ ಎಳೆವಯಸ್ಸಿನಲ್ಲಿಯೇ ಅವರ ಉಪನಯುನವಾಗಿ, ವೇದಶಾಸ್ತ್ರಗಳನ್ನೆಲ್ಲಾ ಬಹುಬೇಗ ಕಲಿತು ಧೀಮಂತರಾದರು. ಅವರು ವರಪುತ್ರರು. ಈಶ್ವರನ ಅವತಾರವೆಂದೇ ಹೇಳುತ್ತಾರೆ. ಜ್ಞಾನಿಗಳಾದುದರಿಂದ ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಒಲಿಸಿ, ಸನ್ಯಾಸ ತೆಗೆದುಕೊಂಡರು.

ವ್ಯಾಸ ಮಹಾಮುನಿಗಳ ಪರಂಪರೆಯಿಂದ ಬಂದ ಶ್ರೀ ಶ್ರೀ ಗೋವಿಂದಪಾದರೆಂಬುವರಲ್ಲಿ ಶಿಷ್ಯವೃತ್ತಿಯನ್ನು ಮಾಡಿ, ನಂತರ ಅವರ ಅನುಮತಿ ಪಡೆದು ಉತ್ತರ ದೇಶಕ್ಕೆ ಹೋದರು.

ಮಹಾ ಮಹಾ ಪಂಡಿತರಗಳನ್ನು ವಾದದಲ್ಲಿ ಸೋಲಿಸಿ, ತಮ್ಮ ಮತವನ್ನು ಸಾಧಿಸಿ ಗುಡುಗಿದರು ಮಹಾಮಹಿಮರು ಅವರು "ಪ್ರಸ್ಥಾನತ್ರಯ" ಎಂಬ ಮೂರು ಮುಖ್ಯವಾದ ಧರ್ಮ ಗ್ರಂಥಗಳಿಗೆ ಭಾಷ್ಯವನ್ನು ಬರೆದು ದಿಗ್ವಿಜಯ ಪಡೆದರು. ಅನೇಕ ಸ್ತೋತ್ರ ಪಾಠಗಳನ್ನೂ ರಚಿಸಿದರು ಕಾಲು ನಡಿಗೆಯಲ್ಲೇ ಭರತ ಖಂಡವನ್ನೆಲ್ಲಾ ಮೂರು ಬಾರಿ ಸುತ್ತಿ ನಾಲ್ಕು ದಿಕ್ಕುಗಳಲ್ಲೂ ಶಾರದಾ ಪೀಠಗಳ್ನು ಸ್ಥಾಪಿಸಿದ ಧರ್ಮಗುರು ಗಳಾದರು. ಈಗಲೂ ಪ್ರಪಂಚದ ಮೂಲೆ ಮೂಲೆಗಳಲ್ಲೆಲ್ಲಾ ಶಂಕರಾಚಾರ್ಯರ ಮತವನ್ನು ಹೇರಳವಾಗಿ ಕೊಂಡಾಡುತ್ತಿದ್ದಾರೆ. ಅಂತಹ

ಅವತಾರ ಪುರುಷರ ವೃತ್ತಾಂತವನ್ನು ಸಂಕ್ಷೇಪವಾಗಿಯಾದರೂ ತಿಳಿಯುವುದು ನಮ್ಮೆಲ್ಲರ ಕರ್ತವ್ಯವಲ್ಲವೆ ? ನಮ್ಮ ಕರ್ನಾಟಕದಲ್ಲೂ ಅವರದೊಂದು ಶಾರದಾಪೀಠ, ಶೃಂಗೇರಿಯಲ್ಲಿ ಇದೆಯೆಂಬುದನ್ನು ಅನೇಕರು ಬಲ್ಲವರಾಗಿದ್ದಾರೆ. ಅವರ "ಭಜಗೋವಿಂದ" ಸ್ತೋತ್ರವನ್ನು ಅನೇಕರು ಹೇಳಿಕೇಳಿ ವೃದ್ಧರಾಗಿದ್ದಾರೆ.

(ನದೀ ತೀರದಲ್ಲಿ)

ಶಂಕರರು : ಅಮ್ಮಾ !.... ಅಯ್ಯೋ ಅಮ್ಮಾ !!..... ನನ್ನನ್ನು ಮೊಸಳೆಯೊಂದು ಎಳೆಯು ತ್ತಿದೆ. ಇನ್ನು ಬದುಕುವುದು ಕಷ್ಟ.... ಅಮ್ಮಾ! ನಾನು ಕೇಳಿ ಕೊಂಡಂತೆ. ನನಗೆ ಸನ್ಯಾಸವನ್ನು ಸ್ವೀಕರಿಸಲು ಅಪ್ಪಣೆಯನ್ನು ಇನ್ನೂ ಕೊಡಲಿಲ್ಲ. ನನ್ನ ಜನ್ಮ ನೀರುಪಾಲಾಗುತ್ತಿದೆ.... ತಾಯೀ !.... ನನಗೆ ಈಗಲಾದರೂ ಸನ್ಯಾಸವನ್ನು ತೆಗೆದು ಕೊಳ್ಳಲು ಅಪ್ಪಣೆಕೊಂಡು... ಉಫ್....ಪರಮೇಶ್ವರಾ !.... ನನ್ನ ಜನ್ಮ ಸಾರ್ಥಕವಾಗಬೇಡವೆ? ... ಅಯ್ಯೋ....

ಆರ್ಯಾಂಬೆ : ಹಾಂ!.... ಓಹ್!!....ಶಂಕರಾ ನನ್ನ ಕಂದಾ!... ಮೊಸಳೆ..! ಅಯ್ಯೋ.... ದೇವಾ !.... ಯಾರಾದರೂ ಸಹಾಯ ಮಾಡಿ ಮಗೂ.... ಶಂಕರಾ!.....

ಶಂಕರರು : ತಾಯೇ!... ಬಲವಾದ ಎಳೆತಕ್ಕೆ ಸಿಕ್ಕಿದ್ದೇನೆ... ಉಫ್....ಇನ್ನು ತಡೆ ಯಲು ಸಾಧ್ಯವಾಗುತ್ತಿಲ್ಲಾ.... ಅಮ್ಮಾ !... ಸನ್ಯಾಸಕ್ಕೆ ಅಪ್ಪಣೆಕೊಡು. .. ಸಂಕಲ್ಪ ಸನ್ಯಾಸವನ್ನಾದರೂ ಪಡೆಯುತ್ತೇನೆ.... ತಾಯೇ !!.... ಅಂಗಲಾಚಿ ಬೇಡುತ್ತೇನೆ... ಅಪ್ಪಣೆ ಕೊಡು ತಾಯೇ !....

ಆರ್ಯಾಂಬೆ : ಅಯ್ಯೋ .... ಭಗವಂತಾ !!....ನನ್ನ ಒಬ್ಬನೇ ಮಗನನ್ನು ಸನ್ಯಾಸ ತೆಗೆದುಕೊಳ್ಳಲು ಹೇಗೆ ಬಿಡಲಿ !.... ಪರಮಾತ್ಮಾ ಕಾಪಾಡು !....

ಶಕರ : ಅಮ್ಮಾ !... ತಡಮಾಡಬೇಡ ತಾಯಿ.... ಬೇಗ ಅಪ್ಪಣೆ ಕೊಡು! ... ನಾನು ಮುಳುಗುವದರಲ್ಲಿದ್ದೇನೆ ... ಅಮ್ಮಾ !... ಅಮ್ಮಾ!!...

ಆರ್ಯಾಂಬೆ : ಶಂಕರಾ !... ಅಯ್ಯೋ ನನ್ನ ಶಂಕರಾ !... ದೇವರು ಈ ಗತಿಯನ್ನು ಕೊಟ್ಟನೇ./. ನಾನು ಭಾಗ್ಯಹೀನೆ...

ಶಂಕರ : ಅಮ್ಮಾ !... ಅಮ್ಮಾ !!..

ಆರ್ಯಾಂಬೆ : ಓಹ್... ಹಾಂ ! ಶಂಕರಾ.... ನೀನು ಬದುಕಬೇಕು.... ನಿನ್ನ ಅಂತ್ಯವನ್ನು ನೋಡಲಾರೆ !... ನೋಡಲಾರೆ ಶಂಕರಾ !... ಸಂಕಲ್ಪ ಸನ್ಯಾಸವನ್ನು ಪಡೆಯಲು ಅನುಮತಿ... ಉಹ್ ಅನುಮತಿ ಕೊಟ್ಟೆ

ದ್ದೇನೆ.... ಹಾ !... ದೇವಾ !!

ಶಂಕರ : ಧನ್ಯನಾದೆ ತಾಯೆ !... ಧನ್ಯನಾದೆ... ಇದೋ ಸಂಕಲ್ಪ ಸನ್ಯಾಸವನ್ನು ಸ್ವೀಕರಿಸಿದ್ದೇನೆ... ಓಹ್... ಮೊಸಳೆ ನನ್ನ ಕಾಲನ್ನು ಬಿಟ್ಟಿತು !.. ಬಿಟ್ಟಿತು ! ... ಬದುಕಿದೆ ತಾಯೆ !... ಬದುಕಿದೆ.

ಆರ್ಯಾಂಬೆ : ಕಂದಾ!... ಶಂಕರಾ !!... ಆಶ್ಚರ್ಯ !!! ಮೊಸಳೆ ನಿನ್ನ ಕಾಲನ್ನು ಬಿಟ್ಟಿತು... ಭಗವಂತನ ದಯೆ ಅಪಾರ !!!...

ಶಂಕರ : ತಾಯೇ ! ಈಗ ನಾನು ಸನ್ಯಾಸಿ, ಇನ್ನು ನಾನು ಇಲ್ಲಿ ಇರಲಾರೆ! .... ತೀರ್ಥ ಯಾತ್ರೆಗಳನ್ನು ಮಾಡುತ್ತಾ, ಸದ್ಗುರುವಿನಲ್ಲಿ ಕ್ರಮವಾಗಿ ಸನ್ಯಾಸವನ್ನು ಸ್ವೀಕರಿಸುವೆ....

ಆರ್ಯಾಂಬೆ : ಶಂಕರಾ !... ಶಂಕರಾ !! ಹೊರಟೇ ಬಿಟ್ಟೆಯಾ... ಶಂಕರಾ!!!

ಶಂಕರ : ಚಿಂತಿಸದಿರಿ ತಾಯೇ !... ನಾನು ನಿಮ್ಮ ಒಬ್ಬನೇ ಆಧಾರವೆಂದು ನನಗೆ ತಿಳಿದಿದೆ... ನೀವು ನನ್ನನ್ನು ನೆನೆಸಿದಾಗ ಖಂಡಿತಾ ಬಂದು ನಿಮ್ಮ ಸೇವೆ ಮಾಡುತ್ತೇನೆ... ಚಿಂತಿಸಬೇಡಿ...

ಇದೋ ಹೊರಟೆ ಎಲ್ಲರಿಗೂ ಮಂಗಳವಾಗಲಿ !... ಸದ್ಗುರೋ!...

(ಹೊರಡುವರು)

(ಶ್ರೀ ಶ್ರೀ ಗೋವಿಂದಪಾದರ ಆಶ್ರಮ)

ಶಂಕರ : ಮಧ್ಯ ಭಾರತಕ್ಕೆ ಬಂದಿದ್ದೇನೆ. ಇದೇ ನರ್ಮದಾ ನದಿಯಲ್ಲವ ? ಇಲ್ಲೇ ಶ್ರೀ ಶ್ರೀ ಗೋವಿಂದಪಾದರ ಆಶ್ರಮ ಇರಬೇಕು.... ಅವರಲ್ಲಿ ಶಿಷ್ಯವೃತ್ತಿಯನ್ನು ಮಾಡಿ ಕ್ರಮವಾಗಿ ಸನ್ಯಾಸವನ್ನು ತೆಗೆದುಕೊಳ್ಳಬೇಕಲ್ಲವೆ ?.....

ಗೋವಿಂದಪಾದರು : (ಧ್ಯಾನಾಸಕ್ತ ರೀತಿಯಲ್ಲಿ) ಓಹ್ !.. ಏನಿದು !.. ಯಾರೋ ತೇಜಸ್ವಿಯಾದ ಮಹನೀಯರು ನನ್ನಲ್ಲಿ ಬರುತ್ತಿದ್ದಾರೆ... ಯಾರಿರಬಹುದು ? .. ಓಹ್ ! ಈತ ಸಾಕ್ಷಾತ್ ಪರಮೇಶ್ವರನ ಅವತಾರ !! ... ಇಲ್ಲಿ ನಿಮಿತ್ತ ಮಾತ್ರಕ್ಕೆ ಶಿಷ್ಯನಾಗಿರಲು ಬರುತ್ತಿದ್ದಾರೆ... ನಾನು ಧನ್ಯ... ಪರಮೇಶ್ವರ...

ಶಂಕರ : ಹೇ.... ಸ್ವಾಮಿನ್ !.... ನಮೋನಮಃ....

ಗೋವಿಂದಪಾದರು.... ಹೋ!.... ತೇಜಸ್ವಿ!!.... ದಯ ಮಾಡಿ... ಎಲ್ಲಿಂದ ಬಂದಿರಿ ?

ಶಂಕರ : ಗುರವರ್ಯಾ !... ಕೇರಳ ಪ್ರಾಂತ್ಯದ ಕಾಲಟಿ ಎಂಬ ನಮ್ಮ ಗ್ರಾಮ

ದಿಂದ ಬಂದಿದ್ದೇನೆ. ತಾಯಿಯರ ಅನುಮತಿ ಪಡೆದು ಸಂಕಲ್ಪ ಸನ್ಯಾಸವನ್ನು ಪಡೆದಿದ್ದೇನೆ. ಗುರುವರ್ಯರು ದಯಮಾಡಿ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಕ್ರಮವಾಗಿ ಸನ್ಯಾಸರನ್ನು ಕೊಡಬೇಕೆಂದು ಬೇಡುತ್ತೇವೆ. ವೇದ, ವೇದಾಂತ ಪಾಠಗಳೆಲ್ಲಾ ಆಗಿದೆ....

ಗೋವಿಂದ : ಭಲೆ !.. ಬಾಲ ಸನ್ಯಾಸಿ... ಮೆಚ್ಚಿದೆ... ಅಗತ್ಯವಾಗಿ ಶಿಷ್ಯವೃತ್ತಿಯನ್ನು ತೆಗೆದುಕೊಳ್ಳಬಹುದು... ಕ್ರಮವಾಗಿ ಸನ್ಯಾಸವನ್ನೂ ಸ್ವೀಕರಿಸಬಹುದು...

ಶಿಷ್ಯವರ್ಯರೇ !.. ಇವರನ್ನು ನಮ್ಮ ಶಿಷ್ಯರಾಗಿ ಸ್ವೀಕರಿಸಿದ್ದೇನೆ. ಆದರದಿಂದ ಬರ ಮಾಡಿಕೊಳ್ಳಿ.

ಶಿಷ್ಯನೊಬ್ಬ : ಸಾಧು !... ಸಾಧು!!.. ಶಂಕರರು ನಮ್ಮ ಸಹಪಾಠಿಯಾಗಿದ್ದಲ್ಲಿ ನಾವು ಧನ್ಯರೇ ಅಲ್ಲವೆ ?...

ಗೋವಿಂದಪಾದರು : ಶಂಕರರೇ ನೀವು ಆಚಾರ್ಯ ವರ್ಗಕ್ಕೆ ಸೇರಿದಿರಿ. ಬಹಳ ದೊಡ್ಡ ಪಾಂಡಿತ್ಯವನ್ನು ಪಡೆದಿದ್ದೀರಿ. ನಿಮ್ಮ ಬುದ್ಧಿಶಕ್ತಿಗೆ ಮೇರೆ ಇಲ್ಲದಂತಾಗಿದೆ. ಮಹಾಮುನಿವ್ಯಾಸರ ನಂತರ ಬ್ರಹ್ಮಜ್ಞಾನ ಶುಕ ಮುನಿಯ ಮತ್ತು ಅವರ ಶಿಷ್ಯಶ್ರೇಷ್ಠರಾದ ಗೌಡಪಾದರ ಪರಂಪರೆಯಿಂದ ನಾವು ನಿಮಿತ್ತಮಾತ್ರಕ್ಕಾದರೂ ನಿಮಗೆ ಗುರುವಾದದ್ದು ಸಾರ್ಥಕವಾಗಿದೆ.

ಶಂಕರ : ತಮ್ಮ ಆಶೀರ್ವಾದ ಬಲದಿಂದ ನಮ್ಮ ಸಾಧನೆ ಆಗುತ್ತಿದೆ. ಉತ್ತರೋತ್ತರ ಲೋಕ ಕಲ್ಯಾಣವಾಗಬೇಕಾಗಿದೆ. ತಮ್ಮ ಅನುಗ್ರಹ ಬೇಕು.

ಗೋವಿಂದ : ಭಲೆ ಶಂಕರಾಚಾರ್ಯ... ನಿಮ್ಮ ಯೋಚನೆ ಸಾಧುವಾದದ್ದು, ಲೋಕ ಕಲ್ಯಾಣಕ್ಕಾಗಿಯೇ ಈ ಗುರು ಪರಂಪರೆ ಬಹಳವಾಗಿ ಶ್ರಮ ಪಟ್ಟಿದೆ.

ನೀವು ಇನ್ನು ಮುಂದೆ ಉತ್ತರ ಭಾರತಕ್ಕೆ ಹೋಗಿ ಕಾಶಿಯೇ ಆದಿಯಾಗಿ ಮಹಾನಗರಗಳಲ್ಲಿ ನಮ್ಮ ಮತ ಪ್ರಚಾರ ಮಾಡಿರಿ. ನಮ್ಮ ಮತ್ತು ನಮ್ಮ ಗುರು ಪರಂಪರೆಯ ಆಶೀರ್ವಾದ ಅನುಗ್ರಹಗಳು ನಿಮಗೆ ಸಂಪೂರ್ಣವಾಗಿ ಇದೆ.

ಭಾರತದಲ್ಲಿ ಈಗ ಅನೇಕ ವಿಕಂಡವಾದಿಗಲು ಹರಡಿವೆ. ಧರ್ಮನಷ್ಟವಾಗುತ್ತಿದೆ. ಛಿದ್ರ ಛಿದ್ರವಾದ ಗುಂಪುಗಳು ಹುಟ್ಟಿ ಪ್ರಜೆಗಳು ದಿಕ್ಕುಕೆಟ್ಟಿದ್ದಾರೆ. ನೀವು ದಯಮಾಡಿ ಅಂತಹವರನ್ನೆಲ್ಲಾ ಗೆದ್ದು ನಮ್ಮ ಮತದ ಅನುಯಾಯಿಗಳಾಗುವಂತೆ ಮಾಡಬೇಕು.

ಶಂಕರ : ಅಂತಹ ಅವಶ್ಯಕತೆ ಇರುವಂತೆ ತೋರುತ್ತದೆ. ತಮ್ಮ ಅಪ್ಪಣೆ ಆದರೆ, ಸಾಧಿಸುವ ಪ್ರಯತ್ನ ಮಾಡುತ್ತೇವೆ.

ಗೋವಿಂದ : ಅದು ನಿಮ್ಮಿಂದಲೇ ಸಾಧ್ಯ. ಅಲ್ಲದೆ, ಲೋಕಕಲ್ಯಾಣಕ್ಕಾಗಿ, ಬ್ರಹ್ಮಸೂತ್ರ, ಉಪನಿಷತ್ ಮತ್ತು ಗೀತಾ, ಭಾಷ್ಯಗಳನ್ನು ಮನಮುಟ್ಟುವಂತೆ ಬರೆಯಲು ನೀವೇ ಯೋಗ್ಯರು. ನಿಮ್ಮ ಧೈರ್ಯ ಸಾಹಸಗಳು ಮತ್ತೊಬ್ಬರಿಗೆ ಇಲ್ಲ. ಈ ಮಹಾ ಕಾರ್ಯವನ್ನು ಮಾಡಲು ಅನುವಾಗಿರಿ ! ನಿಮಗೆ ಜಯವಾಗಲಿ !!

ಶಂಕರ : ತಮ್ಮ ಅನುಗ್ರಹದಿಂದ ಎಲ್ಲಾ ಸಾಧಿಸಲು ಸಾಧ್ಯ. ನನಗೆ ಅಪ್ಪಣೆ ಕೊಡಿ ಗುರುದೇವ. ಹೋಗಿ ಬರುವೆ.

ಗೋವಿಂದ : ನಿಮಗೆ ಮಂಗಳವಾಗಲಿ !.. ಹೋಗಿ ಬನ್ನಿ !.. ಪರಮಾತ್ಮ ನಿಮಗೆ ಬೆಂಬಲವಾಗಿರಲಿ. ನಾನು ಧನ್ಯ...

ಆರ್ಯಾಂಬೆ : ಕಂದಾ!... ಶಂಕರಾ !!.... ನನ್ನ ಕಾಲವು ಸನ್ನಿಹಿತವಾಗುತ್ತಿದೆ.... ಬರುವೆಯಾ!... ಶಂಕರಾ !

ಶಂಕರ : ಓಹ್ ! ತಾಯೇ !... ನಿನ್ನ ಕರೆಯ ಧ್ವನಿ ನನ್ನ ಕಿವಿ ಮುಟ್ಟಿತು. ಇದೋ ಬಂದು ಬಿಡುವೆ....

ಶಿಷ್ಯ ವರ್ಗದವರೇ !... ಇದೋ ದಕ್ಷಿಣದ ಕಡೆಗೆ ಹೋಗಿ ಬರುತ್ತೇನೆ. ನನ್ನ ಮಾತೆಯ ಅಂತ್ಯಕಾಲ. ಅಲ್ಲಿ ನನ್ನ ಅವಶ್ಯಕತೆ ಇದೆ. ನೀವೆಲ್ಲಾ ಶಾಂತರಾಗಿ ಸಾಧನೆಯ ಮಾಡುತ್ತಿರಿ.

... ಇದೋ ತಾಯೆ ಬಂದು ಬಿಡುವೆ.

ಶಂಕರ : ಅಮ್ಮಾ !... ಅಮ್ಮಾ !!....

ಆರ್ಯಾಂಬೆ : ಓಹ್ !.... ಶಂಕರಾ !.... ಬಂದೆಯಾ.... ಧನ್ಯಳಾದೆ.... ಉಫ್.... ನಾನು ಇಲ್ಲಿ ಕೆಲವೇ ಅತಿಥಿ..... ಭಗವಂತಾ !

ಶಂಕರ : ತಾಯೇ !.... ದೇಹನಶ್ವರ .... ಈಶ್ವರನ ಪ್ರಾರ್ಥನೆಯ್ನು ಮಾಡಿರಿ.... ಅವನ ಅನುಗ್ರಹವೇ ನಮಗೆ ದಕ್ಕುವ ಕೊನೆಯ ವರ !

ಆರ್ಯಾಂಬೆ : ಹೌದು.... ಶಂಕರ.... ಇದನ್ನು ಚೆನ್ನಾಗಿ ಬಲ್ಲೆ.... ನಾರಾಯಣ ಸ್ತೋತ್ರವನ್ನು ನನಗೆ ಕೇಳುವಂತೆ ಪಠಿಸು... ಉಫ್.... ನನಗೆ ಹೇಳಲು ಆಗುತ್ತಿಲ್ಲ.

ಶಂಕರ : ಆಗಲಿ ತಾಯೇ !..... ಸ್ವಸ್ಥ ಮನಸ್ಸಿನಿಂದ ಕೇಳು....

ಆರ್ಯಾಂಭೆ : ಉಫ್..... ಶಂಕರಾ.... ಶಂಕರಾ.... (ಕೊನೆಯುಸಿರು)

ಶಂಕರ : ತಾಯೇ.... ದೇವತ್ಯಾಗಮಾಡಿ ಬಿಟ್ಟೆಯಾ !..... ಅಮ್ಮಾ !.....

ತಾಯೇ.... ನಿನಗೆ ಪಾಯೋಜ್ಯ ಪದವಿ ಉಂಟಾಗಲಿ !

ಗ್ರಾಮಸ್ಥ : ಶಂಕರಾ.... ಈ ತಾಯಿ ದೈವಾಧೀನಳಾದಳು. ನೀನು ಸಂನ್ಯಾಸಿ... ಬೇರಾರೂ ಉತ್ತರಾಧಿಕಾರಿಗಳಿಲ್ಲ.

ಶಂಕರ : ನೀವು ಗ್ರಾಮಸ್ಥರು ಉತ್ತರ ಕ್ರಿಯೆಗಳನ್ನು ಮಾಡಬಹುದಲ್ಲವೆ ?

ಗ್ರಮಾಸ್ಥರು : ನಮಗೆ ಅಧಿಕಾರವಿಲ್ಲ ನಾವಾರೂ ಮಾಡುವಂತಿಲ್ಲ...

ಶಂಕರ : ಧಿಕ್! ಧಿಕ್! ನಿಮ್ಮ ಈ ನೀಚ ಭಾವನೆಯು ಹೋಗಲಿಲ್ಲ... ನನ್ನ ತಾಯಿಯ ಉತ್ತರ ಕ್ರಿಯೆಯನ್ನು... ಸನ್ಯಾಸಿಯಾದರೂ, ಒಬ್ಬನೇ ಮಗನಾಗಿದ್ದುದರಿಂದ ಮಾಡುತ್ತೇನೆ.... ನೀವು ಹೋಗಿರಿ... ನಿಮಗೆ ಧಿಕ್ಕಾರವಿರಲಿ !...

ಗ್ರಾಮಸ್ಥರು : ಹೊರಟುಹೋಗುವರು....

(ಕಾಶಿನಗರದಲ್ಲಿ)

ಶಂಕರಾಚಾರ್ಯ: ಸುರೇಶ್ವರಾಚಾರ್ಯ.... ಅನೇಕ ಪಂಡಿತೋತ್ತಮರನ್ನು ವಾದದಲ್ಲಿ ಗೆದ್ದಾಯಿತು. ಇದು ಭಗವಂತನ ಇಚ್ಛೆ, ಇನ್ನು ಪ್ರಸ್ಥಾನ ತ್ರಯಗಳಾದ, ಬ್ರಹ್ಮಸೂತ್ರ, ಉಪನಿಷತ್ ಮತ್ತು ಗೀತಾ ಭಾಗಗಳನ್ನು ಆದಷ್ಟು ಸರಳವಾಗಿಯೂ, ಸ್ಪಷ್ಟವಾಗಿಯೂ ಭಾಷ್ಯ ರೂಪದಲ್ಲಿ ಬರೆಯುತ್ತೇನೆ.

ಸುರೇಶ್ವರಾಚಾರ್ಯ : ಅದೊಂದು ಮಹಾ ಲೋಕೋಪಕಾರದ ಕಾರ್ಯ, ದಯವಿಟ್ಟು ರಚಿಸಿರಿ ! ಗುರುವರ್ಯಾ !!

ಶಂಕರಾಚಾರ್ಯ: ಮಹಾಮಾತೆ ಶಾರದಾಂಬೆಯವರಲ್ಲಿ ವಂದಿಸಿ ಗೆಲುವನ್ನು ಪಡೆದ ವಿಚಾರ ನಿಮಗೆ ತಿಳಿದಿದೆ. ಈಗ ಈ ಶಕ್ತಿ ಸ್ವರೂಪಿಣಿಯನ್ನು ಭರತಖಂಡದ ನಾಲ್ಕು ದಿಕ್ಕುಗಳಲ್ಲಿಯೂ ಬೆಳಗುವಂತೆ ಪೀಠಾಶ್ರಯ ಗಳನ್ನಾಗಿ ಮಾಡಬೇಕು. ನಾಲ್ಕು ದಿಕ್ಕುಗಳಲ್ಲಿಯೂ ಶಾರದಾಪೀಠವನ್ನು ಸ್ಥಾಪಿಸಿ, ಲೋಕ ಕಲ್ಯಾಣಕ್ಕೆ ಅನುವಾಗುವಂತೆ ಮಾಡಬೇಕು.

ಸುರೇಶ್ವರ : ಸಾಧು ! ಸಾಧು ಗುರುವರ್ಯ !!... ಪೀಠ ಸ್ಥಾಪನೆ ನಡೆಯಲಿ. ಇದೋ ನೀವು ನಿಮ್ಮ ಅನುಯಾಯಿಗಳು.

ಶಿಷ್ಯ : ಗುರುವರ್ಯಾ ಇದು ಭಾರತದ ಉತ್ತರಭಾಗ, ಕಾಶ್ಮೀರವೆಂದು ಕರೆಯಲ್ಪಡುತ್ತಿದೆ.

ಶಂಕರ : ಈ ಪ್ರಾಂತ್ಯದಲ್ಲಿ ಶಾರದಾಂಬೆಯ ಪೀಠ ಸ್ಥಾಪನೆ ಆಗಲಿ ?.... ಪೂಜಾದಿ ವ್ಯವಸ್ಥೆಗಳನ್ನು ಮಾಡಿರಿ.

ಶಿಷ್ಯರು : ಹಾಗೇ ಆಗಲಿ !

ಶಿಷ್ಯರುಗಳು : ಪೂರ್ವಕ್ಕೆ ಪ್ರಯಾಣ ಬೆಳೆಸುವ....

ಶಂಕರ : ಪೂರ್ವ ಭಾರತದ ಯಾತ್ರೆ ನಡೆಯುತ್ತಿದೆ. ಜಗ್ನಾಥನಧಾಮಪುರಿಗ ಹೋಗುವ...

ಶಿಷ್ಯರು : ಗುರುವರ್ಯಾ ಇದೇ ಪೂರಿ ಜಗನ್ನಾಥ.... ಭಾರತದ ಪೂರ್ವ ಗಡಿ.

ಶಂಕರ : ಇಲ್ಲಿ ಶಾರದಾಂಬೆಯ ಪೀಠ ಸ್ಥಾಪನೆ ಪೂಜಾ ವ್ಯವಸ್ಥೆಗಳಾಗಲಿ.

ಶಿಷ್ಯರು.... : ತಥಾಸ್ತು...

ಶಂಕರ : ಇನ್ನು ಪಶ್ಚಿಮದ ಗಡಿಗೆ ಹೋಗುವ.

ಶಿಷ್ಯರು : ನಿಮ್ಮ ಆಜ್ಞೆಯಂತೆ ನಡೆಯಲಿ ಗುರುದೇವ.

ಶಂಕರ : ಇದೋ ನೋಡಿ, ಇದು ಪಶ್ಚಿಮದ ಅಂಚಿನ ಭಾಗ, ಶ್ರೀ ಕೃಷ್ಣನ ನಗರಿ, ದ್ವಾರಕೆ ಇಲ್ಲೇ ಇದ್ದುದು. ಇಲ್ಲಿ ಶಾರದಾಂಬೆಯ ಪೀಠವೂ ಪೂಜಾದಿಗಳು ನಡೆಯಲಿ....

ಶಿಷ್ಯರು : ಸಾಧು.... ಸಾಧು!!.... ಅಗತ್ಯವಾಗಿ ಸ್ಥಾಪಿತವಾಗಲಿ.

ಶಂಕರ : ಇನ್ನು ದಕ್ಷಿಣದ ಕಡೆ ಯಾತ್ರೆ ಮಾಡುವ.

ಶಿಷ್ಯರು : ಅವಶ್ಯವಾಗಿ ಮಾಡುವ ಗುರುವರ್ಯಾ...

ಶಂಕರ : ಇದು ದಕ್ಷಿಣ ಭಾಗ ಶೃಂಗಗಿರಿ... ಅದೋ ನೋಡಿ ಇಲ್ಲಿ ಶತೃಗಳೂ, ಮಿತ್ರರು ನೋಡಿ.... ಅಲ್ಲೊಂದು ಕಪ್ಪೆ ಬಿಸಿಲು ತಾಪದಿಂದ ಒದ್ದಾಡುತ್ತಿದೆ. ಸರ್ಪವೊಂದು ತನ್ನ ಹೆಡೆಯ ನೆರಳನ್ನು ಅದಕ್ಕೆ ನೀಡುತ್ತಿದೆ. ಇದು ಮಹಾ ಮೈತ್ರಿ ಕೂಟ. ಇಲ್ಲಿ ಶಾರದಾಂಬೆಯ ಪೂಜೆ ಪೀಠಸ್ಥಾಪಿತವಾಗಲಿ.

ಶಿಷ್ಯ : ಆಶ್ಚರ್ಯ.... ಆಶ್ಚರ್ಯ.... ಇದೊಂದು ಮೈತ್ರಿ ಕ್ಷೇತ್ರವೇ ಹೌದು. ಗುರುವರ್ಯಾ ತಮ್ಮ ಆಜ್ಞೆಯಂತೆ ಶಾರದಾ ಪೀಠವು ಸ್ಥಾಪಿತವಾಗಲಿ.

ಶಂಕರ : ಶಿಷ್ಯ ಶ್ರೇಷ್ಠರೇ... ಪ್ರಸ್ಥಾನತ್ರಯಕ್ಕೆ ಭಾಷ್ಯರನ್ನು ಬರೆದಾಯಿತು. ಅನೇಕ ಸ್ತೋತ್ರ ಪಾಠಗಳನ್ನು ಬರೆದಿದ್ದೇನೆ. ಎಲ್ಲವನ್ನೂ ಕಾಪಾಡಿಕೊಳ್ಳಿ.

ದೊಡ್ಡ ಪಂಡಿತರನ್ನು ವಾದಗಳಲ್ಲಿ ಗೆದ್ದಾಯಿತು. ಛಿದ್ರವಾದ ಮಠಗಳನ್ನು ಕೂಡಿಸಿ ಒಂದು ಮಾಡಿ ಆಯಿತು. ಶೈವರು, ಭೈರವಿಗಳನ್ನು ಗೆದ್ದುದಾಯಿತು. ಈಗ ಭಾರತದಲ್ಲಿ ನಮ್ಮ ಪರಂಪರೆಯ ಮತ ಸ್ಥಾಪನೆ ಆಗಿದೆ...

ಶಿಷ್ಯ : ಗುರುವರ್ಯಾ !.... ಆಚಾರ್ಯ ಗೋವಿಂದಪಾದರ ಆಜ್ಞೆ ನೆರವೇರಿದೆ.

ಶಂಕರ : ಹೌದು, ಅವರ ಆಜ್ಞೆನೆರವೇರಿದೆ. ಇನ್ನು ಇದನ್ನು ಪರಂಪರೆಯಾಗಿ ನಡೆಸಿಕೊಳ್ಳುವ ಕರ್ತವ್ಯ ನಿಮ್ಮದು.

ನನ್ನ ಕರ್ತವ್ಯ ಅಂತ್ಯವಾಯಿತು. ಇನ್ನು ಈ ದೇಹದಿಂದ ಏನೂ ಆಗಬೇಕಿಲ್ಲ.

ಹೇ ಕೇದಾರೇಶ್ವರಾ ! ನಿನ್ನ ಸನ್ನಿಧಿಗೆ ಬಂದಿರುವ ಈ ನನ್ನ ಶಿಷ್ಯರುಗಳನ್ನು ಅನುಗ್ರಹಿಸು !

ಶಿಷ್ಯವರ್ಯರೇ !.... ಇನ್ನು ನಾನು ಈ ಕೇದಾರೇಶ್ವರದಲ್ಲಿ ಗೃಹಾ ಪ್ರವೇಶ ಮಾಡುತ್ತೇನೆ. ಶಾಂತರಾಗಿ ನಿಮ್ಮ ನಿಮ್ಮ ಕರ್ತವ್ಯಗಳನ್ನು ನಡೆಸಿರಿ.

ಓಂ.... ! ಓಂ.... !! ಓಂ....!!!

ಜೈ ಕೇದಾರೇಶ್ವರ

ವೃದ್ಧವ್ಯಕ್ತಿ : ಡುಕರಿಂಕಣೆ.... ಡುಕರಿಂಕರಣೆ.... ಡುಕರಿಂಕರಣೆ....

ಶಂಕರಾಚಾರ್ಯರ ಶಿಷ್ಯ : ಗುರುವರ್ಯ !... ಯಾರೋ 'ಡುಕರಿಂಕರಣೆ' ಎಂಬ ವ್ಯಾಕರಣ ಸೂತ್ರವನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ.

ಶಂಕರಾಚಾರ್ಯ : ಓಹ್!... ಆತನೊಬ್ಬ ವೃದ್ಧ ಬ್ರಾಹ್ಮಣ.... ಆಯಸ್ಸು ಮುಗಿಯುವುದರಲ್ಲಿದೆ.... ಈ ಸಮಯದಲ್ಲು ವ್ಯಾಕರಣ ಸೂತ್ರವನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ. ಪಂಡಿತರಾಗಬೇಕೆಂಬ ಹಂಬಲ. ಈ ವೃದ್ಧಾಪ್ಯದಲ್ಲೂ ಬಿಡಲಿಲ್ಲ.... ಪ್ರಯೋಜನವಿಲ್ಲದ ಹವ್ಯಾಸ, ಆಕಾಂಕ್ಷೆ !....

ಶಿಷ್ಯರುಗಳು : ಹುಸಿನಗೆ ನಗುವರು.

ಶಂಕರಾಚಾರ್ಯರು : ಅಯ್ಯಾ ! ಬ್ರಾಹ್ಮಣ! ನಿಮಗೆ ವೃದ್ಧಾಪ್ಯ. ಈ ದೇಹವನ್ನು ಬಿಡುವ ಕಾಲ ಹತ್ತಿರವಾಗುತ್ತಿದೆ. ಈಗಲೂ ನಿಮಗೆ "ಡುಕರಿಂಕರಣೆ" ಯ ಹಂಬಲವೇಕೆ? ಡುಕರಿಂಕರಣೆ ನಿಮ್ಮನ್ನು ಈ ಕಾಲದಲ್ಲಿ ರಕ್ಷಿಸುವುದಿಲ್ಲ. ಈಗ ನಿಮ್ಮನ್ನು ಉದ್ಧಾರ ಮಾಡಬಲ್ಲ ಒಂದೇ ಮಾರ್ಗವೆಂದರೆ - ಗೋವಿಂದನನ್ನು ಭಜಿಸುವುದು.

"ಭಜಗೋವಿಂದಂ..... ಮೂಢಮತೆ"

ಗೋವಿಂದನನ್ನು ಭಜಿಸಿರಿ.... ಗೋವಿಂದನನ್ನು ಭಜಿಸಿರಿ.

ಶಂಕರಾಚಾರ್ಯರು ಗೊವಿಂದನನ್ನು ಭಜಿಸುತ್ತಾ ಸರಿವರು

ಶಿಷ್ಯ : ಓಹ್! ಗುರುಗಳು ಗೃಹಾಪ್ರವೇಶ ಮಾಡಿಬಿಟ್ಟರು.

ಮತ್ತೊಬ್ಬ : ಇದೇ ನಮಗೆ ಅವರ ಕೊನೆ ದರ್ಶನ.

ಇನ್ನೊಬ್ಬ : ಅಲ್ಲೇ ದೇಹ ತ್ಯಾಗ ಮಾಡಿ ಬಿಡುತ್ತಾರೆ. ಅದರ ಅರ್ಥವೇ ಗೃಹಾಪ್ರವೇಶ.

ಮೊದಲ ಶಿಷ್ಯ : ಹೇ ! ಜಗದ್ಗುರೋ ! ಶಂಕರಾಚಾರ್ಯ.... ನೀವು ಶಾರದಾ ಮಾತೆಯ ಪರಮ ಭಕ್ತರು. ನಿಮಗೆ ಸಾಯೋಜ್ಯ ಖಂಡಿತಾ.... ಜೈ ಜಗದ್ಗುರು ! ಜೈ ಜಗದ್ಗುರು....

ಜಯತು ಜಯತು ಶ್ರೀ ಶಾರದಾಂಬೆ
ಜಯತು ಜಯತು ಶ್ರೀ ಜಗದಂಬೆ
ವಿದ್ಯಾದಾತೆ ಸುಖ ಪ್ರದಾತೆ
ಮಂಗಳಗೀತೆ ಜಗನ್ಮಾತೇ
ಜಯ ಜಯ ಜಗಜ್ಜನನೀ
ಕರುಣಾ ಮಯೀ ಮನೋನ್ಮನೀ
ರಕ್ಷಿಸು ರಕ್ಷಿಸು ಜಗದ್ಧಾತ್ರೀ
ಕರುಣಿಸಿ ಸಲಹು ವಿಧಾತ್ರೀ
ಜಯ ಶ್ರೀ ಶಾರದಾಂಬೇ......
ಶ್ರೀ ಜಯ ಜಗದಂಬೇ......
ಶ್ರೀ ಶಾರದಾಂಬೇ ಶ್ರೀ ಜಗದಂಬೇ......
ಶ್ರೀ ಜಗದಂಬೇ ಶ್ರೀ ಶಾರದಾಂಬೇ......

ಮಂಗಳಂ

೦ ೦ ೦ ೦ ೦

ಭಗವಾನ್ ಬುದ್ಧ
(ಗೌತಮಬುದ್ಧ)

ಪಾತ್ರವರ್ಗ: ಶುದ್ಧೋದನ ಮಹಾರಾಜ, ಮಹಾರಾಜ್ಞಿ ಮಾಯಾದೇವಿ, ಜ್ಯೋತಿಷಿಗಳು, ರಾಜಗುರು ಸಿದ್ದಾರ್ಥ, ಯಶೋಧರಾ, ಬಾಲಕ ರಾಹುಲ ಹಾಗೂ ಅಂಗರಕ್ಷಕರು, ಕೆಲವರು ಅರಮನೆಯ ವಾಸಿಗಳು, ದಾಸಿಯರು.

ದೃಶ್ಯ – ೧

ಸ್ಥಳ: ಕಪಿಲ ವಸ್ತು

(ಲುಂಬಿನಿ ಉದ್ಯಾನದಲ್ಲಿ ಶುದ್ಧೋದನ ಮಹಾರಾಜ ಹಾಗೂ ಮಹಾರಾಣಿ ಮಾಯಾದೇವಿ ವಿಹರಿಸುತ್ತಿದ್ದಾರೆ)

ಮಾಯಾದೇವಿ: ಮಹಾರಾಜ, ವಿಹರಿಸಿದ್ದು ಸಾಕು, ಸ್ವಲ್ಪ ಹೊತ್ತು ಈ ಲತಾ ಮಂಟಪದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುವೆ.... (ಎನ್ನುತ್ತಾ ಲತಾ ಕುಟೀರವನ್ನು ಪ್ರವೇಶಿಸಿದಳು)

ಶುದ್ಧೋದನ: ಅಂತೆಯೇ ಆಗಲಿ ಮಹಾರಾಣಿ.... ಸ್ವಲ್ಪ ಹೊತ್ತು ವಿಶ್ರಮಿಸಿ ಕೋ. ನಾನು ಹೀಗೆಯೇ ಸುತ್ತಾಡಿ ಬರುವೆನು. (ಅಲ್ಲಿಂದ ತೆರಳುವನು)

ಸ್ವಲ್ಪ ಸಮಯದ ನಂತರ ಹಿಂದಿರುಗುವುದು. ರಾಣಿ ಮಾಯಾದೇವಿ ಉಲ್ಲಾಸದಿಂದ ರಾಜನ ಬರುವನ್ನೇ ನಿರೀಕ್ಷಿಸು ತ್ತಿರುವಳು. ರಾಜನು ಅವಳನ್ನು ಸಮೀಪಿಸಿದನು.

ಶುದ್ಧೋದನ: ಮಹಾರಾಣಿ ವಿಶ್ರಾಂತಿ ತೆಗೆದುಕೊಂಡಾಯಿತೆ? ಬಹಳ

ಸಂತಸದಿಂದ ಇರುವಂತಿದೆ.... ಏನನ್ನೋ ಹೇಳಲು ಉತ್ಸುಕರಾಗಿರುವಂತೆ ಅನಿಸುತ್ತಿದೆ.

ಮಾಯಾದೇವಿ: ಹೌದು ಪ್ರಭು.... ಒಂದು ಅದ್ಭುತ ಜರುಗಿತು.... ಅದನ್ನು ಹೇಳಲು ಉತ್ಸುಕಳಾಗಿದ್ದೇನೆ.

ಶುದ್ಧೋದನ: ಹೌದೇ ಮಹಾರಾಣಿ? ಏನು ಅದ್ಭುತ ಜರುಗಿತು? ಹೇಳುವೆಯಾ? ಕೇಳಲು ನಾನೂ ಕಾತುರನಾಗಿದ್ದೇನೆ.

ಮಾಯಾದೇವಿ: ಮಹಾರಾಜ, ವಿಶ್ರಾಂತಿ ತೆಗೆದುಕೊಳ್ಳಲೆಂದು ನಾನು ಅಮೃತಶಿಲೆಯ ಆಸನದ ಮೇಲೆ ಮಲಗಿದ್ದನಷ್ಟೇ. ಕಣ್ರೆಪ್ಪೆಗಳು ಒಂದನ್ನೊಂದು ಅಪ್ಪಿಕೊಂಡವು ಕೆಲವೇ ನಿಮಿಷಗಳಲ್ಲಿ ನಾನೊಂದು ಅದ್ಭುತವಾದ ಕನಸನ್ನು ಕಂಡೆ. ದೇವಲೋಕದ ಐರಾವತವನ್ನು ಹೋಲುವ ಐದು ದಾಡೆಗಳನ್ನುಳ್ಳ ಶ್ವೇತ ಆನೆಯೊಂದು ನನ್ನ ಗರ್ಭವನ್ನು ಪ್ರವೇಶಿಸಿದಂತೆ ಭಾಸವಾಯಿತು. ಹಾಗೆ ಈ ವನದ ಗಿಡಮರಗಳೆಲ್ಲಾ ಪುಷ್ಪ ವೃಷ್ಟಿಯನ್ನು ಸುರಿಸಿದವು.

ಶುದ್ಧೋದನ: ಅಂದರೆ....? ಯಾವ ಶುಭ ಸೂಚಕ....?

ಮಾಹಾದೇವಿ: ಮಹಾರಾಜ, ಕೆಲವೇ ಮಾಸಗಳಲ್ಲಿ ನಿಮಗೆ ಪುತ್ರೋತ್ಸವವಾಗಲಿದೆ. ನಾನು ಶ್ರೇಷ್ಠನಾದ ಪುತ್ರ ರತ್ನನಿಗೆ ಜನ್ಮವನ್ನು ಕೊಡಲಿರುವ ಸಂಕೇತದಂತೆ ಅನಿಸುತ್ತಿದೆ.

ಶುದ್ಧೋದನ: "ಹೌದೇ ? ನನಗೆಷ್ಟು ಸಂತಸವಾಗುತ್ತಿದೆ....! ಎಂಥಾ ಸವಿ ಸುದ್ದಿಯನ್ನು ತಿಳಿಸಿರುವೆ ನನ್ನ ರಾಣಿ.... ನಾನು ರಾಜ್ಯದಲ್ಲಿ ಡಂಗುರವನ್ನು ಸಾರಿಸಿ, ಈ ಶುಭ ಸಮಾಚಾರವನ್ನು ನನ್ನ ಪ್ರಜೆಗಳಿಗೆ ತಿಳಿಸುವೆನು. ಎಲ್ಲೆಲ್ಲೂ ಉತ್ಸವಗಳು ಜರುಗಲಿ ಹಾಗೇ ರಾಜಗುರುಗಳನ್ನು ಕರೆಸಿ, ಈ ಶುಭ ಸಂಕೇತಗಳನ್ನೂ ಪುತ್ರನ ಆಗಮನದ ಶುಭ ವಾರ್ತೆಯನ್ನು ತಿಳಿಸಿ, ರಾಜಕುಮಾರನ ಭವಿಷ್ಯ ಹೇಗಿರುವುದೆಂದು ವಿಚಾರಿಸುವೆನು. ನಡೆ. ಅರಮನೆಗೆ ಹಿಂದಿರುಗೋಣ."

* * *

ದೃಶ್ಯ – ೨

(ಶುದ್ಧೋದನ ಮಹಾರಾಜನ ಆಸ್ಥಾನ. ಮಹಾರಾಣಿ ಹಾಗೂ ಮಹಾರಾಜರು ಸಿಂಹಾಸನ ಗಳಲ್ಲಿ ಆಸೀನರಾಗಿದ್ದಾರೆ. ರಾಜಗುರುಗಳ ಆಗಮನವಾಗುತ್ತದೆ. ಇಬ್ಬರೂ ಗುರುಗಳಿಗೆ ವಂದಿಸಿ ಆಶೀರ್ವಾದವನ್ನು ಪಡೆಯುತ್ತಾರೆ.)

ರಾಜಗುರು: ಮಂಗಳವಾಗಲಿ ಮಹಾರಾಜ. ಎಲ್ಲರೂ ಕುಶಲವೇ? ನನಗೆ ಬರಲು ಅಪ್ಪಣೆ ಕೊಡಿಸಿದ್ದೀರಿ. ವಿಷಯ ಏನೆಂದು ಕೇಳಬಹುದೇ?

ಶುದ್ಧೋದನ: ಹೌದು ಆಚಾರ್ಯರೇ.... ನಿಮಗೊಂದು ಸಂತಸದ ಸುದ್ದಿಯನ್ನು ಅರುಹಲು ಕರೆಸಬೇಕಾಯಿತು. ನಮ್ಮ ಮಹಾರಾಣಿಯವರು ಗರ್ಭವತಿಯಾಗಿರುವುದನ್ನು ಪ್ರಥಮವಾಗಿ ನಮಗೆ ತಿಳಿಸಬೇಕೆಂದು ಉತ್ಕಟನಾಗಿರುವೆ. ಹಾಗೆ ಈ ಸಂದರ್ಭದಲ್ಲಿ ಒಂದು ಅದ್ಭುತ ಸಂಗತಿ ಜರುಗಿದೆ. ಅದೇನೆಂದರೆ, ಮಹಾರಾಣಿಯವರು ಲುಂಬಿನಿ ಉದ್ಯಾನವನದ ಲತಾ ಕುಟೀರದಲ್ಲಿ ವಿಶ್ರಾಂತಿ ತೆಗೆದುಕೊಳ್ಳು ತ್ತಿರುವಾಗ ಒಂದು ಅದ್ಭುತವಾದ ಸ್ವಪ್ನವನ್ನು ಕಂಡಿದ್ದಾರೆ. ಸ್ವಪ್ನದಲ್ಲಿ, ಐದು ದಾಡೆಗಳನ್ನುಳ್ಳ ಶ್ವೇತ ಆನೆಯೊಂದು, ಮಹಾರಾಣಿಯ ಗರ್ಭವನ್ನು ಪ್ರವೇಶಿಸಿದೆ. ವನದ ತರುಲತೆಗಳು ಪುಷ್ಪ ವೃಷ್ಟಿಯನ್ನು ಸುರಿಸಿವೆ. ಇದು ಶುಭ ಸಂಕೇತವೆಂದೇ ನನ್ನ ಅನಿಸಿಕೆ. ನನಗೆ ಪುತ್ರರತ್ನನು ಜನಿಸಲಿದ್ದಾನೆ.... ಅವನ ಭವಿಷ್ಯ ಹೇಗೆ ಇರುತ್ತದೆಂದು ತಿಳಿದುಕೊಳ್ಳುವ ಬಯಕೆಯಾಗುತ್ತಿದೆ. ಅದನ್ನ ತಿಳಿಯಲೆಂದೇ ಕರೆಸಿದೆ ಆಚಾರ್ಯರೇ....

ರಾಜಗುರು: ಶುಭಮಸ್ತು. ರಾಜಕುಮಾರನ ಆಗಮನದ ಸುದ್ದಿ ನಿಜಕ್ಕೂ ಸಂತಸವನ್ನು ತರುವುದರಲ್ಲಿ ಸಂಶಯವಿಲ್ಲ. ಪ್ರಜೆಗಳು ಯುವರಾಜನ ಆಗಮನವನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾರೆ. ಯಾವುದಕ್ಕೂ ಪ್ರಖ್ಯಾತ ಜ್ಯೋತಿಷಿಗಳನ್ನು ಕರೆಸಿ, ಸಮಾಲೋಚನೆ ನಡೆಸಿ, ಗ್ರಹಗತಿಗಳು ಏನನ್ನು ಹೇಳುತ್ತವೆ ಎನ್ನುವುದನ್ನು ವಿಚಾರಿಸಿ ತಿಳಿಸು ತ್ತೇನೆ. ಯಾವುದಕ್ಕೂ ಸುಸಮಯ ಸನ್ನಿಹಿತ ವಾಗಲಿ ಪ್ರಭು.... ನೀವು ನಿಶ್ಚಿಂತರಾಗಿರಿ. ಎಲ್ಲವೂ ಶುಭವಾಗುವುದು.

ಶುದ್ಧೋದನ: ಅಂತೆಯೇ ಆಗಲಿ ಗುರುಗಳೇ, ನನಗೀಗ ಸಮಾಧಾನ

ವುಂಟಾಯಿತು.

(ರಾಜಗುರು ನಮ್ಮಿಬ್ಬರಿಗೂ ಮಂಗಳವಾಗಲಿ ಎಂದು ಹಾರೈಸಿ, ನಿರ್ಗಮಿಸುವರು.)

* * *

ದೃಶ್ಯ – ೩

(ಶುದ್ಧೋದನ ಹಾಗೂ ಮಾಯಾದೇವಿ ಒಡ್ಡೋಲಗದಲ್ಲಿ ಕುಳಿತಿರುತ್ತಾರೆ. ಮಹಾರಾಣಿಯ ಮುಖ ಕಂದಿರುವುದನ್ನು ಶುದ್ಧೋದನ ಗಮನಿಸುತ್ತಾನೆ.)

ಶುದ್ಧೋದನ: ರಾಜ್ಞೀ, ಯಾಕೆ ಮುಖವು ಬಾಡಿದೆಯಲ್ಲ... ಆಯಾಸವಾಗುತ್ತಿದೆಯೇ ?

ಮಾಯಾದೇವಿ: ಇಲ್ಲ ಮಹಾರಾಜ ಆತಂಕವಾಗುತ್ತಿದೆ. ಇದುವರೆಗೂ ಯಾವ ಜ್ಯೋತಿಷಿಗಳು ಅರಮನೆಗೆ ಬಂದಿಲ್ಲ. ರಾಜಗುರುವು ಇತ್ತ ಬಂದಿಲ್ಲ. ಏಕೆ ತಡವಾಗುತ್ತಿದೆ ಎಂಬ ಚಿಂತೆ ಬಾಧಿಸುತ್ತಿದೆ.

ಶುದ್ಧೋದನ: ಚಿಂತಿಸದಿರು ರಾಣಿ, ರಾಜಗುರುಗಳು ಪ್ರಖ್ಯಾತ ಜ್ಯೋತಿಷಿಗಳನ್ನು ಅರಸುತ್ತಿದ್ದಾರೆ. ನಮ್ಮ ರಾಜಕುಮಾರನ ಜನನ ಎಂದರೆ ಅದೇನು ಸಾಮಾನ್ಯವಾದ ಮಾತೆ?.... ಡಂಗುರವನ್ನು ಕೇಳಿದ ಪ್ರಜೆಗಳು ಹರ್ಷೋದ್ಗಾರ ಮಾಡುತ್ತಿದ್ದಾರೆ. ನಿತ್ಯೋತ್ಸವವನ್ನು ನಡೆಸುತ್ತಿದ್ದಾರೆ.

ಮಯಾದೇವಿ: ಪುತ್ರನ ಆಗಮನಕ್ಕಾಗಿ ಮನವು ಹಾತೊರೆಯುತ್ತಿದೆ. ಕಣ್ಣುಗಳು ಅವನ ಮುಖಾರವಿಂದವನ್ನು ಕಾಣಲು ಕಾತರಿಸುತ್ತಿದೆ .... ಪ್ರಸವದ ಸಮಯ ಸಮೀಪಕ್ಕೆ ಬರುತ್ತಿರುವಂತೆಯೇ, ನನ್ನಲ್ಲಿ ನಾನಾ ಭಾವನೆಗಳು ಧುಮ್ಮಿಕ್ಕುತ್ತಿವೆ ....

ಶುದ್ಧೋದನ: ಉದ್ವೇಗಕ್ಕೆ ಒಳಗಾಗದಿರು ಮಾಯಾದೇವಿ. ನನಗೂ ರಾಜಕುಮಾರನ ಮುಖವನ್ನು ಎಂದಿಗೆ ಕಂಡೇನು ಎಂಬ ಹಂಬಲ ದಿನ ದಿನಕ್ಕೂ ಹೆಚ್ಚಾಗುತ್ತಿದೆ. ನಮ್ಮ ಮಗನು ಕೀರ್ತಿವಂತನಾಗಬೇಕು. ನಾವು ಹೆಮ್ಮೆ ಪಡಬೇಕು. ನೀನು ಮಹಾಮಾತೆ ಎಂದು ಹೆಸರುಗಳಿಸಬೇಕು.

ಮಯಾದೇವಿ: ಈ ಶುಭಗಳಿಗೆಗಾಗಿ ನಾವುಗಳು ಕಾಯುತ್ತಲಿದ್ದೇವೆ. ನಮಗೆ

ಶುಭಯೋಗವನ್ನು ತರುವಂತಹ ಮಗನೇ ನನಗೆ ಹುಟ್ಟಲಿ ಎಂದು ನನಗೆ ಆಸೆ.

ಶುದ್ಧೋದನ: ನನ್ನ ಆಸೆಯೂ ಅದೇ ಆಗಿದೆ ಮಹಾರಾಣಿ. ಯಾಕೋ ಬಳಲಿರು ವಂತೆ ಕಾಣುತ್ತೀಯ. ಹೋಗಿ ವಿಶ್ರಮಿಸಿಕೋ . . . ಯಾರಲ್ಲೀ.... ಮಹಾರಾಣಿಯವರನ್ನು ಅಂತಃಪುರಕ್ಕೆ ಕರೆದೊಯ್ದು ವಿಶ್ರಾಂತಿ ತೆಗೆದುಕೊಳ್ಳಲು ಅನುವು ಮಾಡಿಕೊಡಿ.

(ದಾಸಿಯರು ಬಂದು ಮಹಾರಾಣಿಯನ್ನು ಎಬ್ಬಿಸಿಕೊಂಡು ಅಂತಃಪುರಕ್ಕೆ ಕರೆದೊಯ್ಯುವರು.)

* * *

ದೃಶ್ಯ – ೪

(ಶುದ್ಧೋದನ ಮಹಾರಾಜನು ಗಂಭೀರ ವದನನಾಗಿದ್ದಾನೆ. ಮಾಯಾದೇವಿಯು ಪ್ರಸವ ಗೃಹದಲ್ಲಿದ್ದಾಳೆ... ಜ್ಯೋತಿಷಿಗಳ ಆಗಮನವಾಗಿದೆ.)

ಶುದ್ಧೋದನ: ಜ್ಯೋತಿಷಿಗಳೇ ಇದೇನಿದು? ಮೌನವಾಗಿಬಿಟ್ಟಿರಲ್ಲ. ಯಾವ ಗಳಿಗೆಯಲ್ಲಾದರೂ, ಶಿಶುವಿನ ಜನನ ಸಂಭವಿಸಲಿದೆಯೆಂದು ದಾದಿಯರು ತಿಳಿಸಿರುವರು. ಏಕೆ ಏನಾದರೂ ಅಪಚಾರವಾಗ ಲಿದೆಯೇ ?

ಜ್ಯೋತಿಷಿ: ಇಲ್ಲ ಮಹಾಪ್ರಭು.... ಮಹಾರಾಣಿಗೆ ಸುಖ ಪ್ರಸವ ಆಗಲಿದೆ .... ಆದರೆ ಹೊರಗಿನ ವಾತಾವರಣದಲ್ಲಿ ಏರುಪೇರಾಗುತ್ತಿರುವುದು ತಮ್ಮ ಗಮನಕ್ಕೆ ಬರಲಿಲ್ಲವೆ .... ?

ಶುದ್ಧೋದನ: ಅಂದರೆ! ವಾತಾವರಣಕ್ಕೂ ಮಗುವಿನ ಜನನಕ್ಕೂ ಏನು ಸಂಬಂಧ..?

ಜ್ಯೋತಿಷಿ: ಇದೆ ಮಹಾರಾಜ. ಹೊರಗೆ ನಕ್ಷತ್ರಗಳು ಆಕಾಶದಿಂದ ವೃಷ್ಟಿಯ ರೂಪದಲ್ಲಿ ಭೂಮಿಗೆ ಬೀಳುತ್ತಿವೆ. ಹೀಗೆ ಹಿಂದೆಂದೂ ಜರುಗಿರ ಲಿಲ್ಲ. ಮಗುವಿನ ಜನನಕ್ಕೂ ಈ ಪ್ರಕೃತಿಯ ವೈಚಿತ್ರ್ಯಕ್ಕೂ ಸಂಬಂಧ ವಿದೆಯೆಂದು ಭಾಸವಾಗುತ್ತಿದೆ....

ದಾಸಿಯರು: (ಓಡೋಡಿ ಬಂದು) ಮಹಾಪ್ರಭು ... ಜಯವಾಗಲಿ... ಮಹಾರಾಣಿಯವರಿಗೆ ಪುತ್ರರತ್ನ ಜನನವಾಗಿದೆ... (ಕೈಮುಗಿದು

ನಿರ್ಗಮಿಸುವರು)

ಶುದ್ಧೋದನ: (ಆನಂದದಿಂದ) ಸಿಹಿಸುದ್ದಿಯನ್ನೇ ತಿಳಿಸಿರುವರು.. ಜ್ಯೋತಿಷಿಗಳೇ ಕೇಳಿದಿರಲ್ಲ. ಶಿಶುವಿನ ಜನನ ಆಗಿದೆ. ಸಮಯ, ಘಳಿಗೆ ಎಲ್ಲವನ್ನೂ ಕೂಲಂಕಷವಾಗಿ ಎಣಿಕೆ ಮಾಡಿ, ರಾಜಕುಮಾರನ ಭವಿಷ್ಯ ಹೇಗಿದೆಯೆಂದು ತಿಳಿಸಿ.

ಜ್ಯೋತಿಷಿಗಳು: (ಬೆರಳುಗಳ ಎಣಿಕೆ ಮಾಡುತ್ತಾ, ಲಗ್ನ, ಅಂಶಗಳನ್ನು ಪರಿಶೀಲಿಸಿ, ಕುಂಡಲಿಯನ್ನು ಹಾಕಿ, ಗಂಭೀರವದನರಾಗಿ ಮಹಾರಾಜನ ಕಡೆ ತಿರುಗುವರು) ಮಹಾರಾಜ ರಾಜಕುಮಾರ ಬಹಳ ಪಶಸ್ತವಾದ ಸಮಯದಲ್ಲಿ ಜನಿಸಿದ್ದಾನೆ.... ರಾಜಕುಮಾಂರನ್ನು ಮೀರಿಸುವವರಿಲ್ಲ.... ಆದರೆ.... (ಅನುಮಾನಿಸುವರು)

ಶುದ್ಧೋಧನ : ಆದರೆ ?... ಆದರೇನು ಹೇಳಿ ಜ್ಯೋತಿಷ್ಯರೆ ಹೇಳಿ !.. ಸ್ಪಷ್ಟವಾಗಿ ಹೇಳಿ!!

ಜ್ಯೋತಿಷಿ: ಶಿಶುವಿಗೆ ಸಿದ್ಧ ಪುರುಷನಾಗುವ ಯೋಗವಿದೆ.....

ಶುದ್ಧೋಧನ : ಅದು ಸರಿ.... ಮುಂದೇನು ?.....

ಜ್ಯೋತಿಷಿ: ಸಿದ್ಧ ಪುರುಷನಾಗುವನು.... ರಾಜ್ಯವನ್ನಾಳುವ ಯೋಗ ಕಂಡು ಬರುತ್ತಿಲ್ಲ...

ಶುದ್ಧೋಧನ : ಹಾಂ !.. ಹಾಗಂದರೇನು ? ಆ ಶಿಶು ರಾಜ ಪುತ್ರನಲ್ಲವೆ ? ...

ಜ್ಯೋತಿಷಿ :ರಾಜಪುತ್ರನೇ ಹೌದು, ಆದರೆ, ರಾಜ್ಯವನ್ನಾಳುವ ಯೋಗವಿಲ್ಲ...

ಶುದ್ಧೋಧನ : ವಿವರವಾಗಿ ಹೇಳಿ ಜ್ಯೋತಿಷ್ಯರೆ.... ಸಂಕಟದಲ್ಲಿ.... ತಪಿಸುತ್ತಿದ್ದೇನೆ.... ದಯವಿಟ್ಟು.... ತಿಳಿಸಿ

ಜ್ಯೋತಿಷಿ: ಹಾಂ! ಹಾಂ!... ಪ್ರಭುಗಳು ಅಷ್ಟೊಂದು ದೈನ್ಯರಾಗಬಾರುದ...
ಶಿಶುವಿಗೆ ಮಹಾ ಯೋಗ ಪುರುಷನಾಗುವ ಯೋಗವಿದೆ. ಅರಮನೆಯಲ್ಲಿ ಅವನು ಬಹಳ ಕಾಲ ಇರುವುದಿಲ್ಲ. ವಿರಕ್ತ ಜೀವನವನ್ನು ಮಾಡುತ್ತಾನೆ. ಉತ್ತರೋತ್ತರ ಪ್ರಪಂಚವನ್ನು ಉದ್ಧಾರ ಮಾಡುವ, ಮಹಿಮಾವಂತ ಮತ ಸ್ಥಾಪಕನಾಗುವ ಯೋಗವಿದೆ.

ಶುದ್ಧೋಧನ : ಆಂ ! ಇದು ನಿಜವೇ ?....

ಜ್ಯೋತಿಷಿ: ನನಗೆ ಕಂಡುಬಂದ ನಿಜ ಸಂಗತಿಯನ್ನು ಅರಿಕೆ ಮಾಡಿಕೊಳ್ಳುತ್ತಿದ್ದೆನೆ... ಪ್ರಭೋ !

* * *

ದೃಶ್ಯ – ೫

ಶುದ್ಧೋಧನ : ಮಾಯಾದೇವಿ!... ನಮ್ಮ ಶಿಶುವಿಗೆ ರಾಜನಾಗುವ ಯೋಗ ವಿಲ್ಲ... ಆದರೂ ಮಹಾಯೋಗಿ ಆಗುವನಂತೆ.... ಜ್ಯೋತಿಷ್ಯರು ಹೇಳಿದ್ದಾರೆ.

ಮಾಯಾ : ಹಾಂ!... ಹಾಗೆಂದರೇನು ?... ಅವನು ರಾಜಪುತ್ರನಲ್ಲವೆ ?...

ಶುದ್ಧೋಧನ : ರಾಜ್ಯವಾಳುವ ಜಾತಕ ಫಲವಿಲ್ಲ... ನಾವೇನೂ ಮಾಡ ಲಾರೆವು.... ದೈವ ನಿಯಾಮಕ... ಆದರೂ

ಮಾಯಾ : ಹೇಳಿರಿ ಮಹಾರಾಜಾ...

ಶುದ್ಧೋಧನ : ಮಾಯಾ ! ಅವನಿಗೆ ಹೊರ ಪ್ರಪಂಚದ ಅರಿವು ಇಲ್ಲದಂತೆ, ನಾವೇ, ಜೋಪಾನವಾಗಿ ನೋಡಿಕೊಳ್ಳಬೇಕು.

ಮಾಯಾ : ಅಂದರೆ ?

ಶುದ್ಧೋಧನ : ಅಂದರೆ... ಅವನು ಯೋಗಿಯಾದರೂ... ರಾಜನಾಗಿಯೇ ಇರಬೇಕು... ಅರಮನೆಯಲ್ಲೇ ಇರಬೇಕು. ಅದಕ್ಕಾಗಿ ಜೋಪಾನ ಮಾಡಬೇಕು.

ಮಾಯಾ : ಅದು ಹೇಗೆ ಸಾಧ್ಯವೆಂದು ನಿಮಗೇ ಗೊತ್ತು ಮಹಾ ರಾಜಾ !.. ನಾನು ಏನನ್ನು ತಾನೇ ಹೇಳಬಲ್ಲೆ ?...

ಶುದ್ಧೋಧನ : ... ಇರಲಿ ನೋಡುವ...

ಕೆಲವೇ ದಿನಗಳಲ್ಲಿ ಮಾಯಾದೇವಿಯು ಮೃತಳಾಗುವಳು. ಗೌತಮಿ ಎಂಬ ದಾಸಿಯು ರಾಜಕುಮಾರನನ್ನು ಸಾಕಿ ಸಲಹಿ ಬೆಳೆಸುವಳು. ಈ ಕಾರಣ ದಿಂದ ಸಿದ್ಧಾರ್ಥನು ಗೌತಮನೆಂದು ಕರೆಯಲ್ಪಟ್ಟನು.

○ ○ ○

ದೃಶ್ಯ – ೬

ಸಾರಥಿ : ರಾಜಕುಮಾರರು ಬಹುಬೇಗ ಮದುವೆಯಾದರು. ಹುಂ... ಎಂದಾದರೊಂದು ದಿನ ಮದುವೆ ಆಗಬೇಕಲ್ಲವೆ ?

ರಾಜಕುಮಾರ ಸಿದ್ಧಾರ್ಥ : ಅದು ಮಹಾರಾಜರ ಇಚ್ಛೆ ಮತ್ತು ಆಜ್ಞೆ... ಸಾಕುಮಾತೆ ಗೌತಮಿಯೂ ಇದಕ್ಕೆ ಪೂರ್ಣ ಬೆಂಬಲವನ್ನು ಕೊಟ್ಟು ಬಿಟ್ಟರು.

ಸಾರಥಿ : ಈ ವಿಹಾರ ಕಾಲದಲ್ಲೇ ನಮ್ಮ ಭೇಟಿ ಸಾಧ್ಯ ವನವಿಹಾರಕ್ಕಾದರೂ ರಾಜರ ಅಪ್ಪಣೆ ಆಗಿದೆಯಲ್ಲಾ.

ಸಿದ್ಧಾರ್ಥ : ಹೌದು, ರಾಜರು ಅಪ್ಪಣೆ ಕೊಟ್ಟರು. ನನಗೆ ಅರಮನೆಯಲ್ಲೇ ಕಾಲ ಕಳೆಯಲು ಆಗುತ್ತಿರಲಿಲ್ಲ.

ಸಾರಥಿ : ಅದು ಸರಿ... ವಿಹಾರವೂ ಅವಶ್ಯಕವಲ್ಲವೆ ?

ಸಿದ್ಧಾರ್ಥ : ಸಾರಥಿ!... ಅದೇನು ?... ಅಲ್ಲಿ ಜನ ಗುಂಪಾಗಿದ್ದಾರೆ... ರೋಧಿಸುತ್ತಿದ್ದಾರೆ.

ಸಾರಥಿ : ಅದೇ? ಅಲ್ಲಿ ಒಂದು ಮೃತ ಶರೀರವಿದೆ. ಬಾಂಧವರು ಅಳುತ್ತಿದ್ದಾರೆ.

ಸಿದ್ಧಾರ್ಥ : ಪಾಪ !....ಬಂಧುವು ಅಗಲಿದನೆಂದು ದುಃಖ.... ಹುಂ ! ಸಾವು ಯಾರನ್ನೂ ಬಿಡುವುದಿಲ್ಲ. ದುಃಖವು ಯಾರಿಗೂ ತಪ್ಪಿದ್ದಲ್ಲ... ಸಾರಥಿ!

ಸಾರಥಿ : ಅದು ಸರಿ ರಾಜಕುಮಾರ ಇದೊಂದು ಕಟು ಸತ್ಯ. ನಾವೆಲ್ಲ ಒಂದಲ್ಲೊಂದು ದಿನ...

ಸಿದ್ಧಾರ್ಥ : ನಿಜ... ಸಾರಥಿ !... ನಿಜ... ನಾವೆಲ್ಲರೂ ಒಂದು ದಿನ ಸಾಯುವವರೇ !

ಸಾರಥಿ : ಹಿಂದಿರುಗುವ ರಾಜಕುಮಾರ !... ಹೊತ್ತಾಯಿತು.

ಸಿದ್ಧಾರ್ಥ : ಅದೋ ಅಲ್ಲಿ ನೋಡು ಸಾರಥಿ... ಅತ್ಯಂತ ವೃದ್ಧಾವಸ್ಥೆಯಲ್ಲಿ ಕೋಲೂರಿ ದಾರಿ ಸಾಗುತ್ತಿರುವ ವ್ಯಕ್ತಿಯನ್ನು ನೋಡು !...

ಸಾರಥಿ : ನೋಡಿದೆ ರಾಜಕುಮಾರ, ನಾವುಗಳೂ ಎಂದಾದರೊಂದುದಿನ ಕೋಲೂರಿ ನಡೆಯಬೇಕಾಗುತ್ತದೆ...

ಸಿದ್ಧಾರ್ಥ : ಇದೂ ದುಃಖಮಯ ಸಾರಥಿ...

ಸಾರಥಿ : ನಾವು ರಾಜಭವನಕ್ಕೆ ಹಿಂದಿರುಗುವ, ರಾಜಕುಮಾರ, ಅದನ್ನೆಲ್ಲಾ

ನೋಡುತ್ತಿರುವುದು ಅವಶ್ಯಕವಿಲ್ಲ.

ಸಿದ್ಧಾರ್ಥ : ನೋಡುವುದರಲ್ಲಿ ತಪ್ಪೇನು ?.... ತಿಳಿಯಬೇಕಾದರೆ.... ನೋಡಿ ತಿಳಿಯು ವುದು ಅನುಭವವಲ್ಲವೆ ?

ಸಾರಥಿ : ಅದು ಸರಿ ! ... ನಾವು ಹಿಂದಿರುಗಬಹುದೆ ?... ರಾಜಕುಮಾರ.

ಸಿದ್ಧಾರ್ಥ : ಇರು ಸಾರಥಿ !... ಅಲ್ಲಿ ನೋಡು.... ಯಾರೋ ಭಿಕ್ಷುಕಿ.... ಹಾಡುತ್ತಾ... ಭಿಕ್ಷೆ ಬೇಡುತ್ತಿದ್ದಾಳೆ... ಹುಂ !... ಆಕೆಗೆ ಭಿಕ್ಷೆಯೇ ಆಧಾರ... ಅವಳು ಹಾಡುತ್ತಿರುವುದನ್ನು ಕೇಳುವ...

ಸಾರಥಿ : ಇದಕ್ಕೆ ಕೊನೆಮೊದಲಿಲ್ಲ ರಾಜಕುಮಾರ... ಇನ್ನು ಹೊರಡುವ...

ಸಿದ್ಧಾರ್ಥ : ಅದು ಸರಿ... ಎಲ್ಲಿದ್ದೆವೋ... ಎಲ್ಲಿಗೆ ಹೋಗುವೆವೋ... ಜೀವನ ಈ ಮಧ್ಯೆ ಕೆಲವು ದಿನ... ಅಲ್ಲವೆ?... ಸಾರಥಿ.... ನಡೆ, ಹಿಂದಿರುಗುವ.

೦ ೦ ೦

ದೃಶ್ಯ – ೭

ಯಶೋದಾ : ನಾಥಾ!... ಇದೇನು ?... ನೀವು ಯಾವಾಗಲೂ ಏಕಾಂಗಿಯಾಗಿ ಕುಳಿತು ಚಿಂತಿಸುವಿರಲ್ಲಾ !... ಏಕೆ ?

ಸಿದ್ಧಾರ್ಥ : ಯಶೋದಾ ! ನೀನೂ ರಾಜಕುಮಾರಿ, ರಾಜ ವೈಭವಗಳನ್ನು ಸವಿಯುತ್ತಾ ಬಂದಿರುವ ರಾಣಿಯಾಗಬೇಕೆಂಬ ಬಯಕೆ ಇರುವ ಮಹಿಳೆಯಲ್ಲವೆ?... ನನ್ನನ್ನು ನೀನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ.

ಯಶೋದ : ಇದೇನಿದು ? ಹೀಗೇಕೆ ಹೇಳುವಿರಿ ?... ನಿಮ್ಮನ್ನು ಅರ್ಥ ಮಾಡಿ ಕೊಂಡೇ ಮದುವೆಯಾದೆ, ಯಾವಾಗಲು ನಿಮ್ಮ ನೆರಳಿನಂತಿರುವ ನನಗೆ ಅರ್ಥವಾಗುವಂತೆ ವಿಚಾರಗಳನ್ನು ತಿಳಿಸಬಾರದೆ ?

ಸಿದ್ಧಾರ್ಥ : ರಾಜವಂಶದಲ್ಲಿ ಪರಂಪರೆಯಾಗಿ, ರಾಜಕುಮಾರರು, ಯುವರಾಜ ರಾಗಿ, ರಾಜ್ಯಭಾರದ ಅನುಭವ ಪಡೆಯಬೇಕೆಂದು ನಿನ್ನ ಮತ. ನೀನು ತಿಳಿದಂತೆ ಅದೂ ಸುಖಮಯವಲ್ಲ.

ಯಶೋದ : ಹಾಗೆಂದರೇನು ?

ಸಿದ್ಧಾರ್ಥ : ಚಿಕ್ಕ ರಾಜ್ಯವನ್ನು ಕಟ್ಟಿ, ಧರ್ಮವೋ ಅಧರ್ಮವೋ ನಡೆದಂತೆ ಪ್ರಜೆಗಳನ್ನು ಹದದಲ್ಲಿ ಇಡುವ ಕಾರ್ಯವೇ ಚಿಕ್ಕ ರಾಜರುಗಳ ವೈಭವ... ಆದರೆ... ವಿಶ್ವವನ್ನೇ ಒಂದು ಸಮ ತೂಕದಲ್ಲಿ ತರುವ

ಧೀರರಾರಿದ್ದಾರೆ ?

ಯಶೋದ : ನಮ್ಮದು ನಮಗೆ ಇಡೀ ವಿಶ್ವವನ್ನೇ ತೆಗೆದುಕೊಂಡು ನಾವೇನು ಮಾಡುವುದಿದೆ?

ಸಿದ್ಧಾರ್ಥ : ರಾಜ್ಯವು ವೈಭೋಗಕ್ಕಾಗಿ ಅಲ್ಲ, ಪ್ರಜೆಗಳ ದುಃಖವನ್ನು ನೀಗುವ ಸಮರ್ಥ ಪ್ರಜಾಸೇವೆ ಇಲ್ಲದ ರಾಜ್ಯ ಒಂದು ಹಾಳು ಗುಡಿ.... ಅಂತೆಯೇ ಪ್ರಪಂಚವೇ ಒಂದು ರಾಜ್ಯ.... ಪ್ರಪಂಚದ ಪ್ರಜೆಗಳೆಲ್ಲಾ ದುಃಖರಹಿತರಾಗುವ ಉಪಾಯ ವೇನೆಂದು ಚಿಂತಿಸುತ್ತೇನೆ.

ಯಶೋದ : ವಿಚಿತ್ರ ಚಿಂತನೆ.

ಸಿದ್ಧಾರ್ಥ : ಇದೊಂದು ಉದಾರ ಚಿಂತನೆ. ವಿಶಾಲ ಚಿಂತನೆ.... ಅದಕ್ಕೇ ನಿನಗೆ ಅರ್ಥವಾಗುವುದಿಲ್ಲವೆಂದು ಹೇಳಿದೆ.

ಯಶೋದ : ಹುಂ !.... ಒಳ್ಳೆಯ ಚಿಂತನೆ .... ನಾಥ ! ಇರಲಿ, ... ಒಂದು ಗುಟ್ಟು !.... ನಿಮಗೆ ಪುತ್ರೋತ್ಸವವಾಗಲಿದೆ.

ಸಿದ್ಧಾರ್ಥ : ಹಾಂ!.... ಪುತ್ರೋತ್ಸವವೆ ?.... ಉಫ್ .... ಪುತ್ರೋತ್ಸವ !.....

ಂ ಂ ಂ

ದೃಶ್ಯ – ೮

ಸಿದ್ಧಾರ್ಥ : ಸ್ವಗತ ಉಫ್... ಪ್ರಪಂಚ ನಿಸ್ಸಾರ... ಹಾಗೆಂದು ಸುಮ್ಮನಿರಲು ಸಾಧ್ಯವೆ ?... ಉಹುಂ.... ಈ ದುಃಖಮಯ ಪ್ರಪಂಚವನ್ನು ನೋಡಲಾರೆ... ಎಲ್ಲಿ ನೋಡಿದರಲ್ಲಿ ನೋವು !... ಸಾವು !

ಇದಕ್ಕೆ ಪರಿಹಾರ ಹುಡುಕಬೇಕು. ಜನರಿಗೆಲ್ಲಾ ಸಾಧ್ಯವಾಗುವ ಪರಿಹಾರವನ್ನು ಹುಡುಕಲೇಬೇಕು ?

ಅದು ಹೇಗೆ ?... ನಾನು ಈ ರಾಜ್ಯವನ್ನೂ ಪತ್ನಿಪುತ್ರರ ವ್ಯಾಮೋಹವನ್ನು ಕಿತ್ತೊಗೆಯ ಬೇಕಲ್ಲವೆ ?... ಹೌದು... ವ್ಯಾಮೋಹವನ್ನು ಕತ್ತರಿಸ ಬೇಕು...

ಯಶೋದಾ !.. ಕುಮಾರ!!.. ರಾಜ್ಯ!!!.. ಎಲ್ಲವನ್ನೂ ತೊರೆಯಲೇಬೇಕಲ್ಲವೆ?

ಅರ್ಧರಾತ್ರಿ, ಪ್ರಪಂಚ ಮಲಗಿ ನಿದ್ದೆಹೋಗುತ್ತಿದೆ. ಯಶೋದಳೂ ಗಾಢ ನಿದ್ರೆಯಲ್ಲಿದ್ದಾಳೆ... ಯಶೋದಾ !.. ಕುಮಾರಾ !!.. ಇದೋ ನನ್ನನ್ನು ಮರೆತುಬಿಡಿ! ... ಇಲ್ಲಿರಲಾರೆ... ಇರಲಾರೆ !!... ಹೊರಟೆ... ಜೈ, ಜೈ... ಲೋಕ ಕಲ್ಯಾಣ ವಾಗಲಿ !!...

ಅರಮನೆಯನ್ನು ಬಿಟ್ಟು ಹೊರಡುವನು

ಆನಂದ : ಯೋಗೀಶ್ವರಾ! ಇದೇನು? ಮೂರು ದಿನಗಳಿಂದ ಅನ್ನ ಆಹಾರ ಗಳಿಲ್ಲದೆ ಧ್ಯಾನದಲ್ಲಿರುವಿರಿ... ಏಳಿರಿ ! ಏಳಿರಿ !!...

ಸಿದ್ಧಾರ್ಥ : ಆಂ ! ಯಾರದು ?... ಓಹ್....ಏನು ಮಹಾಶಯ ?....

ಆನಂದ : ತಾವು ಯಾರು ?.... ಮೂರು ದಿನಗಳಿಂದ ನೋಡುತ್ತಿದ್ದೇನೆ... ಧ್ಯಾನಾವಸ್ಥೆ ಯಲ್ಲೇ ಇದ್ದೀರಿ.... ಅನ್ನ ಆಹಾರಗಳಿಲ್ಲ.... ದಯವಿಟ್ಟು, ಈ ಫಲಗಳನ್ನಾದರೂ ಸ್ವೀಕರಿಸಿ.

ಸಿದ್ಧಾರ್ಥ : ಹಾಂ ! ಮೂರು ದಿನಗಳಾದವೆ?... ಹುಂ... ಆಗಲಿ, ಫಲಗಳನ್ನು ಸ್ವೀಕರಿಸುತ್ತೇನೆ...

ಆನಂದ : ದೇವ ! ತಮ್ಮ ವೃತ್ತಾಂತವೇನು... ತಿಳಿಯದು... ತಿಳಿಸುವಿರಾದರೆ ನಾನು ಧನ್ಯ...

ಸಿದ್ಧಾರ್ಥ : ಕಪಿಲವಸ್ತು ರಾಜ್ಯದ ರಾಜಕುಮಾರನಾಗಿದ್ದೆ. ಸಿದ್ಧಾರ್ಥನೆಂದು ಕರೆಯು ತ್ತಾರೆ... ರಾಜ್ಯ, ಪತ್ನಿ ಪುತ್ರ, ಮಾತಾಪಿತೃಗಳನ್ನೆಲ್ಲಾ ತೊರೆದು ಬಂದಿದ್ದೇನೆ... ಪ್ರಪಂಚದ ಜೀವಿಗಳಿಗೆ ಶಾಂತಿಯನ್ನು ಸುಖವನ್ನು ಹುಡುಕುತ್ತಿದ್ದೇನೆ.

ಇಲ್ಲಿಗೆ ಅನೇಕ ದಿನಗಳ ಪ್ರಯಾಣದ ನಂತರ ಬಂದಿದ್ದೇನೆ... ಮಹಾಶಯ !.. ನಿಮ್ಮ ನೆರವಿದ್ದಲ್ಲಿ... ನನ್ನನ್ನು... ಧ್ಯಾನ ಮಾಡಲು ಅವಕಾಶ ಕಲ್ಪಿಸಿಕೊಡಿ. ಇದೋ... ಈ ಭೋದಿ ವೃಕ್ಷದಡಿಯಲ್ಲಿ ಧ್ಯಾನಮಗ್ನನಾಗುವೆ...

ಆನಂದ : ಅವಶ್ಯವಾಗಿ... ಅವಶ್ಯವಾಗಿ... ತಾವು ಯುಗಪುರುಷರಂತೆ ಕಾಣುವಿರಿ, ನನ್ನಲ್ಲಿ ಶಿಷ್ಯನಾಗುವ ಯೋಗ್ಯತೆ ಇದ್ದಲ್ಲಿ ಇದೋ ತಮ್ಮ ಸೇವೆಗೆ ಸಿದ್ಧ...

ಓಹ್ ! ಏನಿದು ?... ಸಿದ್ಧಾರ್ಥರು ಧ್ಯಾನ ಮಗ್ನರಾಗೇ ಬಿಟ್ಟರು, ... ಇನ್ನು... ಯಾವಾಗಲೋ ಅವರು ಎಚ್ಚರಕ್ಕೆ ಬರುವುದು... ತಿಳಿಯದು !

ಸಿದ್ಧಾರ್ಥ : ಆನಂದ !.. ಇದೋ ತಿಳಿಯಿತು... ಈಗ ಪರಿಹಾರ ತಿಳಿಯಿತು.

ಆನಂದ : ಆಂ ! ಗುರುಗಳಿಗೆ ಎಚ್ಚರವಾಯಿತು... ಓಹ್ ! ಇದು ಬೋಧಿವೃಕ್ಷ... ಜ್ಞಾನಬೋಧೆ ಆಗಿದೆ... ಬುದ್ಧರಾಗಿದ್ದಾರೆ...

ಹಾಂ ! ಗುರುವೆ !... ಬುದ್ಧರೆ !... ಲೋಕ ಕಲ್ಯಾಣದ ಕಾರ್ಯ ನಿಮ್ಮಿಂದಲೇ ಸಾಧ್ಯ.

ಗೌತಮ ಬುದ್ಧ : ಆನಂದ !.. ನನ್ನ ಶಿಷ್ಯರಲ್ಲಿ ಉತ್ತಮ ಶಿಷ್ಯನಾಗು ನನ್ನ

ಬೋಧನೆಗಳನ್ನು ಚೆನ್ನಾಗಿ ತಿಳಿ !

ಆನಂದ : ಈ ಪ್ರಪಂಚದಲ್ಲಿ ಎಲ್ಲಾ ಕರ್ಮಫಲಗಳನ್ನೇ ಅನುಭವಿಸುತ್ತಿದ್ದಾರೆ. ... ಈ ದುಃಖಕ್ಕೆ ಕಾರಣ ಕರ್ಮಫಲ. ಆಶೆ, ಕರ್ಮಕ್ಕೆ ಬೀಜ ! ಜನರನ್ನು ಆಶೆ ಬಂಧಿಸುತ್ತದೆ.

ಆನಂದ : ಓಹ್.... ಎಂತಹ ಸದ್ಬೋಧೆ !.... ಆಹ್....

ಗೌತಮ ಬುದ್ಧ : ಆದುದರಿಂದ ಜನರು ಆಶೆಯನ್ನು ಬಿಡಬೇಕು, ಸುಸಂಸ್ಕೃತರಾಗಬೇಕು, ಪ್ರಾಣಿ ಹಿಂಸೆ ಮಾಡಬಾರದು, ಪರರ ವಸ್ತುವನ್ನು ಬಯಸಬಾರದು....

ಆನಂದ : ಸಾಧು ! ಸಾಧು! ಗುರುವರ್ಯ...

ಗೌತಮ ಬುದ್ಧ : ನಮ್ಮದೊಂದು ಸಂಘವಾಗಲಿ, ಅವರನ್ನು ಭಿಕ್ಷುಗಳೆಂದು ಕರೆಯಿರಿ. ಭಿಕ್ಷುಗಳು ನಮ್ಮ ತತ್ವವನ್ನು ಪ್ರಚಾರ ಮಾಡಲಿ.... ಸಮಾಜ ಉದ್ಧಾರವಾಗಲಿ....

ಆನಂದ : ಮಹದಾಜ್ಞೆ ಸದ್ಗುರೋ....

"ಬುದ್ಧಂ ಶರಣಂ ಗಚ್ಛಾಮಿ" ಸಂಘಂ ಶರಣಂ ಗಚ್ಛಾಮಿ"

* * *

ದೃಶ್ಯ – ೯

ಆನಂದ : ಗುರುದೇವ! ಅನೇಕ ಮಹಿಳೆಯರು ಹೊರಗೆ ಕಾದಿದ್ದಾರೆ... ದರ್ಶನಾಕಾಂಕ್ಷಿ ಗಳಾಗಿದ್ದಾರೆ.

ಗೌತಮ ಬುದ್ಧ : ಏತಕ್ಕಾಗಿ ?...

ಆನಂದ : ಮಹಿಳೆಯರು ಬಿಕ್ಷುಗಳಾಗಲು ಬಯಸುತ್ತಿದ್ದಾರೆ ಅದಕ್ಕೆ ತಮ್ಮ ವಿರೋಧವಿದೆ ಎಂದು ನನಗೆ ಗೊತ್ತು ಆದರೆ, ಅವರೆಲ್ಲಾ ಪರಮ ತ್ಯಾಗಿಗಳು. ಭಿಕ್ಷುಗಳಾಗಲು ಅನುಮತಿ ಬೇಡಲು ಬಂದಿದ್ದಾರೆ.

ಗೌತಮ ಬುದ್ಧ : ಇದು ಜಟಿಲವಾದ ಕಾರ್ಯ... ಹುಂ !... ಬರಲಿ.

ಮಹಿಳೆ : ಮಹಾಪ್ರಭೋ... ನಮ್ಮ ಅನಂತ ವಂದನೆಗಳು.

ಗೌತಮ ಬುದ್ಧ : ಆನಂದನಿಂದ ಸಮಾಚಾರ ತಿಳಿಯಿತು... ನಿಮ್ಮಲ್ಲಿ ನಿಜವಾದ ವೈರಾಗ್ಯವಿದ್ದಲ್ಲಿ ನೀವು ಭಿಕ್ಷುಗಳಾಗಬಹುದು. ದೀಕ್ಷೆಯನ್ನು ಕೊಡುತ್ತೇನೆ.

ಮಹಿಳೆಯರು : ಉಪಕಾರವಾಯಿತು!... ನಾವು ವಿರಕ್ತರಾಗಿದ್ದೇವೆ, ಭಿಕ್ಷುಗಳಾಗಿರಲು ನಮ್ಮ ನಿಶ್ಚಯ.

ಗೌತಮ ಬುದ್ಧ : ಹಾಗೆಯೇ ಆಗಲಿ...

೦ ೦ ೦

ದೃಶ್ಯ – ೧೦

ಗೌತಮ ಬುದ್ಧ : ಮನೆಯಲ್ಲಿ ಯಜಮಾನರಿರುವರೆ ?

ಭಗ್ಗವ(ಯಜಮಾನ) : ಯಾರು ?... ಓಹೋ... ಯತಿ !... ದಯಮಾಡಿ ಯತಿವರ್ಯ ! ... ನನ್ನಿಂದ ಏನಾಗಬೇಕೋ ಮಾಡಲು ಸಿದ್ಧನಿದ್ದೇನೆ.

ಗೌತಮ ಬುದ್ಧ : ದಾರಿ ನಡೆದು ದಣಿದು ಬಂದಿದ್ದೇನೆ. ರಾತ್ರಿಯ ವೇಳೆ ಆಯಿತು. ಸ್ವಲ್ಪ ವಿರಾಮವನ್ನು ತೆಗೆದುಕೊಳ್ಳಬೇಕಾಗಿದೆ... ನಿಮ್ಮಲ್ಲಿ ಈ ರಾತ್ರೆ ತಂಗಬಹುದೆ? ಮಹಾಶಯ.

ಭಗ್ಗವ : ಓಹ್ !.. ಧಾರಾಳವಾಗಿ ತಂಗಬಹುದು ಯತಿವರ್ಯ ! ನಾನು ಬಡವ, ಮಡಿಕೆ ಕುಡಿಕೆಗಳನ್ನು ಮಾಡಿ ಜೀವಿಸುವವ. ಮನೆ ಚಿಕ್ಕದು ಒಂದೇ ಪ್ರತ್ಯೇಕ ಕೊಠಡಿ ಇದೆ... ಆದರೆ ಯತಿವರ್ಯಾ!.

ಗೌತಮ ಬುದ್ಧ : ಆದರೇನು ! ಮಹಾಶಯ.. ಹೇಳಿರಿ... ಸಂಕೋಚವೇಕೆ?

ಭಗ್ಗವ : ಯತಿವರ್ಯ !.. ಇರುವ ಒಂದು ಕೊಠಡಿಯಲ್ಲಿ ಬೇರೊಬ್ಬ ದಾರಿಗರು ವಿಶ್ರಮಿಸುತ್ತಿದ್ದಾರೆ... ಅವರು ಸಮ್ಮತಿ ಇತ್ತಲ್ಲಿ... ತಂಗಲು ಆತಂಕ ವಿಲ್ಲ...

ಗೌತಮ ಬುದ್ಧ : ನೋಡುವ !.. ಒಳಗೆ ಹೋಗಿ ಕೇಳುತ್ತೇನೆ... ಬಾಂಧವರೆ ! ... ನಿಮಗೆ ಸಮ್ಮತಿ ಇದ್ದಲ್ಲಿ ಈ ಒಂದು ರಾತ್ರಿ ಇಲ್ಲಿ ತಂಗುವ ಮನಸ್ಸಿದೆ... ನೀವು ಒಪ್ಪಿದರೆ...

ದಾರಿಗ : ಓಹ್ !... ಯತಿಗಳೆ... ಕೊಠಡಿ ದೊಡ್ಡದಾಗಿದೆ... ನೀವೂ ವಿಶ್ರಮಿಸಲು ಸಾಕಷ್ಟು ಜಾಗವಿದೆ... ಆಗಲಿ... ವಿಶ್ರಮಿಸಿಕೊಳ್ಳಿ...

ಗೌತಮ ಬುದ್ಧ : ಧನ್ಯವಾದಗಳು... ಆಹ್ ?... ದಾರಿ ನಡೆದು ಆಯಾಸ ವಾಗಿತ್ತು... ನೀವು ಎಲ್ಲಿಯವರೆಂದು ಕೇಳಬಹುದೆ ?.....

ದಾರಿಗ : ಅದಕ್ಕೇನು ಯತಿಗಳೇ...... ನನ್ನ ಹೆಸರು "ಪುಕ್ಕುಸತಿ' ಒಬ್ಬ ಮಹಾಪುರುಷನನ್ನು ಅರಸುತ್ತಾ ಬಂದಿದ್ದೇನೆ.... ಇನ್ನೂ ಭೇಟಿ

ಮಾಡಲಾಗಿಲ್ಲ.

ಗೌತಮ ಬುದ್ಧ : ಪುಕ್ಕಸತಿಯವರೆ ? ಆ ಮಹಾ ಪುರುಷನಾರು ?

ಪುಕ್ಕುಸತಿ : ಒಬ್ಬರು ಮಹಾಪುರುಷರಿದ್ದಾರೆ... ಗೌತಮ ಎಂದು ಕರೆಯುತ್ತಾರೆ. ... ಅವರಿಗಾಗಿ.... ಅವರನ್ನು ನೋಡಿ ಧನ್ಯನಾಗಲು ಹೊರಟಿದ್ದೇನೆ.... ಅವರು ಬಹು ದೊಡ್ಡ ಆತ್ಮ... ದೇವ ದೇವತೆಗಳಿಗೂ ದೊಡ್ಡವರು, ಅವರ ಉಪದೇಶವನ್ನು ಪಡೆಯಲು ಕಾತುರನಾಗಿದ್ದೇನೆ.

ಗೌತಮ ಬುದ್ಧ : ಕೇಳು, ಪುಕ್ಕಸತಿ... ನನ್ನ ಮಾತುಗಳನ್ನು ತಿಳಿ... ಧಮ್ಮಪದ ವೆಂಬುದನ್ನು ಬಲ್ಲೆಯಾ ?... ಸುಸಂಸ್ಕೃತನಾಗುವ ಆರು ಬಗೆಯ ಉಪದೇಶಗಳನ್ನು ಬಲ್ಲೆಯಾ? ...

ಪುಕ್ಕಾಸತಿ : ಬಲ್ಲೆ... ಬಲ್ಲೆ... ಯತಿವರ್ಯಾ... ತಿಳಿಯಿತು, ತಿಳಿಯಿತು, ಅವರೇ ನೀವು ! ಅವರೇ ನೀವು ! ನನ್ನ ತಿಳಿಗೇಡಿತನವನ್ನು ಕ್ಷಮಿಸಿ... ನನ್ನನ್ನು ತಮ್ಮ ಶಿಷ್ಯನಾಗಲು ಅನುಮತಿ ಕೊಡಿ... ಬುದ್ಧದೇವ !..

ಗೌತಮ ಬುದ್ಧ : ಹಾಗೇ ಆಗಲಿ!... ನಮ್ಮೊಡನೆ ನೀನೂ ಭಿಕ್ಕು.. ಬಾ ಪುಕ್ಕಸತಿ. .. ಭಿಕ್ಕುಗಳ ಬಳಿ ತೆರಳುವ....

ಪುಕ್ಕಸತಿ : ಮಹಾ ಆನಂದವಾಯಿತು ಪ್ರಭೋ !....

ಗೌತಮ ಬುದ್ಧ : ನಿನ್ನಂತಹ ಶಿಷ್ಯರ ಅವಶ್ಯಕತೆ ಬಹಳವಾಗಿ ಪುಕ್ಕಸತಿ !.. ದೇಶ ದೇಶಾಂತರಗಳಿಗೆ ನಮ್ಮ ಸಂದೇಶಗಳನ್ನು ಕಳುಹಿಸಿ, ಲೋಕೋಪಕಾರ ಮಾಡುವ ಕೆಲಸ ಭಿಕ್ಕುಗಳದ್ದು..

ನಾಲ್ಕು ದಿಕ್ಕಿಗೂ ಭಿಕ್ಕುಗಳು, ಹೋಗಿ ನಮ್ಮ ಧರ್ಮ ಪ್ರಚಾರ ಮಾಡಲಿ!... ದೇಶ ದೇಶಾಂತರಗಳಿಗೆ ಹೋಗಲಿ... ಜನಗಳ ಉದ್ಧಾರವಾಗಲಿ!

ಪುಕ್ಕಾಸತಿ : ಮಹದಾಜ್ಞೆ !.... ನಾವೆಲ್ಲಾ ಅದೇ ಕಾರ್ಯಗಳಿಗೆ ಹೋಗುತ್ತೇವೆ.

ಗೌತಮ ಬುದ್ಧ : ನಿಮಗೆ ಮಂಗಳವಾಗಲಿ !...

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ

೦ ೦ ೦

ಎಚ್ಚರ ತಪ್ಪಿದಾಗ...

(ಸಂದರ್ಭ : ಮದುವೆ ದಿಬ್ಬಣ ಹೊರಡುವ ಸಂದರ್ಭ, ಬಸ್ ಪ್ರಯಾಣ)

ವೆಂಕಟೇಶ್ : ಇನ್ನೂ ಬಸ್ ಬರಲೇ ಇಲ್ಲವಲ್ಲಾ !..... ಆಗಲೇ ಎರಡು ಘಂಟೆ ಆಯಿತು.... ಐದು ಗಂಟೆ ಪ್ರಯಾಣ ಮಾಡಬೇಕು... ಭದ್ರಾವತಿಯಿಂದ ಬೆಂಗಳೂರಿಗೆ!!.....

ಲಕ್ಷ್ಮಮ್ಮ: ಇನ್ನೇನು ಬರುವ ಸಮಯ. ಎಲ್ಲರನ್ನೂ ಕರೆದುಕೊಂಡು ಬರಬೇಕಲ್ಲ !..... ನಮ್ಮ ಜಾಗಗಳೂ ಮೀಸಲಾಗಿವೆ ಅಲ್ಲವೆ ?

ವೆಂಕಟೇಶ್ : ಜಾಗವೇನೋ ಮೀಸಲಾಗಿದೆ. ಆದರೆ ತಡಮಾಡಿದರೆ ಹೇಗೆ ? ಎರಡು ಗಂಟೆಗೆ ಹೊರಡಬೇಕು. ಕಾಲು ಗಂಟೆ ಲೇಟಾಯಿತು.... ಓಹೋ !.... ಹಾರನ್ ಶಬ್ದವಾಯಿತು...

ನಮ್ಮ ಬಸ್ಸೇ ಇರಬೇ ಕು .... ಸಿದ್ಧವಾಗಿದ್ದೀಯಲ್ಲವೆ ?

ಲಕ್ಷ್ಮಮ್ಮ: ನಾನು ಸಿದ್ಧವಾಗೇ ಇದ್ದೇನಲ್ಲಾ!... ಓಹೋ ಬಸ್ ಬಂದೇ ಬಿಟ್ಟಿತು... ಏಳಿ !!...

(ಬಸ್ ಬಂದು ನಿಲ್ಲುವಿಕೆ)

ಲಕ್ಷ್ಮಮ್ಮ: ಓಹ್ ! ಬಸ್ ತುಂಬಿಬಿಟ್ಟಿದೆ !.... ಜಾಗ ?.....

ಕಂಡಕ್ಟರ್: ನಿಮ್ಮ ಸಾಮಾನು ಕೊಡಿ.... ಟಾಪ್ ಮೇಲೆ ಹಾಕಬೇಕು.

ವೆಂಕಟೇಶ್ : ಇದ್ದೋ... ತೆಗೆದುಕೊಳ್ಳಿ...ನಮ್ಮದು ಮೂರೇ ಸಾಮಾನು ...

ಲಕ್ಷ್ಮಮ್ಮ: ಓಹೋ !... ದ್ವಾರಕಿ, ಗೋವಿಂದ, ಸೀತು, ಪ್ರಭಾ ಎಲ್ಲಾ ಬಂದಿದ್ದಾರೆ.....

ವೆಂಕಟೇಶ್ : ನೀನು ಬಸ್ ಹತ್ತಿಬಿಡು ಲಕ್ಷ್ಮೀ, ನಾನು ಸಾಮಾನನ್ನು ಮೇಲೆ ಹಾಕಿಸುತ್ತೇನೆ.

ಲಕ್ಷ್ಮಮ್ಮ: ಆ ಸೂಟ್‌ಕೇಸನ್ನು ಒಳಗೇ ಇಟ್ಟುಕೊಳ್ಳೋಣ....

ವೆಂಕಟೇಶ್ : ಒಳಗೆ ಜಾಗವೆಲ್ಲಿದೆ ?......

ಕಂಡಕ್ಟರ್: ಒಳಗೆ ಜಾಗವೇ ಇಲ್ಲಮ್ಮಾ.... ಮೇಲೇ ಹಾಕುತ್ತೇನೆ ಏನೂ ಪರವಾಗಿಲ್ಲ ನೋಡಿಕೊಳ್ಳುತ್ತೇವೆ.

ದ್ವಾರಕಿ : ನಾವಿದೀವಿ ಲಕ್ಷ್ಮಮ್ಮ!... ಭಯವೇಕೆ?... ಸೂಟ್‌ಕೇಸ್ ಮೇಲಿದ್ದ ರೇನಾಯಿತು ? (ನಾಲ್ಕು ಜನ ಮಾತನಾಡುವುದು)

1) ವೆಂಕಟೇಶ್ !.. ಇಲ್ಲಿ ಬಾ... ಇದು ನಿನ್ನ ಜಾಗ...

2) ನೀವೂ ಅಲ್ಲೇ ಕುಳಿತುಕೊಳ್ಳಿ ಲಕ್ಷ್ಮಮ್ಮಾ !...

3) ಸಾಮಾನು ಹಾಕಾಯಿತೆ ?... ಇನ್ನು ಹೊರಡುವ

4) ಎಲ್ಲರೂ ಕುಳಿತುಕೊಂಡಾಯಿತೆ ? ... (ಕಂಡಕ್ಟರ್)

ಕಂಡಕ್ಟರ್: ರೈಟ್... (ಬಸ್ ಹೊರಡುವುದು)

ಲಕ್ಷ್ಮಮ್ಮ: ಏಕೆ - ಜಯಾ - ಹೊತ್ತಾಯಿತು...

ಜಯಮ್ಮ: ಹೆಚ್ಚೇನೂ ಹೊತ್ತಾಗಿಲ್ಲ... ಕೃಷ್ಣ ಅಲಂಕಾರ ಮಾಡಿಕೊಂಡು ಹೊರಡುವುದು ಸ್ವಲ್ಪ ತಡವಾಯಿತು.

ಲಕ್ಷ್ಮಮ್ಮ: ವರ ಅಲಂಕಾರ ಮಾಡಿಕೊಳ್ಳಬೇಕಾದ್ದು ಸಹಜ... ಬೆಂಗಳೂರು ತಲುಪು ವುದು ಎಷ್ಟು ಹೊತ್ತಿಗೆ ?

ನರಹರಿ : ಆರೂವರೆ ಹೊತ್ತಿಗೆ ತಲುಪಬಹುದು.

ಜಯಮ್ಮ: ಏಳು ಗಂಟೆಯಾದರೂ ಪರವಾಗಿಲ್ಲ, ಅಲ್ವೆ ?...

ನರಹರಿ : ಎಂಟು ಘಂಟೆ ಆದರೆ ತಾನೇ ಏನು ?... ಆಗಲೂ ವರಪೂಜೆ ಹೊತ್ತು ಮೀರುವುದಿಲ್ಲ...

ಲಕ್ಷ್ಮಮ್ಮ: ಅಲ್ರೀ !... ನೀವು ನಮ್ಮ 'ಸೂಟ್‌ಕೇಸ್ ಎಲ್ಲಿಟ್ಟಿದೆ?' ಅಂತ ನೋಡಿ ಕೊಂಡಿರಾ ?...

ವೆಂಕಟೇಶ್ : ದ್ವಾರಕೀನೇ ಎಲ್ಲಾ ಇಡಿಸಿದ್ದಾನೆ... ಎಷ್ಟೇ ಆಗಲೀ ಅವನು ಪೊಲೀಸ್ ಇಲಾಖೆಯವನಲ್ಲವೆ ?

ಲಕ್ಷ್ಮಮ್ಮ: (ಪಿಸುಮಾತಿನಲ್ಲಿ) ನೀವೊಂದು ಬಾರಿ ಸರಿಯಾಗಿ ನೋಡ ಬೇಕಾಗಿತ್ತು...

ವೆಂಕಟೇಶ್ : ಇರಲಿ ಬಿಡು... ಎಲ್ಲೂ ಹೋಗುಲ್ಲ....

ಗೋವಿಂದ : ಏನು ?... ಸೂಟ್‌ಕೇಸಾ !... ಇರಲಿ ಬಿಡಿ ಅತ್ತೆ ನಾವು ನೋಡಿಕೊಳ್ಳುತ್ತೇವೆ.

ಲಕ್ಷ್ಮಮ್ಮ: ಜನ ಇಳಿಯುವಾಗ... ಹತ್ತುವಾಗ... ಸ್ವಲ್ಪ ನೋಡಿಕೊಳ್ಳಪ್ಪಾ...

ಎಲ್ಲಾದರೂ...

ಗೋವಿಂದ : ಏನೂ ಪರವಾಗಿಲ್ಲ... ಹೆದರಬೇಡಿ ... ನಿಶ್ಚಿಂತೆಯಿಂದ ಕುಳಿತುಕೊಳ್ಳಿ... ನೋಡಿ ! ಆಗಲೇ ಮಾವನಿಗೆ ತೂಕಡಿಕೆ ಬಂದು !... (ಹುಸಿನಗೆ)

ಲಕ್ಷ್ಮಮ್ಮ : ಸರಿಬಿಡು... ಅವರೇನು ಸಂತೆಯಲ್ಲೂ ನಿದ್ದೆ ಮಾಡಬಲ್ಲರು... ಆತಂಕವೇ ಇಲ್ಲ.

ನರಹರಿ : ಹಾಗೇನಿಲ್ಲ... ಅಣ್ಣ ಬಹಳ ಚುರುಕು. ಆದರೂ ಎಲ್ಲರೂ ನಿಗಾ ಇಡ ಬೇಕಾದ ವಿಚಾರ... ಗೋವಿಂದ !... ನೋಡುತ್ತಾ ಇರಪ್ಪ.

ಗೋವಿಂದ : ನೋಡುತ್ತಲೇ ಇದ್ದೀನಿ ಮಾವ !.... ಚಿಂತೆ ಏಕೆ ?.... ಓಹೋ ! ಬೀರೂರು ಬಂದೆ ಬಿಡ್ತು !.....

ಒಬ್ಬಾತ : ಬಸ್ಸು ತುಂಬಿದೆ - ಇಲ್ಲಿ ಏಕೆ ನಿಲ್ಲಿಸುತ್ತಾರೋ ತಿಳಿಯದು.... ಏನು ಜನಾಪ್ಪಾ! .... ಸುಮ್ಮನೆ ನುಗ್ಗುತ್ತಲೇ ಇರುತ್ತಾರೆ.

ಇನ್ನೊಬ್ಬ : ಬಸ್ಸಿನವರಿಗೇನು ಕಷ್ಟ.... ಪ್ರಯಾಣಿಕರಿಗೆ ತಾನೆ ಉಸಿರು ಕಟ್ಟುವುದು..... ಇಲ್ಲಿ ನಿಲ್ಲಲೂ ಜಾಗ ಇಲ್ಲ.

ಕಂಡಕ್ಟರ್ : ಬೆಂಗಳೂರಿಗೆ ಪ್ರಯಾಣ ಮಾಡುವವರೇ ಮಾತ್ರ ಹತ್ತಿ... ಈ ಬಸ್ಸು ಮಧ್ಯ ಎಲ್ಲೂ, ನಿಲ್ಲುವುದಿಲ್ಲ.

ಶಂಕರಪ್ಪ : ನಾವು ಬೆಂಗಳೂರಿಗೇ ಹೋಗಬೇಕಪ್ಪ..... ನೀನು ಬಸ್ ಹತ್ತು ಸಾವಿತ್ರಿ.... ನಾನು ಸೂಟ್‌ಕೇಸನ್ನು ಮೇಲೆ ಹಾಕಿಸುತ್ತೇನೆ.

ಸಾವಿತ್ರಿ : ಅಬ್ಬಾ !.. ಇಲ್ಲೆಲ್ಲಿ ?... ಜಾಗವೇ ಇಲ್ಲ... ನಿಲ್ಲುವುದಕ್ಕಾದರೂ ಜಾಗ ಬೇಡವೆ ?

ಶಂಕರಪ್ಪ : ಮೊದಲು ಬಸ್ ಹತ್ತಿಬಿಡು ಆ ಮೇಲೆ ಜಾಗ ಆಗುತ್ತದೆ.

ಸಾವಿತ್ರಿ : ಏನು ಜಾಗವಾಗುತ್ತೋ ಕಾಣೆ.... ಸರಿ... ಸೂಟ್‌ಕೇಸು ?

ಶಂಕರಪ್ಪ : ಮೇಲೆ ಕೊಟ್ಟಿದ್ದೇನೆ..... ಕಂಡಕ್ಟರ್ ಮೇಲೆ ಸರಿಯಾಗಿ ಇಟ್ಟಿದ್ದಾನೆ.... ಆಯ್ತಪ್ಪ ಕಂಡಕ್ಟರ್ ! ನಾನು ಬಸ್ ಹತ್ತುತ್ತೇನೆ.

ಕಂಡಕ್ಟರ್ : ಸರಿ.... ರೈಟ್ !.... (ಬಸ್ ಹೊರಡುವುದು)

ಲಕ್ಷ್ಮಮ್ಮ : ಏನ್ ಜನಾನೋ !.... ಏನ್ ಸಾಮಾನೊ !!.... ಅಬ್ಬಬ್ಬಾ !!! .... ಪ್ರಯಾಣ ಬಹಳ ಕಷ್ಟವಾಗುತ್ತಾ ಬಂತು.

ವೆಂಕಟೇಶ್ : ಜನಾನೂ ಜಾಸ್ತಿ ಆದರು.... ಸಾಮಾನುಗಳೂ ಜಾಸ್ತಿ ಆದವು.... ಬಸ್ಸುಗಳು ಸಾಲುವುದಿಲ್ಲ.... ಅಲ್ಲಿ ನೋಡು ಈಗ ಬಸ್ ಹತ್ತಿದವರೆಲ್ಲಾ "ಹನುಮಾಸನ" ಹಾಕಿ ನಿಂತಿರುವ ಹಾಗೆ ಕಾಣುತ್ತಾರೆ.

... ಆಕೆಯ ಪಾಡನ್ನು ನೋಡು.... ಪಾಪ !... ನಾನಾದರೂ ನಿಂತು ಅವರಿಗೆ ಕುಳಿತುಕೊಳ್ಳಲು ಜಾಗ ಕೊಡಲೆ ?

ಲಕ್ಷ್ಮಮ್ಮ : ಹುಶ್... ಸುಮ್ಮನಿರ್ರಿ !... ಇಲ್ಲಿ ಇರುವ ಬೇರಾರಿಗೂ ಇಲ್ಲದ್ದು ನಿಮಗೇಕೆ?

ಸಾವಿತ್ರಿ : ಅಬ್ಬಬ್ಬಾ... ಬಹಳ ಸೆಕೆ... ಕಾಲು ಬೇರೆ ನೋವು... ಏಕಾದರೂ ಬಂದೆವೋ ಇಲ್ಲಿಗೆ ?

ಶಂಕರಪ್ಪ : ಬರದಿದ್ದಲ್ಲಿ... ಶೃಂಗೇರಿ ಯಾತ್ರೆ ಆಗುತ್ತಿತ್ತೆ ?

ಸಾವಿತ್ರಿ : ಹುಶ್ ... ಅಪ್ಪಾ !... ಬೆಂಗಳೂರು ಇನ್ನೂ ಎಷ್ಟು ದೂರ ಇದೇರೀ?

ಶಂಕರಪ್ಪ : ಇನ್ನು ಸ್ವಲ್ಪ ದೂರವೇ ಇದೆ.... ಸದ್ಯ ಹೇಗೋ ಸುಧಾರಿಸಿಕೊಂಡು ಬಂದಿದ್ದೇನೆ. ಇನ್ನು ಕಾಲು ಘಂಟೆಯಲ್ಲಿ ತಲುಪಬಹುದು....

ಶಂಕರಪ್ಪ : ರ್‍ರೀ ! ಕಂಡಕ್ಟರ್ ರೇ ಮಲ್ಲೇಶ್ವರ ಸರ್ಕಲ್‌ನಲ್ಲಿ ನಾವು ಇಳಿಯಬೇಕು... ಅಲ್ಲಿ ಬಸ್ ನಿಲ್ಲಿಸಿ.

ಕಂಡಕ್ಟರ್ : ಆಗಲಿ !... ಇಳಿಯಲು ಸಿದ್ಧರಾಗಿರಿ... ಇನ್ನೇನು ಹತ್ತಿರ ಬಂತು... ಈ ದಿನ ಬಸ್ ಲೇಟಾಗಿದೆ.. (ಸೀಟಿ ಊದುವನು... ಬಸ್ ನಿಲ್ಲು ವುದು)... 'ಮಲ್ಲೇಶ್ವರ ಸರ್ಕಲ್"... ಇಳಿಯಿರಿ.

ಸಾವಿತ್ರಿ : ನಮ್ಮ ಸೂಟ್‌ಕೇಸ್ ಮೇಲಿದೆ... ಇಳಿಸಿಕೊಳ್ಳಿ... ಒಟ್ಟು ಮೂರು ಸಾಮಾನು.

ಶಂಕರಪ್ಪ : ನಮ್ಮ ಮೂರು ಸಾಮಾನುಗಳನ್ನು ಕೊಡಪ್ಪ

ಕಂಡಕ್ಟರ್ : ತೆಗೆದುಕೊಳ್ಳಿ !... ಮೂರು ಸಾಮಾನು... ಆಯ್ತು... ರೈಟ್... (ಬಸ್ ಹೊರಡುವುದು)

ಶಂಕರಪ್ಪ : ಸಧ್ಯ ಬಸ್ ಬಿಟ್ಟು ಇಳಿದೆವಲ್ಲಾ !... ಸಾಕಾಗಿ ಹೋಯಿತು... ಇನ್ನೇನು ಇಲ್ಲೇ ಇದೆ ಕೇಶವನ ಮನೆ... ಮನೆ ತಲುಪುವರು

ಸಾವಿತ್ರಿ : (ಕರಗಂಟೆ ಬಾರಿಸಿ)... ಲಲಿತಮ್ಮ ?...

ಲಲಿತಮ್ಮ : ಯಾರು ?... ಬಂದೆ... (ಬಾಗಿಲು ತೆಗೆಯುವುದು)... ಓಹೋ... ಸಾವಿತ್ರಮ್ಮ!... ಬನ್ನಿ ಬನ್ನಿ.. ತುಂಬಾ ಆಯಾಸವಾಗಿ ಇರುವಂತೆ ಇದೆ.

ಸಾವಿತ್ರಿ : ಹೌದಮ್ಮಾ !... ಬಸ್ಸಿನಲ್ಲಿ ಬೀರೂರಿನಿಂದ ನಿಂತೇ ಬಂದೆವು.... ಸ್ವಲ್ಪವೂ ಜಾಗ ಇರಲಿಲ್ಲ... ಕಾಲೆಲ್ಲಾ ನೋಯ್ಯುತ್ತಿದೆ... ಬೆಳಗ್ಗೆ ಊರಿಗೆ ಬೇರೆ ಹೋಗ ಬೇಕು ! ಉಸ್ಸಪ್ಪಾ !... ಸಾಕಾಗಿ ಹೋಯಿತು.

ಲಲಿತಮ್ಮ : ಪಾಪ !... ಕುಳಿತುಕೊಂಡು ಸುಧಾರಿಸಿಕೊಳ್ಳಿ... ಇನ್ನೇನು ನಿಮ್ಮ ಊರು ತಲುಪಲು ಎರಡೇ ಘಂಟೆ ಪ್ರಯಾಣ... ಶೃಂಗೇರಿ ಯಾತ್ರೆ

ಎಲ್ಲಾ ಚೆನ್ನಾಗಿ ಆಯಿತಾ ?

ಸಾವಿತ್ರಿ : ಆಯಿತಮ್ಮ! ಅಲ್ಲೆಲ್ಲಾ ಚೆನ್ನಾಗಿತ್ತು. ಕಣ್ಣು ತುಂಬಾ ನೋಡಿದೆವು... ಆದರೆ! ... ಈಗ ಪ್ರಯಾಣವೇ ಕಷ್ಟ !

ಕೇಶವ : (ಎಲ್ಲಿಂದಲೋ ಬಂದಂತೆ) ಓಹೋ!... ಶಂಕರಪ್ಪ ಬಂದೇ ಬಿಟ್ಟರು! ... ಏಕೆ? ... ಬಹಳ ದಣಿವಾದಂತೆ ಇದೀರಲ್ಲಾ?.. ಬಸ್ ಪ್ರಯಾಣ!! ... ದಣಿವು ಆಗಿರಬೇಕು... ಏಳಿ... ಕೈಕಾಲು ತೊಳೆದುಕೊಳ್ಳಿ...

ಶಂಕರಪ್ಪ : ಹೌದಪ್ಪ... ನಿಂತುಕೊಂಡೇ ಬಂದೆವು... ಸಾವಿತ್ರೀ ! ನನ್ನ ಟವಲ್ ಕೊಡು... ಸೂಟ್‌ಕೇಸಿನಲ್ಲಿದೆ.

ಸಾವಿತ್ರಿ : ..(ಸೂಟ್‌ಕೇಸ್ ಅಳ್ಳಾಡಿದ ಶಬ್ದ)... ಹಾಂ!.. ಇದೇನ್ರೀ... ಅಯ್ಯೋ ದೇವರೇ!.. ಇದು ನಮ್ಮ ಸೂಟ್‌ಕೇಸ್ ಅಲ್ಲ... ಬದಲಾಯಿಸಿ ಬಿಟ್ಟಿದೆ... ನೋಡ್ಕೊಳ್ಳಿ ಅಂತ ಬಾರಿ ಬಾರಿಗೆ ಹೇಳಿದೆ... ಈ ಗಂಡಸರೇ ಹೀಗೆ...

ಶಂಕರಪ್ಪ : ಆಂ !... ಎಲ್ಲಿ?... ಏನು? ಸೂಟ್‌ಕೇಸ್ ನಮ್ಮದಲ್ಲವೆ ?.. ಇದೇನು ಗ್ರಹಚಾರ ಬಂತು... ಹೌದು, ಇದು ನಮ್ಮದಲ್ಲ... ಈಗೆಲ್ಲಿ ನೋಡಲೀ?.. ದೇವರೇ ? ಬಸ್ ನಿಲ್ದಾಣಕ್ಕೆ ಹೋಗಬೇಕು. ನಾನು ಹೋಗುವ ಹೊತ್ತಿಗೆ ಬಸ್ ಇರುತ್ತದೋ ಇಲ್ಲವೋ ?...

ಲಲಿತಮ್ಮ : ನಿಮ್ಮ ಸೂಟ್‌ಕೇಸ್ ಬದಲಾಯಿಸಿಬಿಟ್ಟಿದೆಯೇ.. ಅಯ್ಯೋ ಪಾಪ !... ಏನೇನಿತ್ತು ?.. ತುಂಬಾ ಬೆಲೆ ಬಾಳುವ ಸಾಮಾನಿದ್ದಿತೆ?

ಸಾವಿತ್ರಿ : (ಅಳುವ ಧ್ವನಿಯಲ್ಲಿ).. ನಮ್ಮ ಬಟ್ಟೆ... ೨೦೦/-ರೂಪಾಯಿ... ಆರು ಸಿಲ್ಕ್ ಸೀರೆ... ಎಲ್ಲಾ ಇತ್ತು... ದೇವರೇ !.. ಏನು ಕಷ್ಟ ಕೊಟ್ಟೆಯಪ್ಪಾ!!.

ಕೇಶವ : ಏನು ಶಂಕರಪ್ಪ ? .. ಹೀಗೇಕೆ ?... ಸಾಮಾನುಗಳನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೇ ?

ಶಂಕರಪ್ಪ : ಅಯ್ಯೋ ! ಏನು ಹೇಳಲಿ ಕೇಶವ !!... ಆ ಬಸ್ಸು ಒಂದು ನರಕ ಇದ್ದ ಹಾಗೆ ಇತ್ತು... ಕಂಡಕ್ಟರ್ ಬೇರೆ ಅವಾಂತರ ಮಾಡಿದ.... ನನ್ನ ಕಾಲು ಸೋತುಹೋಗಿದ್ದಿತು... ಈ ಅವಸ್ಥೆಯಲ್ಲಿ ಅವನು ಕೊಟ್ಟ ಸೂಟ್‌ಕೇಸನ್ನು ತಂದುಬಿಟ್ಟೆ... ಇದೂ ನಮ್ಮದರ ಹಾಗೇ ಇದೆ.... ಸರಿಯಾಗಿ ನೋಡುವ ಸಹನೆಯೂ ಇರಲಿಲ್ಲ...

ಕೇಶವ : ಅಂತಹ ಸಮಯದಲ್ಲೇ, ಬೇಜಾರಿಲ್ಲದೆ ನೋಡಬೇಕು... ಅಲ್ಲವೆ? .. ಎಂತಹ ಹುಚ್ಚುತನ ಮಾಡಿದಿರಿ !...

ಲಲಿತಮ್ಮ : ಹುಶಾರಿನಲ್ಲಿರಬೇಕು... ಆತುರದಲ್ಲೇ ಎಲ್ಲಾ ಕೆಲಸಗಳೂ ಕೆಡುವುದು... ಸಾವಿತ್ರಮ್ಮ!.. ನೀವಾದರೂ ನೋಡಿಕೊಳ್ಳಬಾರದಾಗಿತ್ತೆ?

ಸಾವಿತ್ರಿ : (ನಡುಗುವ ಧ್ವನಿಯಲ್ಲಿ) ಅಯ್ಯೋ... ಏನು ನೋಡಲಿ ?... ಆ ನರಕ ಯಾತ್ರೆಯಲ್ಲಿ ಏನೊಂದೂ ಗೊತ್ತಾಗಲಿಲ್ಲಿ.

ಕೇಶವ : ಈಗ ಯೋಚಿಸಿ ಪ್ರಯೋಜನವಿಲ್ಲ, ಅದಲಿ ಬದಲಾಗಿದೆ ಅಷ್ಟೇ. ನಿಮ್ಮ ಸೂಟ್‌ಕೇಸ್ ಬೇರೆಯವರಿಗೆ ಹೋಗಿರಲು ಸಾಧ್ಯ, ಅವರೂ ನಿಮ್ಮ ಹಾಗೆ ವ್ಯಥೆಪಡಬಹುದು. ಹುಡುಕಲು ಪ್ರಯತ್ನ ಮಾಡುತ್ತಾರೆ.. ಎಂದಾದರೂ ನಿಮ್ಮ ಸೂಟ್‌ಕೇಸ್ ನಿಮಗೆ ಸಿಕ್ಕಬಹುದು... ನೀವೂ ಪ್ರಯತ್ನ ಮಾಡಿ !.. ಏಳಿ... ಇದೋ ನನ್ನ ಟವಲ್ ತೆಗೆದುಕೊಳ್ಳಿ. ಕೈಕಾಲು ತೊಳೆದುಕೊಂಡು ಸ್ವಲ್ಪ ಕಾಫಿ ಕುಡಿಯಿರಿ... ಸಮಾಧಾನವಾಗಲಿ.

ಶಂಕರಪ್ಪ : ನಾಳೆ ಬೆಳಗ್ಗೆ ಹೊರಡಬೇಕು... ಈಗ ಎಲ್ಲಿ ಹುಡುಕುವುದು?

ಕೇಶವ : ಆ ಬಸ್ಸಿನ ಆಫೀಸಿಗೇ ಹೋಗಿ ನೋಡಬೇಕು... ಅಲ್ಲಿ ಪತ್ತೆಯಾಗಬಹುದು...

ಶಂಕರಪ್ಪ : ನನಗೆ ಕಾಫಿ ಆಗಿದೆ... ಸುಧಾರಿಸಿಕೊಳ್ಳುವ ಸಮಯವಲ್ಲ... ನಾನು ಈಗಲೇ ಬಸ್ ಆಫೀಸಿಗೆ ಹೋಗುತ್ತೇನೆ.

(ಬಸ್ ಆಫೀಸಿನಲ್ಲಿ)

ಶಂಕರಪ್ಪ : ಯಾರಪ್ಪ ನೀವು ?... ಇಲ್ಲಿಯ ಮಾಲೀಕರು ಎಲ್ಲಿ ?

ವಾಚ್‌ಮನ್ : ಯಾರು ಸ್ವಾಮಿ ?.. ಮಾಲೀಕರು ಈಗ ಎಲ್ಲಿರುತ್ತಾರೆ... ನಾನು ವಾಚ್‌ಮನ್ ... ನಿಮಗೆ ಏನಾಗಬೇಕಾಗಿದೆ ?

ಶಂಕರಪ್ಪ : ನಾವು, ಶೃಂಗೇರಿಯಿಂದ ಬಂದೆವು, ಬೀರೂರಿನಲ್ಲಿ ನಿಮ್ಮ ಬಸ್ ಹತ್ತಿದೆವು... ನಮ್ಮದೊಂದು ಸೂಟ್‌ಕೇಸ್ ಬಸ್ಸಿನ ಟಾಪ್ ಮೇಲೆ ಹಾಕಿದ್ದರು. ಇಳಿಯುವಾಗ ಬೇರೊಂದು ಸೂಟ್‌ಕೇಸ್ ನಮಗೆ ಬಂದುಬಿಟ್ಟಿದೆ. ವಿಚಾರಿಸಲು ಬಂದಿದ್ದೇನೆ.

ವಾಚ್‌ಮನ್ : ಹಾಂ!... ಬದಲಾಯಿಸಿಬಿಟ್ಟಿದೆ ಅಂತ ಕಾಣುತ್ತದೆ... ಇಂತಹ ಎಷ್ಟೋ ವರದಿಗಳು ಬರುತ್ತವೆ. ಮಾಲೀಕರೇನೂ ಮಾಡುವುದಿಲ್ಲ. ಅವರ ಜವಾಬ್ದಾರಿ ಇಲ್ಲ. ನಿಮ್ಮ ಹುಶಾರಿನಲ್ಲಿ ನೀವು ಇರಬೇಕು ಸ್ವಾಮಿ ! ಕೈಲಾದರೆ ನೀವೇ ಪತ್ತೆ ಮಾಡಬೇಕು. ಇಲ್ಲವಾದರೆ ಅದು

"ಕೈಲಾಸಕ್ಕೆ ಹೋಯಿತು" ಎಂದು ತಿಳಿದುಕೊಳ್ಳಿ. ಅದು ನಿಮ್ಮ ತಪ್ಪು. ಇಲ್ಲಿ ಏನೂ ಆಗುವುದಿಲ್ಲ. ಆ ಭದ್ರಾವತಿ ಬಸ್ಸು ಖಾಲಿ ಆಗಿ 'ಷೆಡ್' ಗೆ ಹೋಗಿದೆ. ಯಾರೂ ಏನೂ ಮಾಡುವಂತಿಲ್ಲ... ಹೋಗಿ ಸ್ವಾಮಿ... ಹೋಗಿ, - ನೀವೇ ಪತ್ತೆ ಮಾಡಿ. ನಿಮ್ಮ ಸಹಪ್ರಯಾಣಿಕರು ಯಾರಿದ್ದರೋ ಅದರಲ್ಲಿ ನೋಡಿ....

ಶಂಕರಪ್ಪ : ಹಾಗಂದರೇನಪ್ಪ!.. ಬಸ್ಸಿನವರು ಸಾಮಾನುಗಳ ಜವಾಬ್ದಾರಿಯನ್ನು ಸ್ವಲ್ಪವಾದರೂ ಗಮನಿಸಬೇಡವೆ ?

ವಾಚ್‌ಮನ್ : ಅದೆಲ್ಲಾ ರೂಲ್ಸು ಇಲ್ಲ... ಹಾಗೆಂದು ಬರೆದುಕೊಟ್ಟಿಲ್ಲ... ಸುಮ್ಮನೆ ಹೋಗಿ ನಿಮ್ಮ ಕೆಲಸ ನೋಡಿ... ಹೋಗಿ ಸ್ವಾಮಿ... ಹೋಗಿ!

ಲಲಿತಮ್ಮ : ಕುಮುದಾ!.. ಜಯಮ್ಮನವರ ಮಗ ಕೃಷ್ಣನ ಮದುವೆಗೆ ಕರೆದಿದ್ದಾರೆ. ಆರತಕ್ಷತೆಗೆ ಹೋಗೋಣ ಏಳು.

ಕುಮುದ : ... ಮದುವೆಮನೆ ಆರತಿಯೆ?... ಸರಿಯಮ್ಮ ನಾನು ರೆಡಿ !

ಲಲಿತಮ್ಮ : ನೀನು ತಯಾರಾಗು ... ನಾನೂ ಬಟ್ಟೆ ಬದಲಾಯಿಸಿಕೊಂಡು ಬರುತ್ತೇನೆ. ಹೊತ್ತು ಮಾಡುವದು ಬೇಡ... ಅಂದ ಹಾಗೆ... ಸಾವಿತ್ರಮ್ಮ ನೀವು ಬರುತ್ತೀರಾ?

ಸಾವಿತ್ರಿ : ಎಲ್ಲಾಗುತ್ತೆ ?... ವಿರಾಮ ಬೇಕು... ದಣಿದಿದ್ದೇನೆ. ನಾಳೆ ಮತ್ತೆ ಪ್ರಯಾಣದ ಸಿದ್ಧತೆ ಮಾಡಿಕೊಳ್ಳಬೇಡವೆ ?.. ನೀವು ಹೋಗಿ ಬನ್ನಿ..

(ಮದುವೆ ಮನೆಯಲ್ಲಿ)

ಜಯಮ್ಮ : ಬನ್ನಿ ಬನ್ನಿ, ಲಲಿತಮ್ಮಾ, ಓಹೋ ! ಕುಮುದಾನೂ ಬಂದಿದ್ದಾಳೆ.... ನೀವು ಮುಹೂರ್ತಕ್ಕೆ ಬರಲೇ ಇಲ್ಲ !

ಲಲಿತಮ್ಮ : ಬೇರೆ ಕೆಲಸ ಇತ್ತು ಜಯಮ್ಮ!.. ಆರತಕ್ಷತೆಗೆ ಬಂದಿದ್ದೇವಲ್ಲಾ !! ... ಎಲ್ಲಾ ಚೆನ್ನಾಗಿದ್ದೀರಾ, ಧಾರೆ ವಗೈರೆ ಸಾಂಗವಾಗಿ ನೆರವೇರಿತೆ? ... ಅಂದಹಾಗೆ ಲಕ್ಷ್ಮಮ್ಮ ಬರಲಿಲ್ಲವೆ ? ಅವರನ್ನು ನೋಡಿ ಬಹಳ ದಿನವಾಗಿತ್ತು... ಎಲ್ಲೂ ಕಾಣುಲ್ಲವಲ್ಲಾ...

ಜಯಮ್ಮ : ಬಂದಿದ್ದಾರೆ, ಅಗೋ ! ಅಲ್ಲಿ ಮಂಕಾಗಿ ಕೂತಿದ್ದಾರೆ... ಪಾಪ ! ಅವರ ಸೂಟ್‌ಕೇಸ್ ಪ್ರಯಾಣದಲ್ಲಿ ಕಳೆದು ಹೋಗಿದೆ... ಬದಲಾಗಿ ಬೇರೆ ಯಾವುದೋ ಅವರಿಗೆ ಬಂದಿದೆ... ಅವರಿಗೆ ಅವರ ಬಟ್ಟೆ ಬರೆ ಒಂದೂ ಇಲ್ಲದಂತಾಗಿದೆ... ಬೇಜಾರಿನಿಂದ ಸುಮ್ಮನೆ ಕುಳಿತಿದ್ದಾರೆ.

ಲಲಿತಮ್ಮ : ಪಾಪ !... ಎಲ್ಲೂ ಹುಡುಕಿಸಲಿಲ್ಲವೆ ?

ಜಯಮ್ಮ: ಅಯ್ಯೋ !... ಎಲ್ಲಾ ಆಯಿತು. ಆ ದ್ವಾರಕಿ (ನಿಮಗೆ ಗೊತ್ತಲ್ಲ) "ಸಾಯಂಕಾಲ ದೊಳಗೆ ಪತ್ತೆ ಮಾಡುತ್ತೇನೆ" ಎಂದು ಜಂಬ ಕೊಚ್ಚಿಕೊಂಡ.... ಎಲ್ಲೋ ಹೋಗಿ ಅಲೆದಾಡಿಕೊಂಡು ಬಂದ.... ಸಿಕ್ಕಲಿಲ್ಲ. ಗೋವಿಂದ.... "ಎರಡು ಗಂಟೆಯೊಳಗೆ ಪತ್ತೆ ಮಾಡಿ ಬಿಡುತ್ತೇನೆ" ಎಂದುಕೊಂಡು ಹೋದ... ಪೆಚ್ಚು ಮೋರೆ ಹಾಕಿಕೊಂಡು ಹಿಂದಿರುಗಿ ಬಂದ...

ಲಲಿತಮ್ಮ : ಅವರೆಲ್ಲಾ ಹುಡುಗರು... ಮದುವೆ ಸಂಭ್ರಮಬೇಕು. ಪತ್ತೆದಾರಿ ಕೆಲಸ ರುಚಿಸುತ್ತದಯೆ ?... ಜಂಬ ಕೊಚ್ಚಿಕೊಳ್ಳುತ್ತಾರೆ ಅಷ್ಟೇ...

ಕುಮುದ : ಅಮ್ಮಾ ! ನಮ್ಮ ಮನೆಗೆ ಬಂದಿದ್ದಾರಲ್ಲಾ... ಸಾವಿತ್ರಮ್ಮ ... ಅವರ ಸೂಟ್ ಕೇಸೂ ಬದಲಾಯಿಸಿ ಹೋಗಿದೆ ಅಲ್ವೆ ?...

ಲಲಿತಮ್ಮ : ಹೌದು.... ನಾನೇ ಹೇಳಬೇಕೆಂದಿದ್ದೆ... ಜಯಮ್ಮ!... ಲಕ್ಷ್ಮಮ್ಮ ನವರನ್ನು ಕರೆಯಿರಿ... ವಿಚಾರ ಮಾಡಿ ಸರಿಯಾಗಿ ತಿಳಿಯೋಣ.

ಕುಮುದ : ಅವರು ಶೃಂಗೇರಿಯಿಂದ ಬಂದರು ಬೀರೂರಿನಲ್ಲಿ ಭದ್ರಾವತಿ ಕಡೆಯಿಂದ ಬರುವ ಬಸ್ಸನ್ನು ಹತ್ತಿದರಂತೆ...

ಜಯಮ್ಮ: ಹಾಂ!.. ಹೌದು.... ನಾವೂ ಅದೇ ಬಸ್ಸಿನಲ್ಲಿ ಬಂದೆವು... ಅದಲುಬದಲು ಆಗಿರಲು ಸಾಧ್ಯ ! ಅಕ್ಕಾ !... ಅಕ್ಕಾ!!.. ಸ್ವಲ್ಪ ಇಲ್ಲಿ ಬನ್ನಿ.

ಲಕ್ಷ್ಮಮ್ಮ: ಓಹೋ !.. ಏನು ಲಲಿತಾ... ಚೆನ್ನಾಗಿದ್ದೀಯಾ !.. ಕುಮುದಾನೂ ಬಂದಿದ್ದಾಳೆ.... ಒಳ್ಳೆಯದಾಯಿತು.

ಜಯಮ್ಮ: ನಿಮಗೂ ಒಳ್ಳೆಯದಾಗುವುದಿದೆ.

ಲಲಿತಮ್ಮ : ಲಕ್ಷಮ್ಮ! .. ನಮ್ಮ ಗುರುತಿನವರೊಬ್ಬರು ಬೀರೂರಿನಲ್ಲಿ ಹತ್ತಿ ನಿಮ್ಮ ಬಸ್ಸಿನಲ್ಲೇ ಬಂದರಂತೆ. ಅವರದೂ ಸೂಟ್‌ಕೇಸ್ ಬದಲಾಯಿಸಿ ಬಿಟ್ಟಿದೆ... ನಿಮ್ಮದೇ ಆಗಿರಬಹುದು.

ಲಕ್ಷ್ಮಮ್ಮ: ಹಾಂ!.... ಹೌದೇ?.... ನಮ್ಮದೇ ಇರಬೇಕು.... ನೋಡೋಣ.... ರಾತ್ರಿ ವೇಳೆ ಈಗ ಹೇಗೆ ನೋಡುವುದು ?

ಜಯಮ್ಮ: ನಾಳೆ ಬೆಳಗ್ಗೆ ಭಾವನವರನ್ನೇ ಕಳುಹಿಸಿ.... ಕುಮುದ... ನಿಮ್ಮ ಮನೆ ಅಡ್ರೆಸ್ ಕೊಡಮ್ಮ....

ಕುಮುದ : ಇಲ್ಲಿದೆ ನಮ್ಮ ಅಡ್ರೆಸ್.... ತೆಗೆದುಕೊಳ್ಳಿ... ಬೆಳಿಗ್ಗೆ ಬೇಗ ಅವರು ಪ್ರಯಾಣ ಮಾಡಲಿದ್ದಾರೆ.... ಬೇಗ ಬರಬೇಕು.

ಲಕ್ಷ್ಮಮ್ಮ: ಬೆಳಗ್ಗೇನೆ ನಮ್ಮವರು ಬಂದುಬಿಡುತ್ತಾರೆ.

○ ○ ○

ಲಕ್ಷ್ಮಮ್ಮ : ಏಳ್ರೀ!... ಬೇಗ ಹೋಗಿ !... ನೋಡಿ ಇಲ್ಲಿ ಅಡ್ರೆಸ್ ಇದೆ... ಬೇಗ!... ಬೇಗ !!

ವೆಂಕಟೇಶ್ : ಓಹ್!... ಬೆಳಗಾಯಿತೆ? ಹೆಂಗಸರ ಮಾತು... ಎಷ್ಟು ನಂಬಿಕೆಯೋ ಗೊತ್ತಾಗುವುದಿಲ್ಲ... ಮನೆ ಬೇರೆ ಹುಡುಕಬೇಕು... ರಾಮ ರಾಮಾ !

ಲಕ್ಷ್ಮಮ್ಮ : ಏಳ್ರಿ ಸಾಕು !... ಆಲಾಪನೆ ಶುರುಮಾಡಿದಿರಿ... ಬೇಗ ಹೋಗಿ... ಎಷ್ಟೋ ಕೆಲಸ ಹೆಂಗಸರ ಸಹಾಯದಿಂದಲೇ ಆಗೋದು... ಗಂಡಸರು ಸೋತು ಕುಳಿತಾಗಲೂ ಸಹಾ !

ವೆಂಕಟೇಶ್ : ಸರಿ ಮಹರಾಯ್ತಿ !.. ಟೀಕೆ ಸಾಕು.... ಇದೋ ಹೊರಟೆ....

○ ○ ○

ವೆಂಕಟೇಶ್ : (ದಾರಿ ನಡೆಯುತ್ತಾ ತನ್ನಲ್ಲಿ ತಾನು) ಹೊತ್ತೇ ಆಯಿತು... ಮನೆ ಇನ್ನೂ ಸಿಕ್ಕಿಲ್ಲ... ಹುಡುಕುವಲ್ಲಿ ಸುಸ್ತಾಗಿಬಿಟ್ಟೆ... ಎಚ್ಚರ ತಪ್ಪಿದಾಗ ಬೇಡದೇ ಇರುವುದೆಲ್ಲಾ ಆಗುತ್ತದೆ... ನೆಂಟರು "ನೀವು ಬೇಹುಶಾರಿ" ಅಂದರು... ಕೆವಲರು "ಪೆಚ್ಚುತನ ಮಾಡಿದಿರಿ" ಎಂದರು... "ತಿಳುವಳಿಕೆ ಇಲ್ಲ" ಎಂದರು... ಆ ವಾಚ್‌ಮನ್ ಸಹ ಜೋರಾಗಿ... "ಹೋಗ್ರೀ, ಹೋಗಿ" ಎಂದು ಬಿಟ್ಟ... ಗೋವಿಂದನನ್ನು ನೆಚ್ಚಿ "ಗೋವಿಂದಾ"ಆದ ಹಾಗಾಯಿತು... ದ್ವಾರಕೀದ್ದೋ "ಉತ್ತರನ ಪೌರುಷ" ಇದ್ದಹಾಗೆ... ಎಲ್ಲಾ ಹುಡುಗು ಬುದ್ಧಿ... ಧಿಕ್ಕಾರ, ತಿರಸ್ಕಾರಗಳೆಲ್ಲಾ ಆದವು. ಹುಡುಕುವ ಪ್ರಯತ್ನದಲ್ಲೂ ಹಣ್ಣಾದೆ... ಭಗವಂತಾ!... ಅಂ!... ಇದೇ ಬೀದಿ... ಹೌದು ಇದೇ ಮನೆ ಕರೆಗಂಟೆಯು ಇದೆ... (ಕರೆ ಗಂಟೆ ಬಾರಿಸುವುದು)

ಕುಮುದ : ಯಾರು ?...

ವೆಂಕಟೇಶ್ : ನಾನಮ್ಮ!... ನೆನ್ನೆ ನೀವು ಸೂಟ್‌ಕೇಸ್ ಬದಲಾದ ವಿಚಾರವಾಗಿ, ನಿಮ್ಮವರದೂ ಯಾರದೋ ಹಾಗೇ ಬದಲಾಗಿದೆ ಎಂದರಲ್ಲ... ನೋಡಲು ಬಂದಿದ್ದೇನೆ.

ಕುಮುದ : ನೀವಾ!.. ಬನ್ನಿ ... ಕುಳಿತುಕೊಳ್ಳಿ... ನೀವೂ ಬರುವುದು ಸ್ವಲ್ಪ ತಡವಾಯಿತು... ಅವರು ಅರ್ಧ ಗಂಟೆಯಾಯಿತು. ಪ್ರಯಾಣ ಬೆಳಸಿ... ಸೂಟ್ ಕೇಸನ್ನೂ ತೆಗೆದುಕೊಂಡು ಹೋಗಿದ್ದಾರೆ... "ಅವರ್‍ಯಾರಾದರೂ ಬಂದರೆ ಅಡ್ರೆಸ್ ಕೊಡಿ"- ಎಂದು ಈ ಅಡ್ರೆಸ್ ಕೊಟ್ಟಿದ್ದಾರೆ...

ಕೋಲಾರಕ್ಕೆ ಹೋಗಿ ನೋಡಬೇಕಾಗಿದೆ... ನಿಮಗೆ ತೊಂದರೆ ಆಯಿತು.

ವೆಂಕಟೇಶ್ : ಹೊರಟು ಹೋದರೆ?.. ದೇವರೇ?.. ಆಗಲಮ್ಮ, ಕೋಲಾರಕ್ಕೂ ಹೋಗಿಬರುತ್ತೇನೆ. (ಹೊರಡುವರು)

o o o

ವೆಂಕಟೇಶ್ : ಲಕ್ಷ್ಮೀ!... ಅವರು ಕೋಲಾರಕ್ಕೆ ಹೊರಟು ಹೋದರಂತೆ... ನಾನೂ ಅಲ್ಲಿಗೇ ಹೋಗಿಬರುತ್ತೇನೆ... ಇದೊಂದು ಕೊನೆ ಯತ್ನ ಮಾಡಿಬಿಡುವುದು!... ಸೂಟ್‌ಕೇಸನ್ನು ಅವರೇ ತೆಗೆದುಕೊಂಡು ಹೋಗಿದ್ದಾರಂತೆ.

ಜಯಮ್ಮ : ಈ ದಿನ ನಾವೆಲ್ಲಾ ಹೊರಟಿದ್ದೇವೆ... ಅಕ್ಕನವರು ?

ವೆಂಕಟೇಶ್ : ನೀವೆಲ್ಲಾ ಊರಿಗೆ ಪ್ರಯಾಣ ಮಾಡಿ... ಲಕ್ಷ್ಮೀ! ನೀನೂ ಊರಿಗೆ ಹೊರಟು ಬಿಡು... ಕೋಲಾರದಿಂದ ನಾನು ಊರಿಗೆ ನೇರವಾಗಿ ಬರುತ್ತೇನೆ.

ಜಯಮ್ಮ : ಅದು ಸರಿ,.. ಹಾಗೆಯೇ ಮಾಡುವುದು ಮೇಲು.

(ಕರೆ ಗಂಟೆ ಒತ್ತುವುದು)

ಶಂಕರಪ್ಪ : ಯಾರದು ?

ವೆಂಕಟೇಶ್ : ನಾನು ಬೆಂಗಳು ಬೆಂಗಳೂರಿನಿಂದ ಬಂದಿದ್ದೇನೆ... ನನ್ನ ಹೆಸರು ವೆಂಕಟೇಶ್... ಬಸ್ ಪ್ರಯಾಣನ ಕಾಲದಲ್ಲಿ ನಮ್ಮ ಒಂದು ಸೂಟ್‌ಕೇಸ್ ಬದಲಾಗಿಬಿಟ್ಟಿದೆ... ನಿಮ್ಮದೂ ಹಾಗೆ ಆಗಿದೆಯೆಂದು ಬೆಂಗಳೂರಿನಲ್ಲಿ ಕುಮುದಮ್ಮ ಹೇಳಿದಳು... ನೋಡಲು ಬಂದಿದ್ದೇನೆ.

ಶಂಕರಪ್ಪ : ಓಹೋ !... ನೀವೇ... ಬನ್ನಿ ಬನ್ನಿ... ಕುಳಿತುಕೊಳ್ಳಿ... ಹೌದು, ನಮ್ಮ ಸೂಟ್‌ಕೇಸೂ ಬದಲಾಗಿದೆ...

ಸಾವಿತ್ರೀ : .. ಸಾವಿತ್ರೀ!.. ಇಲ್ಲಿ ನೋಡು... ಇವರೇ ಅಲ್ಲವೆ ನಮ್ಮ ಜೊತೆ ಬಸ್ಸಿನಲ್ಲಿ ಬಂದವರು?.. ಇವರೇ ನಿನ್ನ ಸೂಟ್‌ಕೇಸನ್ನು ತಂದಿದ್ದಾರೆ. ... ನೋಡು.

ಸಾವಿತ್ರಿ : ಹಾಂ !.. ಹೌದೇ... ಆಹಾ!... ಇದೇನನ್ನ ಸೂಟ್‌ಕೇಸು... ಸಧ್ಯ, ಸಿಕ್ಕಿತಲ್ಲಾ... ಕುಮುದಮ್ಮ ಹೇಳಿದ್ದಳು... "ನಿಮ್ಮ ಸೂಟ್‌ಕೇಸ್ ಖಂಡಿತಾ ಸಿಕ್ಕುತ್ತದೆ"... ಎಂದು... ಪೂರ್ಣ ನಂಬಿಕೆ ಇತ್ತು.

ವೆಂಕಟೇಶ್ : ನೋಡಿ ಅಮ್ಮಾ!... ನಿಮ್ಮ ಸಾಮಾನುಗಳನ್ನೆಲ್ಲಾ ಸರಿಯಾಗಿ ನೋಡಿ...

ಸಾವಿತ್ರಿ : ಹೌದು !... ಸೀರೆಗಳೆಲ್ಲಾ ಇವೆ... ದುಡ್ಡೂ ಸರಿಯಾಗಿದೆ... ಫೋಟೋ... ದೇವರ ಪ್ರಸಾದ... ಬಟ್ಟೆಗಳು... ಎಲ್ಲಾ ಇವೆ... ಎಲ್ಲಾ ಸರಿಯಾಗಿಯೇ ಇವೆ.

ಶಂಕರಪ್ಪ : ವೆಂಕಟೇಶ್!.. ನಿಮಗೆ ಧನ್ಯವಾದಗಳು... ಎಷ್ಟಾದರೂ ಅವರವರ ಸಾಮಾನುಗಳು ಇಲ್ಲದಿದ್ದಾಗ ಬೇಜಾರು ಬರುತ್ತದೆ... ಪತ್ತೆ ಆಯಿತಲ್ಲಾ... ಇದೋ ನೋಡಿ !... ಇದು ನಿಮ್ಮ ಸೂಟ್‌ಕೇಸೇ ಇರಬಹುದು... ನೋಡಿ...

ವೆಂಕಟೇಶ್ : ಅದು ನಮ್ಮದೇ... ಸಂಶಯವಿಲ್ಲ... ದೇವರ ದಯದಿಂದ ಸಿಕ್ಕಿತು...

ಶಂಕರಪ್ಪ : ನಾವು ಅದನ್ನು ತೆಗೆದಿಲ್ಲ.. ನಿಮ್ಮ ಸಾಮಾನುಗಳನ್ನು ನೋಡಿಕೊಳ್ಳಿ.

ವೆಂಕಟೇಶ್ : ಎಲ್ಲಾ ಸರಿಯಾಗಿಯೇ ಇರುತ್ತದೆ... ಹೆಚ್ಚಿನ ಸಾಮಾನೆಲ್ಲಾ ನಮ್ಮಾಕೆಯದು... ಇರಲಿ... ನೋಡಿದರಾಯಿತು.

ಶಂಕರಪ್ಪ : ಸರಿ.. ವೆಂಕಟೇಶ್?.. ನೀವು ದಣಿದಿದ್ದೀರಿ.. ಊಟ ಮಾಡಿಕೊಂಡು ಊರಿಗೆ ಹೋಗಿ... ಕೆಲಸವನ್ನು ಸಾಧಿಸಿದ್ದು ಆಯಿತು... ಏಳಿ...

ವೆಂಕಟೇಶ್ : ಧನ್ಯವಾದಗಳು... ನಿಮ್ಮ ಆದರ ಆತಿಥ್ಯ ಎಲ್ಲಾ ನನಗೆ ದೊರೆಕಿತು... ಒಳ್ಳೆಯದು... ಜೀವನಪರ್ಯಂತ ಇದು ಮರೆಯುವುದಿಲ್ಲ.

(ಊಟ ಮಾಡುತ್ತಾ)

ಶಂಕರಪ್ಪ : ಬಸ್ಸಿನಲ್ಲಿ ಪ್ರಯಾಣ ಮಾಡುವುದು ಬಹಳ ಕಷ್ಟವಾಯಿತು... ಎಲ್ಲಾ ಬಸ್ಸುಗಳಲ್ಲೂ ಜನ ತುಂಬಿರುತ್ತಾರೆ... ನಾವಂತೂ ನಿಂತುಕೊಂಡೇ ಬಂದೆವು... ನಡೆದು ಬಂದ ಹಾಗೆ ಆಯಾಸವಾಗಿದೆ.

ವೆಂಕಟೇಶ್ : ಬಸ್ಸಿನವರಿಗೆ ಹಣ ಮುಖ್ಯ.. ಪ್ರಯಾಣಿಕರ ಅನುಕೂಲ ಅನಾನುಕೂಲ ಅವರಿಗೆ ಬೇಕಿಲ್ಲ.

ಶಂಕರಪ್ಪ : ಸಾಮಾನುಗಲನ್ನೂ ಸರಿಯಾಗಿ ನೋಡಿಕೊಳ್ಳಲು ಆಗಲಿಲ್ಲ... "ಮನೆ ತಲುಪಿದರೆ ಸಾಕು " ಎಂದು ಅನಿಸಿದ್ದಿತು. ಆಯಾಸ, ಆತುರಗಳಲ್ಲಿ ಅಚಾತುರ್ಯ ಆಯಿತು. ನಿಮಗೂ ವೃಥಾ ತೊಂದರೆ ಆಯಿತು. ಎಚ್ಚರತಪ್ಪಿದಾಗ ಹೀಗೆಲ್ಲಾ ಆಗುತ್ತದೆ.

ವೆಂಕಟೇಶ್ : ಇದು ಆಶ್ಚರ್ಯಕರವಾಗಿ ನಡೆದುಹೋಯಿತು. ಮಹಿಳೆಯರ ಪ್ರಯತ್ನದಿಂದ ಈ ಕೆಲಸ ನೆರವೇರಿತು. ಗಂಡಸರು "ಮಂಕುಬಡಿದಂತೆ" ಆದಾಗ, ಲಲಿತಮ್ಮ ನವರೂ, ಕುಮುದಮ್ಮನೂ, ಸಹಾಯಕರಾದರು.

ಶಂಕರಪ್ಪ : ಹೌದು.... ಮಹಿಳೆಯರು ಕೆಲವು ವೇಳೆ ಬಹಳ ಚುರುಕಾಗಿರುತ್ತಾರೆ.

ಅವರುಗಳಿಂದ ಎಷ್ಟೋ ಕೆಲಸಗಳು ಸುಗಮವಾಗಿ ನಡೆಯುತ್ತವೆ. ಮಹಿಳೆಯು ಪುರುಷನ ಸಮಭಾಗಿಯೂ ಹೌದು, ಸಮಯದಲ್ಲಿ ಹೆಚ್ಚು ಸಹಾಯಕಳೂ ಹೌದು.

ವೆಂಕಟೇಶ್ : ಶಂಕರಪ್ಪನವರೇ ನಾನು ನೇರವಾಗಿ ಊರಿಗೆ ಹೋಗುತ್ತೇನೆ. ಸಾವಿತ್ರಮ್ಮ ನವರಿಗೂ, ಕುಮುದಮ್ಮನಿಗೂ ನಮ್ಮ ಧನ್ಯವಾದಗಳನ್ನು ಅರ್ಪಿಸಬೇಕು. ಪ್ರಾರ್ಥನೆ.... ನಾನು ಹೊರಡುತ್ತೇನೆ, ನಮಸ್ಕಾರ.

(ಮನೆಗೆ ಬಂದ ನಂತರ)

ವೆಂಕಟೇಶ್: ಲಕ್ಷ್ಮೀ.... ನಿನ್ನ ಸೂಟ್‌ಕೇಸ್ ಸಿಕ್ಕಿತು. ಅವರು ಇದನ್ನು ತೆಗೆದೇ ಇಲ್ಲ. ಬಹಳ ಒಳ್ಳೆ ಜನ.

ಲಕ್ಷ್ಮಮ್ಮ: ಹೌದೇ ?.. ಒಳ್ಳೆಯದಾಯಿತು.... ಬಸ್ಸಿನ ಗಡಬಿಡಿಯಿಂದ ಎಲ್ಲರಿಗೂ ತೊಂದರೆ ಆಯಿತು. ಇಷ್ಟು ಬೇಗ ನಿಮ್ಮ ಸಾಮಾನು ನಮಗೆ ದೊರಕಿದ್ದು ಆಶ್ಚರ್ಯಕರ !

ವೆಂಕಟೇಶ್ : ಎಲ್ಲಾ ಮಹಿಳೆಯರ ಚಟುವಟಿಕೆಯಿಂದಲೇ ಈ ಕಾರ್ಯ ಕೈಗೊಂಡಿತು. ಸಾವಿತ್ರಮ್ಮ, ಕುಮುದಮ್ಮ ಮಾಡಿದ ಸಹಾಯ, ಬಹಳ ದಿನಗಳವರೆಗೂ ನೆನಪಿನಲ್ಲಿರುತ್ತದೆ... ದೇವರಿಗೆ ದೀಪ ಹಚ್ಚು !

0 0 0

ಶ್ರೀರಸ್ತು

ಜಗದ್ಗುರು (ಕಿರುನಾಟಕ)

ಬರೆದವರು : ಎಂ.ವಿ.ವಿ.

ಪಾತ್ರಗಳು: ಪರಿಚಯ:

1. ಗೋವಿಂದಪಾದರು: ಶಂಕರಾಚಾರ್ಯರ ಗುರುಗಳು
2. ಶಂಕರಾಚಾರ್ಯರು: ಕಥಾ ಪ್ರಧಾನಿ : ಜಗದ್ಗುರು
3. ಶಾರದಾಂಬೆ: ಮಂಡನ ಮಿತ್ರರ ಸಹಧರ್ಮಿಣಿ ನಂತರ ವಿದ್ಯಾ ದೇವತೆ
4. ಮಂಡನಮಿಶ್ರರು: ಶಂಕರರ ಪ್ರಧಾನ ಪ್ರತಿವಾದಿ
5. ಕೈಲಾಸ: ಶಂಕರರ ದೂರದ ಸಂಬಂಧಿ
6. ಜಗನ್ಮಾತೆ: ಶಂಕರರ ತಾಯಿ
7. ವಿಮಲಾನಂದ: ಗೋವಿಂದಪಾಗರ ಶಿಷ್ಯ
8. ನಿತ್ಯಾನಂದ: ಗೋವಿಂದಪಾಗರ ಶಿಷ್ಯ
9. ಅಮಲಾನಂದ: ಗೋವಿಂದಪಾಗರ ಶಿಷ್ಯ
10. ವಿಶ್ವಾನಂದ: ಗೋವಿಂದಪಾಗರ ಶಿಷ್ಯ
11. ಶಂಕರರ ಶಿಷ್ಯ ವರ್ಗ
12. ಶಂಕರರ ಶಿಷ್ಯ ವರ್ಗ
13. ಶಂಕರರ ಶಿಷ್ಯ ವರ್ಗ
14. ಶಂಕರರ ಶಿಷ್ಯ ವರ್ಗ
15. ಬ್ರಾಹ್ಮಣ: ಶಂಕರರ ಗ್ರಾಮಸ್ಥ
16. ವೃದ್ಧ ಬ್ರಾಹ್ಮಣ: ಉಪದೇಶಕ್ಕೆ ಸಂಬಂಧಿಸಿದವನು
    ವೀಕ್ಷಕರು - (ಸಭಾಸದರು)

ಅರಿಕೆ

ಹಲವಾರು ಅಭಿಪ್ರಾಯಗಳಿಂದ ಜಗದ್ಗುರು ಶ್ರೀ ಶಂಕರಾಚಾರ್ಯರರ ಜೀವನಚರಿತ್ರೆಯಲ್ಲಿ ಭಿನ್ನತೆಗಳು ಕಂಡುಬಂದಿವೆ. ಲಿಖಿತ ಮತ್ತು ದಂತ ಕಥೆಗಳ ಆಧಾರದ ಕೆಲವೊಂದು ಘಟನೆಗಳನ್ನು ಮಾತ್ರ ಇಲ್ಲಿ ನಿರೂಪಿಸಲಾಗಿದೆ.

ಜಗದ್ಗುರು ಶಂಕರಾಚಾರ್ಯರು, ಅದ್ವೈತದ ಅತ್ಯುಚ್ಚ ಆಚಾರ್ಯ ರೆಂಬುದರಲ್ಲಿ ಸಂಶಯವಿಲ್ಲ. ವೇದಾಂತದ ವೈಜ್ಞಾನಿಕ ವೃತ್ತಿಯನ್ನು ಎತ್ತಿ ಹಿಡಿದು, ಅವರ ಕಾಲದವರೆಗೂ ಸುಪ್ತವಾಗಿದ್ದ ಉಪನಿಷತ್ತಿನ ಅದ್ವಿತೀಯ ಮಹತ್ತನ್ನು ಧಾರೆ ಎರೆದು ಲೋಕಕ್ಕೆ ಮಹೋಪಕಾರ ಮಾಡಿದ್ದಾರೆ. ಭರತ ಖಂಡದ ಆದ್ಯಂತ ತಿರುಗಿ, (ಅಂದಿನ ಕಷ್ಟ ಸಾರಿಗೆ ವ್ಯವಸ್ಥೆಯಲ್ಲೂ ಸಹ), ವಾದಗಳಲ್ಲಿ ಗೆದ್ದು, ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಧ್ಯಾನಪೀಠಗಳನ್ನು ಸ್ಥಾಪಿಸಿದ ಸಾಹಸಿಗಳು. ಅದರಲ್ಲೂ ತಮ್ಮ ಅತ್ಯಲ್ಪ ಆಯುಃ ಪ್ರಮಾಣವಾದ ಮೂವತ್ತೆರಡು ವಯಸ್ಸಿನಲ್ಲೇ ಸಾಧಿಸಿಬಿಟ್ಟ ಧೀರರು ಮತ್ತು ತೇಜಸ್ವಿ.

ಇಂತಹ ದೈವಾಂಶ ಸಂಭೂತ ಸದ್ಗುರುಗಳನ್ನು ಸಮಾಜವು ನೆನೆ ಯುತ್ತಿರಲೆಂದು ಈ ಅಲ್ಪ ಕಾಣಿಕೆಯನ್ನು ಸಮರ್ಪಿಸಿದ್ದೇನೆ.

-ಎಂ.ವಿ.ವಿ., ಶಿವಮೊಗ್ಗ

ಗೌಡಪಾದ : ಹೌದು, ನಿತ್ಯಾನಂದ !, ವೇದಾಂತ ಅಂದರೆ ಉಪನಿಷತ್ತುಗಳಲ್ಲಿ ಸಾರಭೂತ ವಾದ ಜ್ಞಾನವಿದೆ.

ಅಮಲಾನಂದ (ಮೂರನೇ ಶಿಷ್ಯ) ಹಾಗಾದಲ್ಲಿ, ನಾವು ಉಪನಿಷತ್ತಿನ ವಿಸ್ತಾರ ವಿವೇಚನೆಯನ್ನೂ, ಅಧ್ಯಯನವನ್ನು ಮಾಡಬೇಕಲ್ಲವೆ ?

ವಿಶ್ವಾನಂದ (ನಾಲ್ಕನೇ ಶಿಷ್ಯ) ಜೈಮುನಿಯವರು ಉಪನಿಷತ್ತಿನ ವಿಚಾರಗಳಿಗೆ ಹೆಚ್ಚಾಗಿ ಮಹತ್ವ ಕೊಟ್ಟಿರುವಂತೆ ತೋರುವುದಿಲ್ಲ.

ಗೌಡಪಾದರು : ಅದು ನಿಜ ! ಜೈಮುನಿಯವರು, ವೇದ, ಕರ್ಮ ಮತ್ತು ಕರ್ಮಫಲಗಳ ವಿಚಾರವಾಗಿ ಹೆಚ್ಚು ಚರ್ಚಿಸಿದ್ದಾರೆ. ಉಪನಿಷತ್ತಿನ ವಿಚಾರಗಳಿಗೆ ಮಹತ್ವ ಕೊಟ್ಟಿರುವಂತಿಲ್ಲ. ಆದರೆ, ಈವರೆಗೆ ವೇದ ವಿಚಾರಗಳಿಗೆ ಅವರೇ, ಆಧಾರಗಳನ್ನು ಕೊಟ್ಟ ಆಚಾರ್ಯರು.

ವಿಮಲಾನಂದ : ವೇದಾಂತದಲ್ಲಿ ಬ್ರಹ್ಮ ವಿದ್ಯೆಗೆ ಹೆಚ್ಚು ಮಹತ್ವವಿದೆ. ವೈಜ್ಞಾನಿಕ ವೃತ್ತಿಯನ್ನು ಅವಲಂಭಿಸಿ, ಆತ್ಮಜ್ಞಾನವನ್ನು ಬೋಧಿಸುತ್ತದೆ.

ಗೌಡಪಾದರು : ನಿಜ, ವಿಮಲಾ ! ಇದೊಂದು ಬಹಳ ತೊಡಕಿನ ವಿಚಾರವಾಗಿದೆ. ಜೈಮುನಿ ಯವರು ವೇದಕರ್ಮಗಳನ್ನು ಬಹುವಾಗಿ ಅನುಮೋದಿಸಿ

ದ್ದಾರೆ. ಆದುದರಿಂದ, ಈಗಿನ ವಿದ್ಯಾವಂತರೆಲ್ಲಾ ಕರ್ಮಾನುಷ್ಠಾನಕ್ಕೆ ಬೆಲೆ ಕೊಡುತ್ತಾರೆ ವೇದಾಂತದ ಚರ್ಚೆಗಳು ಅಪರೂಪ ! ವೇದಾಂತದ ಜ್ಞಾನವೇ, ಸಮಾಧಾನ ತರುವ ಜ್ಞಾನವೆಂದು ನನಗೂ ತೋರುತ್ತಿದೆ. ಸತ್ಯ ಸ್ವರೂಪನನ್ನು ಕಾಣಲು ಅದೇ ಮಾರ್ಗ ಲಭ್ಯವಾಗಿದೆ.

ನಿತ್ಯಾನಂದ : ವೇದಾಂತ ಜ್ಞಾನವನ್ನು ಲೋಕಕ್ಕೆ ಕೊಡುವ ಮಹಾತ್ಮರು ಇನ್ನೂ ಉಂಟಾಗಿಲ್ಲ. ಆದುದರಿಂದ ನಮ್ಮ ಜ್ಞಾನವು ಕರ್ಮಪ್ರಧಾನವಾಗಿದೆ.

ಗೌಡಪಾದರು : ಸರಿಯಾದ ಮಾತು ! ವೇದಾಂತದ ಅಧ್ಯಯನ ಭಾಷ, ಪ್ರಚಾರ ಪ್ರತಿಪಾದನೆಗಳನ್ನು ಮಾಡುವ ಜ್ಞಾನ ಧುರೀಣನು ಇನ್ನೂ ನಮ್ಮಲ್ಲಿ ಉಂಟಾಗಿಲ್ಲ. ಲೋಕ ಕಲ್ಯಾಣವನ್ನು ಮಾಡುವ ಮಹಾತ್ಮನು, ಪರಮಾತ್ಮನ ಅಂಶೀಭೂತನಾಗಿರುತ್ತಾನೆ. ಅವನ ಕೃಪೆಯಾಗಬೇಕು. ಭಗವಂತನನ್ನೇ ಪ್ರಾರ್ಥಿಸಬೇಕು.

(ಪರದೆ ಬೀಳುತ್ತದೆ)

o o o

ದೃಶ್ಯ ೨

(ಪರಿಚಯ : ಈ ದೃಶ್ಯದಲ್ಲಿ ಶಂಕರರು ಸನ್ಯಾಸಿಗಳಾಗುತ್ತಾರೆ ತಾಯಿ ಮಗನಲ್ಲಿ ಮಾತು ಕಥೆಯಾಗುತ್ತದೆ. ಶಂಕರನಪಾತ್ರದವರು ಸ್ನಾನ ಮಾಡುವ ರೀತಿಯಲ್ಲೂ, ಅವರ ತಾಯಿಯು ವಿಧವೆಯಾದುದರಿಂದ, ಮುಕ್ತ ಸಂನ್ಯಾಸಿನಿ ಯಂತೆ, ರುದ್ರಾಕ್ಷಿ ಮಾಲೆ, ವಿಭೂತಿಯನ್ನು ಧರಿಸಿ, ಶ್ವೇತವಸ್ತ್ರವನ್ನು ಧರಿಸಿ ತಲೆ ಮುಸುಕು ಹಾಕಿರುತ್ತಾರೆ

ಮಂಟಪದ ಒಂದು ಅಂಚಿನಲ್ಲಿ ಶಂಕರನ ಪಾತ್ರದವರು ಮೈಯನ್ನು ಕೆಳಗೆ ಬಿಟ್ಟು, ಕೈಯಲ್ಲಿ ದಡ ಹಿಡಿದು ತಲೆ ಮಾತ್ರ ಮೇಲಿರುವಂತೆ ಇರುತ್ತದೆ. ಇದು ಸ್ನಾನ ಮಾಡುವ ಜಾಗ. ತಾಯಿಯೂ, ಬೇರೆಡೆ ಕುಳಿತು ಜಪ ಮಾಡುತ್ತಿರುತ್ತಾಳೆ)

ಶಂಕರನ ಪಾತ್ರದಾರನು ಆರ್ತನಾದ ಮಾಡುತ್ತಾರೆ ನರಳುತ್ತಿರುತ್ತಾರೆ. ಪರದೆ ಮೇಲಕ್ಕೆ ಏಳುತ್ತದೆ.

ಕುಳಿತಿದ್ದ ತಾಯಿಯು ಭಯಭೀತಳಾಗಿ ಮೇಲೇಳುತ್ತಾಳೆ.

ತಾಯಿ : ಅಯ್ಯೋ ! ಮಗೂ ! ಏನು ಮಾಡಲಿ, ದುರ್ದೈವವೇ ನನ್ನ ಏಕಮಾತ್ರ ಪುತ್ರನನ್ನು ಹೇಗೆ ಬದುಕಿಸಲಿ ! ಹತ್ತಿರ ಯಾರೂ ಇಲ್ಲವಲ್ಲ ! ಶಂಕರ, ಏನು ಮಾಡಲಿ ? ದೇವದೇವ!

ಶಂಕರ : ಅಮ್ಮಾ! ಅಮ್ಮಾ!! ನನ್ನನ್ನು ಮೃತ್ಯುವು ಚೆಂಡಾಡುತ್ತಿದೆ. ನಾನು ಬದುಕುವುದು ಕಷ್ಟ. ಮೊಸಳೆ ಒಂದೇ ಸಮನೆ ಎಳೆಯುತ್ತಿದೆ... ಉಫ್... ಶಂಭೋ ಮಹಾದೇವ! ... ಅಮ್ಮಾ! ನೀನು ನಿರ್ದಯಿ ಸನ್ಯಾಸವನ್ನು ತೆಗೆದುಕೊಳ್ಳಲು ಅಪ್ಪಣೆಯನ್ನು ನಿರಾಕರಿಸಿಬಿಟ್ಟೆ... ಈಗಲಾದರೂ ನನಗೆ ಅಪ್ಪಣೆಯನ್ನು ಕೊಟ್ಟು ನನ್ನ ಜನ್ಮವನ್ನು ಸಾರ್ಥಕ ಮಾಡು. ಅಮ್ಮಾ! ಇದರಿಂದ ಮರಣವಾದರೆ ಅದು ದುರ್ಮರಣ ನನಗೂ ಮುಕ್ತಿ ಇಲ್ಲ. ನಿನಗೂ ಸದ್ಗತಿಯಿಲ್ಲ. ಅಮ್ಮಾ! ಇದೊಂದು ಬಾರಿ ಕೇಳುತ್ತೇನೆ... ಒಂದೇ ಒಂದು ಬಾರಿ, ಕೊನೆಯ ದಾಗಿ ಕೇಳುತ್ತಿದ್ದೇನೆ.... ನನಗೆ ಸನ್ಯಾಸವನ್ನು ತೆಗೆದುಕೊಳ್ಳಲು ಅಪ್ಪಣೆ ಕೊಡು ತಾಯಿ ! ರಾಮ ! ರಾಮಾII

ತಾಯಿ : ಅಯ್ಯಯ್ಯೋ !! ಇನ್ನೇನು ಗತಿ !- ಏನು ಮಾಡಲಿ !... ಮಗನನ್ನೂ

ಕಳೆದು ಕೊಂಡು, ಅವನ ಮನೋರಥವನ್ನೂ ಹಾಳು ಮಾಡಲೆ !.... ಶಂಭೋ ಮಹಾದೇವ!.... ನೀನೇ ಸರ್ವರಕ್ಷಕ. ನನ್ನ ಮಗನನ್ನು ಕಾಪಾಡು. ಸನ್ಯಾಸ ತೆಗೆದುಕೊಳ್ಳಲಿ.... ತೆಗೆದುಕೊಂಡು ಬಿಡಲಿ !.... ಮಗೂ ! ಸನ್ಯಾಸವನ್ನು ಸ್ವೀಕರಿಸಿಬಿಡು.... ಹರಹರಾ! .... (ಕಣ್ಣೀರು, ಬಿಕ್ಕಿ ಬಿಕ್ಕಿ ಅಳುವ ದುಃಖ)

ಶಂಕರ : ಬದುಕಿದೆ ಅಮ್ಮಾ!..ನೀನು ನನ್ನ ಬಾಳನ್ನು ಸಾರ್ಥಕ ಮಾಡಿದೆ... ಇದೋ ನೋಡು... ಸನ್ಯಾಸವನ್ನು ಸ್ವೀಕರಿಸಿದೆ...(ಕಣ್ಣುಮುಚ್ಚಿ ಮಂತ್ರ ಉಚ್ಚಾರಣೆ ಮಾಡುವಂತೆ ಮಾಡಿ, ಜನಿವಾರ ಕಿತ್ತೆಸೆಯುವಿಕೆ)....

(ಒಳಪರದೆ ಬೀಳುತ್ತದೆ) ಪರದೆಯ ಹಿಂದೆಯೇ ಶಂಕರರ ಮಾತು. ಇದೋ-ನೋಡು ತಾಯಿ.... ಮೊಸಳೆಯು ನನ್ನ ಕಾಲನ್ನುಬಿಟ್ಟು ಬಿಟ್ಟಿತು.... ಬಿಟ್ಟು ಬಿಟ್ಟಿತು.... ಜೈ !ಶಂಕರ!!.

(ತಾಯಿ ಮತ್ತು ಶಂಕರರು ಮುಂದಿನ ಪರದೆಗೆ ಬರುತ್ತಾರೆ. ತಾಯಿ ಇನ್ನೂ ದುಃಖಿತಳು. ಶಂಕರರು, ನೋವಿನ ಕಾಲನ್ನು ಕುಂಟಿನೊಡನೆ ಪ್ರದರ್ಶಿಸಿತ್ತಾ ಬಂದು ಕಾಷಾಯ ವಸ್ತ್ರವನ್ನು ಹೊದ್ದು ಬರುತ್ತಾರೆ).

ಶಂಕರ : ಜಗನ್ಮಾತೆ ! ಈಗ ನೀವು ನನ್ನ ದೃಷ್ಟಿಯಲ್ಲಿ ಲೋಕಮಾತೆ ಆಗಿದ್ದೀರಿ. ಎಲ್ಲಾ ನಾರೀಮಣಿಯರಂತೆ ನೀವೂ ನನಗೆ ಜಗನ್ಮಾತೆಯ ರಾಗಿದ್ದೀರಿ... ಜಗನ್ಮಾತೆ!... ನನಗೆ ಇಲ್ಲಿ ಇರಲು ಆಗದು. ಗುರುವನ್ನು ಅರಿಸಬೇಕು... ಅನಂತ ನಮಸ್ಕಾರ ಗಳು... ಹೋಗಿಬರುತ್ತೇನೆ... ಜಗನ್ಮಾತೆ... ನೀವು ಚಿಂತಿಸದಿರಿ... ನಿಮ್ಮ ಅಂತ್ಯಕಾಲದಲ್ಲಾದರೂ ಖಂಡಿತಾ ನಿಮ್ಮ ದರ್ಶನ ಪಡೆಯುತ್ತೇನೆ.....

(ನಿರ್ಗಮನ, ನಿಧಾನವಾಗಿ, ಬೇರ್ಪಡುವಿಕೆ ತಾಯಿಯು, ಎರಡು ಕೈಗಳನ್ನೂ ನೀಡಿ, ಆರ್ತತೆಯನ್ನು ತೋರಿಸುತ್ತಾ, ಮಾತನಾಡಲು ಆಗದೆ, ಬೇರೊಂದು ಮಾರ್ಗದಲ್ಲಿ ಹೋಗುತ್ತಾರೆ)

(ಒಂದೆರಡು ನಿಮಿಷ ವಿರಾಮ. ಈ ಸಮಯದಲ್ಲಿ ವೈರಾಗ್ಯ ಗೀತೆಯೊಂದನ್ನು ಹಾಡಬಹುದು. ಶಂಕರನ ಪಾತ್ರದವರು, ಒಳ್ಳೆ ಕಾಶಾ ಯವಸ್ತ್ರ, ದಂಡ ಕಮಂಡಲಗಳನ್ನು ಸಿದ್ಧಮಾಡಿಕೊಂಡು ಮುಂದಿನ ಪರದೆಯಲ್ಲಿ ಬರುತ್ತಾರೆ. ಅರೆಗತ್ತಲು ಇರಬೇಕು)

ಶಂಕರ : ಮಹಾದೇವ!.... ಮಹಾದೇವ!! ನನ್ನ ಗುರುವೆಲ್ಲಿ?... ಎಲ್ಲಿ! ಭೋ ಸ್ವಾಮಿನ್ ನನಗೆ ಗುರುದರ್ಶನವನ್ನು ದಯಪಾಲಿಸು!

(ನೇಪತ್ಯದಿಂದ ಸ್ವಲ್ಪ ಪ್ರಕಾಶ ಬರುವಂತೆ ತೋರುತ್ತದೆ)

ಅತ್ತ ಕಡೆನೋಡುತ್ತಾ

ಅಹೋ! ಹೌದು !! ನರ್ಮದಾ ತೀರದಲ್ಲಿ ... ನನ್ನ ಗುರುವರ್ಯರಿದ್ದಾರೆ... ಅಲ್ಲಿ ನನ್ನ ಗುರುಗಳು.... ದೊರೆಯುವುದು ನಿಶ್ಚಯ! ಅಲ್ಲಿಗೇ ಹೋಗಬೇಕು...

(ನಿಧಾನವಾಗಿ ನಿಷ್ಕ್ರಮಣ)

ೕ ೕ ೕ

ದೃಶ್ಯ ೩

(ಈ ದೃಶ್ಯದಲ್ಲಿ ಗೌಡಪಾದರು ಶಂಕರನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ....) (ಗೋದಾವರೀ ತೀರದಲ್ಲಿ ಗೌಡಪಾದರ ಆಶ್ರಮ. ನಾಲ್ಕು ಶಿಷ್ಯರೊಂದಿಗೆ ಪಾಠ ಪ್ರವಚನಗಳನ್ನು ಮಾಡಲು ಸಿದ್ಧವಾದ ಸ್ಥಳ. ಶಿಷ್ಯರು ಇನ್ನೂ ಬಂದಿರುವುದಿಲ್ಲ. ಗೌಡಪಾದರೊಬ್ಬರೇ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಅರೆಗತ್ತಲೆಯ ಪ್ರದೇಶ) (ಧ್ಯಾನಾಸಕ್ತರಾಗಿದ್ದ ಗೌಡಪಾದರಿಗೆ ಪರದೆಯ ಒಳಗಿನಿಂದ ಪ್ರಕಾಶ ಬಂದಂತೆ ತೋರಿ ಎಚ್ಚರ ಗೊಳ್ಳುತ್ತಾರೆ).... ಅಚ್ಚರಿಯಿಂದ

(ನಂತರ ಶಂಕರರ ನೆರಳು ಮಾತ್ರ ಕಾಣುತ್ತದೆ. ಉತ್ಸುಕತೆ ಮತ್ತು ಆಶ್ಚರ್ಯಗಳಿಂದಲೂ ಉತ್ಕಟ ಭಕ್ತಿಯಿಂದಲೂ, ಗೌಡಪಾದರು ಮಾತನಾಡುತ್ತಾರೆ). ಮೇಲೆದ್ದು....

ಗೌಡಪಾದ : ಏನಿದು ! ದೇವದೇವಾ!! ಕರುಣಾನಿಧೇ, ಶಂಭೋ ಮಹಾದೇವಾ!!!.... ನಾನು ನೋಡುತ್ತಿರುವುದು ನಿಜವೆ (ಅನುಮಾನ) ..... ಹೌದು, ಹೌದು! ಆ ಕರುಣಾ ಮಯನ ಕಟಾಕ್ಷವೇ ಸರಿ !... (ಪ್ರೀತಿಯಿಂದ) ಶಂಭೋ, ಶಂಕರಾ!.. ಲೋಕಕಲ್ಯಾಣಕ್ಕಾಗಿ... ನೀನು... ಆಗಲೇ ಅವತರಿಸಿಬಿಟ್ಟಿರುವೆ... ಭೋ ಶಂಕರ!... ಬಾಲ ಸನ್ಯಾಸಿಯ ರೂಪದಲ್ಲಿ ನನ್ನಡೆಗೇ ಬರುತ್ತಿರುವೆ !.... ನಾರಾಯಣ.... ನಾರಾಯಣ!!... (ಧೀರ್ಘದಂಡ ನಮಸ್ಕಾರ) (ಎದ್ದುನಿಂತು)... (ಕನಸಿನಿಂದ ಎಚ್ಚೆತ್ತವರಂತೆ)... ಏನಿದು!.. ನಾನು ಗುರು..... ಪರಮಾತ್ಮ! ... ನೀನು ಶಿಷ್ಯನೆ ?... ಇರಬಹುದು ಲೋಕದ ದೃಷ್ಟಿಯಿಂದ,

ಇದೊಂದು ಅನಿವಾರ್ಯ ಸಂಬಂಧ !.... ನಾನು ಧನ್ಯ, ನಾನು ಧನ್ಯ.... ನಾರಾಯಣ ! ಲೋಕ ರಕ್ಷಕಾ !, ಧನುರ್ಧಾರಿ ಯಾಗಿ, ರಾಕ್ಷಸ ರಾವಣ ನನ್ನು ಕೊಂದು, ಲೋಕವನ್ನು ಉದ್ಧಾರ ಮಾಡಿದೆ, ಕೌರವರನ್ನ ನಾಶ ಮಾಡಿ ಧರ್ಮವನ್ನು ಸ್ಥಾಪಿಸಿದೆ.... ಹೌದು !.... ವಾಮನನಾಗಿಯೂ, ಮೂರು ಲೋಕವನ್ನು ಆಕ್ರಮಿಸಿದ ಪುರುಷೋತ್ತಮನಲ್ಲವೆ, ನೀನು? .... (ಹುಸಿ ನಗೆಯಿಂದ) ಈಗ ಬಾಲಸನ್ಯಾಸಿಯಾಗಿ, ಲೋಕ ಕಲ್ಯಾಣ ಮಾರ್ಗವನ್ನು ಉಪದೇಶಿಸಲು ಬಂದೆ !.... ನೀನಲ್ಲದೆ, ಈ ಜಗತ್ತನ್ನು ರಕ್ಷಿಸುವವರಾರು?.... (ಪ್ರಕಾಶವು ಮಾಯವಾಗುವುದು, ಅರೆಗತ್ತಲೆ ಯೂ ಹೋಗಿ, ಸಾಮಾನ್ಯ ಬೆಳಕು ಬಂದು, ಒಂದು ನಿಮಿಷದವರೆಗೆ ಮೌನದಿಂದ ಕುಳಿತಿರುವುದು)

(ಶಿಷ್ಯಂದಿರ ಪ್ರವೇಶ) : ಶ್ರೀ ಗುರುಭ್ಯೋನ್ನಮಃ !

ಗೌಡಪಾದರು : ಶ್ರೀಮನ್ನಾರಾಯಣ ! ಸ್ವಾಗತ.... ಬನ್ನಿರಿ (ಶಿಷ್ಯಂದಿರು ಪ್ರವೇಶ ಮಾಡಿ, ದಂಡಕ್ಕೆ ನಮಸ್ಕಾರ ಮಾಡಿ, ನಂತರ ಗುರುಗಳಿಗೆ ವಂದಿಸಿ, ಕುಳಿತುಕೊಳ್ಳುತ್ತಾರೆ)

(ಶಿಷ್ಯಂದಿರು ತಾಳೆಗರಿಗಳನ್ನು ತಿರುವಿ, ಅಭ್ಯಾಸ ಮಾಡುವವರಂತೆ, 1/2 ನಿಮಿಷ, ಕುಳಿತಿರುತ್ತಾರೆ)

ಹೊರಗಡೆಯಿಂದ : ನಾರಾಯಣ ! ನಾರಾಯಣ !!...ಶ್ರೀ ಗುರುಭ್ಯೋನ್ನಮಃ

ಗೌಡಪಾದರು : (ಹುಸಿನಗೆಯ ಪ್ರೀತಿಯಿಂದ) ಸ್ವಾಗತ !....

(ಶಂಕರರ ಪ್ರವೇಶ, ಕಾಷಾಯ, ರುದ್ರಾಕ್ಷಿ, ದಂಡ ಕಮಂಡಲಾದಿಗಳ ಅವತರಣಿಕೆಯಲ್ಲಿ)

ನಾರಾಯಣ ! ನಾರಾಯಣ !! (ಶಂಕರರೂ ದಂಡಕ್ಕೆ ನಮಸ್ಕರಿಸಿ, ಗುರುಗಳಿಗೆ ವಂದಿಸುತ್ತಾರೆ)

(ಗೌಡಪಾದರು, ಶಂಕರರನ್ನು ಕುಳಿತುಕೊಳ್ಳಲು ತಮ್ಮ ಪಕ್ಕದಲ್ಲಿಯೇ ಸ್ಥಾನವನ್ನು ಕೊಡುತ್ತಾರೆ. ಶಂಕರರು ಕುಳಿತುಕೊಳ್ಳುತ್ತಾರೆ).

ಗೌಡಪಾದರು : (ನಗುಮುಖದಿಂದ) ಶಂಕರಾ !, ನಿಮ್ಮ ವೃತ್ತಾಂತವೆಲ್ಲಾ, ನನಗೆ ತಿಳಿದುಬಂದಿದೆ. ನಾನು ನಿಮ್ಮಂತಹ, ಜ್ಞಾನ ಶಿಷ್ಯನಿಗೆ ಗುರುವಾಗಿ ಧನ್ಯನೇ ಹೌದು. ನನ್ನಿಂದ ನಿಮಗೆ, ಕೇವಲ, ಕೆಲವು ಮಾರ್ಗದರ್ಶನ ಗಳೇ ಸಾಕಾಗಿದೆ. ವೇದ, ವೇದಾಂತಗಳನ್ನೂ, ಬ್ರಹ್ಮ ಸೂತ್ರಗಳನ್ನೂ ಚೆನ್ನಾಗಿ ತಿಳಿದ ಮಹಾಜ್ಞಾನಿಯಲ್ಲವೆ ನೀವು ? (ಶಿಷ್ಯರನ್ನು ಉದ್ದೇಶಿಸಿ) .... ಶಿಷ್ಯವರ್ಯರಾ ! ಇವರು, ಶಂಕರರು... ಬಾಲಸನ್ಯಾಸಿ... ವೇದ

ವೇದಾಂತ ಪಾಠಗಳನ್ನು ಮುಗಿಸಿ, ಅಸದೃಶ ಪಾಂಡಿತ್ಯವನ್ನು ಪಡೆದಿದ್ದಾರೆ. ಸ್ವಲ್ಪ ನಿಮಿತ್ತಕ್ಕಾಗಿ, ನನ್ನಲ್ಲಿ ಶಿಷ್ಯವೃತ್ತಿಯನ್ನು ಮಾಡುವವರಿದ್ದಾರೆ. ಇವರಿಗೆ ಶತ ಮೀಮಾಂಸ ವಿಚಾರಗಳ ಪರಿಚಯ ಚೆನ್ನಾಗಿದೆ. ಕೇವಲ ಮೀಮಾಂಸದಲ್ಲಿ, ಅಲ್ಪಸ್ವಲ್ಪ ನಿರ್ದೇಶನವನ್ನು ನನ್ನಿಂದ ಪಡೆಯುವವರಿದ್ದಾರೆ... (ಶಂಕರರೊಂದಿಗೆ).. ಶಂಕರಾ! ಈತ, ವಿಮಲಾನಂದ, ಇವರು ಅಮಲಾನಂದರು.... ವಿಶ್ವಾನಂದ, ನಿತ್ಯಾನಂದರು, ಇವರು.... (ಎಂದು ಪರಿಚಯ ಮಾಡಿಸು ತ್ತಾರೆ. ಪರಸ್ಪರ, ವಂದನೆಗಳಾಗುತ್ತವೆ)

ಗೌಡಪಾದರು : ಜ್ಞಾನಿ ಶಂಕರರ, ಸಹಯೋಗವೊಂದು, ನಮಗೆ ಹೆಚ್ಚಿನ ಜ್ಞಾನಶಕ್ತಿಯನ್ನು ಕೊಡುವುದಾಗಿದೆ. ಈತನಲ್ಲಿ ವೇದಾಂತ ಚರ್ಚೆಗಳನ್ನೂ, ಸಂಬಂಧಿಸಿದ, ವಿಚಾರ ಗಳನ್ನೂ ಸಂಶಯ ನಿವಾರಣೆಗಳನ್ನೂ ಮಾಡಬಹುದು.

ಶಿಷ್ಯರು : ನಾವು ಧನ್ಯರು ! ನಾವು ಧನ್ಯರು !! (ಪರದೆ ಬೀಳುವುದು)

೩ ನಿಮಿಷಗಳಲ್ಲಿ ಒಂದು ತತ್ವ ಬೋಧೆಯ ಗೀತೆಯನ್ನಾಗಲಿ, ಶ್ಲೋಕಗಳನ್ನಾಗಲಿ ಹಾಡಬಹುದು.

○ ○ ○

ದೃಶ್ಯ ೪

(ಗೌಡಪಾದರೂ, ಶಂಕರರೂ, ವೇದಾಂತ ಚರ್ಚೆಗಳನ್ನು ಮಾಡುತ್ತಾರೆ. ಶಿಷ್ಯರೂ ಇರುತ್ತಾರೆ)

ಪರದೆ ಏಳುತ್ತದೆ.

ಶಂಕರರು : (ಎದ್ದುನಿಂತು) ಭೋ ಸ್ವಾಮಿನ್!, ಸನ್ಯಾಸಿಗಳಿಗೆ ಯಾವ ಕರ್ಮ ಬಂಧನವೂ ಇಲ್ಲ. ಅವರಿಗೆ ಕರ್ಮಫಲಗಳೂ ಬೇಕಿಲ್ಲ. ಬೇಕಾದುದು ಜ್ಞಾನ !.. ಅಲ್ಲವೆ?

ಗೌಡಪಾದರು : ಹೌದು ಆದರೆ, ಪ್ರಪಂಚವೆಲ್ಲವೂ, ಸನ್ಯಾಸಿಗಳಾಗವು, ಸಂಸಾರಿಗಳು ಜ್ಞಾನ ಪಡೆಯುವುದೆಂತು? ಸನ್ಯಾಸಿಗಳಾದ ನಾವು ಲೋಕ ಕಲ್ಯಾಣಕ್ಕಾಗಿ ಮಾಡುವ ಕೆಲಸವೇನು?

ಶಂಕರ : ನಾನು ಏನೇ ಮಾಡಿದರೂ.... ಅಂದರೆ, ಲೋಕಕ್ಕೆಂದು ಬೋಧಿಸಲು ಹೋದರೆ, ಆ ರೂಪದಲ್ಲಿ ನಾವೊಂದು ಕರ್ಮಾಚರಣೆ ಮಾಡಿದಂತಾಗಲೊಲ್ಲದೆ?

ಗೌಡಪಾದರು : ಸಂನ್ಯಾಸಿಗೆ ಕರ್ಮ ಬಂಧನವಿಲ್ಲದಿದ್ದರೂ, ಛೋಕ ಸಂಗ್ರಹಕ್ಕಾಗಿ ಮಾಡಬೇಕಾದುದನ್ನು ಮಾಡಬೇಕು.

ಶಂಕರ : ಅದ್ವೈತ ಚಿಂತನೆಯಲ್ಲಿ ನಾನೇ ಲೋಕವೆಂದೂ ಲೋಕವೇ ನಾನೆಂದೂ, ರೂಪುಗೊಂಡ ಭಾವವೊಂದು, ನೆಲೆಯಾಗಿ ಬಂದು ಬಿಡುತ್ತದೆ. ಇದರಿಂದಾಗಿ, ನಾನು ನನ್ನಲ್ಲಿದ್ದು, ಲೋಕ ಸಂಗ್ರಹವೆಂಬುದನ್ನು ಯಾವ ಭಾವನೆಯಿಂದ ಮಾಡಬಹುದು ?

ಗೌಡಪಾದ : ಅದೇ ವೇದಾಂತದಲ್ಲಿ ಸಂಗ್ರಹವಾಗಿರುವ ವಿಚಾರ, ಗೀತೆಯಲ್ಲಿಯ ಭೋಧೆ. ಬ್ರಹ್ಮಸೂತ್ರದ ನಿಘಂಟು '*ಸ್ವಲ್ಪ ಆಲೋಚಿಸುತ್ತಿರುವಂತೆ ನಟಿಸು*.... ಶಂಕರಾ! ಇದು ನಿನಗೆ ತಿಳಿಯದ ವಿಚಾರವಲ್ಲ. ಗೀತೆಯಲ್ಲಿ ಹೇಳಿರುವಂತೆ, ಸರ್ವಕರ್ಮ ಪರಿತ್ಯಾಗವು, ಎಲ್ಲವನ್ನೂ ಭಗವಂತನಲ್ಲಿ ಅರ್ಪಿಸಿಬಿಡುವುದರಿಂದಲೂ ಆಗುತ್ತದೆ. ಆದುದರಿಂದ ಕರ್ಮ ಮಾಡಿಯೂ, ಅವನಿಗೆ ಅರ್ಪಿಸಿ, ಆತ್ಮಜ್ಞಾನವನ್ನು ಪಡೆಯಬಹುದು. ಅದಕ್ಕೆ ಸನ್ಯಾಸ ಸ್ವೀಕಾರವೇ ಮುಖ್ಯವಲ್ಲ.... ಶಂಕರಾ ! .... ಇದನ್ನೆಲ್ಲಾ ತಿಳಿದ ನೀನು , ಗೀತೆ, ಉಪನಿಷತ್ತು ಮತ್ತು ಬ್ರಹ್ಮ

ಸೂತ್ರಗಳಿಗೆ, ವ್ಯಾಖ್ಯಾನ ಮಾಡಲೆಂದು ನನ್ನ ಬಯಕೆ.

ಶಂಕರ : ಗುರ್ವಾಜ್ಞೆ !, ನಾನು ಧನ್ಯ, ಸಮಯವರಿತು ಖಂಡಿತಾ ಮಾಡುತ್ತೇನೆ. ನನಗೆ ಇನ್ನೂ ಲೋಕಾನುಭವಗಳು ಬೇಕಾಗಿವೆ. ವಾದ ಪ್ರಪಂಚವನ್ನು ನೋಡಬೇಕಾಗಿದೆ. ತೀರ್ಥಯಾತ್ರೆಗಳನ್ನು ಮಾಡಬೇಕಾಗಿದೆ. ಗುರುಗಳ ಅಪ್ಪಣೆಯನ್ನು ಕಾಯು ತ್ತಿದ್ದೇನೆ.

ಗೌಡಪಾದರು : ನಿಃಸ್ಸಂಕೋಚವಾಗಿ, ನೀನು ತೀರ್ಥಯಾತ್ರೆಯ ಮುಖೇನಾ, ಲೋಕಸಂಗ್ರಹ ವನ್ನೂ, ವಾದಗಳನ್ನೂ ಮಾಡಲು ಸಮರ್ಥನಿದ್ದೀಯೆ, ಖಂಡಿತವಾಗಿ ಮಾಡತಕ್ಕದ್ದು. ಕಾಶೀ ಸ್ಥಲವು ನಮ್ಮ ಜ್ಞಾನ ಪಾಂಡಿತ್ಯ ಗಳಿಗೆ ಪ್ರಮುಖವಾದ ನಗರ. ವಿಶ್ವೇಶ್ವರನ ಸನ್ನಿಧಿ. ನೀನು ಅಲ್ಲಿಗೆ ಹೋಗಿ ಅಲ್ಲಿಂದ ಪರ್ಯಟನವನ್ನು ಅವಕಾಶವಿದ್ದಂತೆ ಮಾಡಬಹುದು. ಮುಂದೆ ನೀನು "ಶಂಕರಾಚಾರ್ಯ" ಎಂದು ಕರೆಯಲ್ಪಡುವುದು.

ಶಂಕರ : ಗುರ್ವಾಜ್ಞೆ ! (ಏಳುತ್ತಾರೆ)..... ಶ್ರೀಮನ್ನಾರಾಯಣ.....

(ಪರದೆ ಬೀಳುತ್ತದೆ)

(ನೇಪಥ್ಯದಲ್ಲಿ ಸಾವಧಾನ ಸಂಗೀತ) ಶಂಕರರು ಮುಂದಿನ ಪರದೆಯ ಮೂಲಕ ನಿಧಾನವಾಗಿ ಬರುತ್ತಾರೆ ಮತ್ತೆ ಹಾಗೆಯೇ ಬೇರೊಂದೆಡೆಗೆ ಹೊರಟು ಹೋಗುತ್ತಾರೆ.

o o o

ದೃಶ್ಯ ೪

(ಕಾಶೀ ಕ್ಷೇತ್ರ... ಒಂದೆಡೆಯಲ್ಲಿ ಶಂಕರರು ಧ್ಯಾನಮಗ್ನರಾಗಿ ಕುಳಿತು ಕೊಳ್ಳುತ್ತಾರೆ. ಹತ್ತಿರ ಮೂವರು ವಿಪ್ರರು ಕುಳಿತಿರುತ್ತಾರೆ .

ಪಂಡಿತ ವೈದಿಕ ಬ್ರಾಹ್ಮಣನೊಬ್ಬ ಮಾತನಾಡುತ್ತಾನೆ. ಭೋ, ಸ್ವಾಮಿನ್, (ನಮಸ್ಕರಿಸಿ, ನಿಂತು) ನೆನ್ನೆ ತಾವು ಗಂಗಾತೀರದಲ್ಲಿ ಮಾತನಾಡುತ್ತಿದ್ದ ತತ್ವ ವಿಚಾರವನ್ನು ತಿಳಿದೆನು. ತಾವು.... ತಾವು ತಪ್ಪು ವಿಚಾರವನ್ನು ಮುಂದೆ ಮಾಡುತ್ತಿಲ್ಲವಷ್ಟೆ ? .... ನನ್ನ ಔದ್ಧಿತ್ಯವನ್ನು ಮನ್ನಿಸಬೇಕು ಪ್ರಭೋ !

ಶಂಕರ : ಚಿಂತೆ ಇಲ್ಲ, ವಿಪ್ರವರ್ಯ !, ಸಂಕೋಚಬೇಡ. ವಿಚಾರವನ್ನು ಚೆನ್ನಾಗಿ ಮಥನ ಮಾಡಿ ತಿಳಿಯುವಲ್ಲಿ ಸಂಕೋಚವಿರಬಾರದು... ಯಾವ

ವಿಚಾರ... ಕರ್ಮಾ ಚರಣೆಯ ವಿಚಾರವಲ್ಲವೆ ?

ವಿಪ್ರ : ಹೌದು ಮುನಿವರ್ಯ, ಕರ್ಮಾಚರಣೆಯು ಶಾಶ್ವತ ಸಮಾಧಾನವನ್ನು ಕೊಡದಿದ್ದಲ್ಲಿ, ಬಿಟ್ಟುಬಿಡಬೇಕಲ್ಲವೆ ?

ಶಂಕರ : ವೇದ ಕರ್ಮಗಳನ್ನು ಬಿಡುವ ವಿಚಾರದಲ್ಲಿ ಪೂರ್ಣವಾಗಿ ವಿರೋಧ ವಿಲ್ಲ. ಕರ್ಮಗಳ ಫಲವನ್ನು ಕೊಡುತ್ತವೆ. ಫಲವನ್ನು ಅನುಭವಿಸಿದ ನಂತರ ಮತ್ತೆ ಕರ್ಮ ಮಾಡಬೇಕಾಗುತ್ತದೆ. ಮತ್ತೆ ಸ್ವಲ್ಪ ಅನುಭವಿಸು ವುದಿದೆ.... ಅಂದರೆ ಇದೂ ಮೋಕ್ಷಕ್ಕೆ ದಾರಿಯಲ್ಲ ವೆಂಬ ಅರ್ಥದಲ್ಲಿ ತಿಳಿಯಬೇಕು. ಮೋಕ್ಷ ಜ್ಞಾನಿಗೇ ಸಿದ್ಧ. ಕರ್ಮಗಳಿಂದ ಅಲ್ಲ.

ವಿಪ್ರ : ಹಾಗಾದರೆ, ನಾವು ಮಾಡುವುದೇನು ? ಉದ್ದಾಮ ಪಂಡಿತರುಗಳು ಕರ್ಮಗಳನ್ನು ಪ್ರಬಲವಾಗಿ ಅನುಮೋದಿಸುತ್ತಾರೆ. ಜೈ ಮುನಿಯವರ ಮೀಮಾಂಸದಲ್ಲಿನ ಮಾರ್ಗವನ್ನು ಎತ್ತಿ ಹಿಡಿದಿದ್ದಾರೆ.

ಶಂಕರ : ಜೈ ಮುನಿಯವರು, ಮೀಮಾಂಸವನ್ನು ತಂದು ಲೋಕಕ್ಕೆ ಉಪಕಾರ ಮಾಡಿದ್ದಾರೆ. ಆದರೆ, ಅವರಿಂದ ವೇದಾಂತ ಚರ್ಚೆ ಆಗಿಲ್ಲ. ಉಪನಿ ಷತ್ತುಗಳ ವಿಚಾರವಾಗಿ ಅವರು ಏನನ್ನೂ ಮಾಡಿಲ್ಲ. ಕೈ ಬಿಟ್ಟಿದ್ದಾರೆ. ಆತ್ಮಜ್ಞಾನದ ತಿಳುವಳಿಕೆಯು ಉಪನಿಷತ್ತಿನಿಂದ ಬರುತ್ತದೆ. ಸರ್ವರಲ್ಲಿ ಯೂ, ಬ್ರಹ್ಮನನ್ನು ಗುರುತಿಸು ಜ್ಞಾನವೇ ಮೋಕ್ಷದಾಯಕವಾದದ್ದು. ತನ್ನಲ್ಲಿ ಬೆಳಗುತ್ತಿರುವ ಪುರುಷೋತ್ತಮನನ್ನು ಕಂಡುಕೊಳ್ಳುವುದೇ ಆತ್ಮಜ್ಞಾನ, ಅದ್ವೈತದ ಸಾರ.

ವಿಪ್ರ : ಕರ್ಮ ಮಾಡದಿದ್ದಲ್ಲಿ ಘೋರನರಕವಲ್ಲವೆ ?

ಶಂಕರ : ಘೋರ ನರಕವೂ, ಅಶಾಶ್ವತವಾದ ಕರ್ಮ ಫಲದಿಂದಲೇ ಆಗಬಹುದು. ಕರ್ಮದಿಂದ ಬಿಡುಗಡೆ ಇಲ್ಲದಿದ್ದರೆ, ಜನ್ಮ ಮೃತ್ಯುಗಳಿಂದಲೂ, ಬಿಡುಗಡೆ ಇಲ್ಲ. ನರಕ ಸ್ವರ್ಗಗಳೆಂದು ಹೇಳಲ್ಪಡುವ ಸ್ಥಾನಗಳೂ, ಒಂದರ ಮೇಲೊಂದು, ಅನುಭವಕ್ಕೆ ಬರುತ್ತವೆ. ಆದುದರಿಂದ ನಾವು ಜನ್ಮ ಮೃತ್ಯುಗಳಿಂದಲೇ ಪಾರಾಗಬೇಕು. ಅದೇ ಉತ್ತಮೋತ್ತಮ ಜ್ಞಾನ... ಮೋಕ್ಷ.

ವಿಪ್ರ : (ಆನಂದಮಗ್ನನಾಗಿ) ಸವಿಗೊಡುವ ಅಭಿಪ್ರಾಯ ಮುನಿವರ್ಯ ! ನನ್ನ ಜ್ಞಾನವು ಆ ಮಟ್ಟವನ್ನು ಮುಟ್ಟಿಲ್ಲ. ಆದರೆ.... ಕರ್ಮದಿಂದ ಹೇಗೆ ಬಿಡುಗಡೆಯಾದೀತು?

ಶಂಕರರು : ಸತ್ಕರ್ಮಗಳನ್ನು ಅನಿವಾರ್ಯವಾಗಿ ಮಾಡಲೇಬೇಕು. ಭಗವಂತನು ಗೀತೆಯಲ್ಲಿ ಹೇಳಿರುವಂತೆ ಎಲ್ಲವನ್ನೂ ಈಶ್ವರನಿಗೆ ಅರ್ಪಿಸಿಬಿಡ

ಬೇಕು. ತನ್ನದೆಂದು ಮಾಡಿಕೊಳ್ಳಬಾರದು. ಈ ರೀತಿ, ಈಶ್ವರಾರ್ಪಣವೂ ಜ್ಞಾನ ಕೊಡುತ್ತದೆ. ಕರ್ಮತ್ಯಾಗವಾಗದಿದ್ದಲ್ಲಿ, ಕರ್ಮಫಲ ತ್ಯಾಗವು ಮುಕ್ತಿ ಹೇತುವಾಗುತ್ತದೆ.

ವಿಪ್ರ : ನಾನು ಧನ್ಯ ! ನಾನು ಧನ್ಯ !! ಗುರುವರ್ಯ ! ನನಗೆ ತಮ್ಮ ಅನುಗ್ರಹವಾಗಬೇಕು. (ಅಂಗಲಾಚಿ ಬೇಡುತ್ತಾನೆ)

ಶಂಕರರು : ತಥಾಸ್ತು

○ ○ ○

ದೃಶ್ಯ ೫

(ಮಾತೃಕರ್ಮ)

(ಮುಂದಿನ ಪರದೆಯಲ್ಲಿ ಶಂಕರರು ೩ ೪ ಜನ ನಿಂತುಕೊಂಡಿರುವರು.)

ಶಿಷ್ಯೋತ್ತಮರಿರಾ ! ವಿಧಿ ನನ್ನನ್ನು ದಕ್ಷಿಣ ಭಾರತದ ಕಡೆ ಸೆಳೆಯುತ್ತಿದೆ. ಸ್ವಲ್ಪಕಾಲ ದಕ್ಷಿಣದ ಕಡೆ ಯಾತ್ರೆ ಮಾಡಿಕೊಂಡು ಬರುತ್ತೇನೆ. ಈ ಸಮಯದಲ್ಲಿ ಇಲ್ಲಿ ಅಧ್ಯಯನ ಮಾಡುತ್ತಾ ಇರಿ.

(ನಿಧಾನವಾಗಿ ಶಂಕರರೊಬ್ಬರೇ ಮುಂದೆ ಹೋಗುತ್ತಾರೆ ಉಳಿದವರು ಬೇರೆ ಕಡೆ ಮ್ಲಾನವದನರಾಗಿ ಹೋಗುತ್ತಾರೆ)

(ಸ್ವಲ್ಪ ಸಮಯದ ನಂತರ, ಶಂಕರರೊಬ್ಬರೇ ನಿಧಾನವಾಗಿ ಸಾಗುತ್ತಾರೆ.... ಮುಂದಿನ ಪರದೆಯಲ್ಲಿ ವೈರಾಗ್ಯ ಗೀತವೊಂದನ್ನು ಒಂದೆರಡು ನಿಮಿಷ ಹಾಡಬಹುದು)

(ಒಳ ಪರದೆಯಲ್ಲಿ ಶಂಕರರ ತಾಯಿಯು ಮರಣೋನ್ಮುಖಿವರಾಗಿ ಮಲಗಿರುವ ದೃಶ್ಯ. ಬಂದು ಒಬ್ಬರು ಹತ್ತಿರ ಇರುತ್ತಾರೆ ಪರದೆ ಏಳುತ್ತದೆ.)

ಬಂಧು (ಕೈಲಾಸ) : ತಾಯಿ ! ನಮ್ಮ ಕರ್ಮ ಬಂಧನವು ನಮ್ಮನ್ನು ಯಾವ ಒಳ್ಳೆಯ ಕೆಲಸವನ್ನೂ ಮಾಡಲು ಬಿಡಲೊಲ್ಲದು. ಊರಿನ ಬ್ರಾಹ್ಮಣರೆಲ್ಲರೂ ನಮ್ಮಿಂದ ದೂರವಾಗಿದ್ದಾರೆ. ನನಗೂ ದೂರವಿರಲು ಬೆದರಿಕೆ ಹಾಕುತ್ತಿದ್ದಾರೆ. ಮುಂದೇನು ಮಾಡುವುದೋ ತಿಳಿಯದು. (ದುಃಖ ಸೂಚಿಸುತ್ತಾನೆ)

ಜಗನ್ಮಾತೆ (ಶಂಕರರ ತಾಯಿ) ಕೈಲಾಸ ! ನನ್ನ ಜೀವನಯಾತ್ರೆಯು ಕಳೆಯುತ್ತಾ

ಬಂದಿದೆ ಅದರೊಂದಿಗೆ, ನನ್ನ ದುರ್ದಿನಗಳೂ ಕಳೆಯುತ್ತದೆ. ನನಗೆ ದುಃಖವಿಲ್ಲ. ಊರಿನ ಬ್ರಾಹ್ಮಣರು ಅವರ ಇಷ್ಟವಿದ್ದಂತೆ ಮಾಡಲಿ. ಪಾಪ ಪುಣ್ಯಗಳು ಅವರ ತಲೆಗೆ ಕಟ್ಟಿದ್ದು. ನೀನೂ, ನನಗಾಗಿ ಅವರೊಡನೆ, ನಿಷ್ಠುರ ಕಟ್ಟಿಕೊಳ್ಳುವುದು ಬೇಡ... ಉಫ್... ವಿಧಿ ಇದ್ದಂತೆ ಆಗಲಿ... ಉಫ್... ಶಂಕರ ಬಂದನೆ ?

ಕೈಲಾಸ : ಶಂಕರರು ಬೇಗ ಬರುವರೆಂದು ವರ್ತಮಾನ ಬಂದಿದೆ. ಬೇಗ ಬರುವವರಿದ್ದಾರೆ. ಆತಂಕ ಪಡಬೇಡಿ

(ಹೊರಗೆ ಕೆಲವು ಬಾಲಕರು ಶಬ್ದ ಮಾಡುತ್ತಾ ಶಂಕರರು ಬಂದರು !... ಬಂದರು !! ಎನ್ನುತ್ತಾರೆ. ಸ್ವಲ್ಪ ಸಮಯದ ನಂತರ ಶಂಕರರ ಪ್ರವೇಶ)

ಶಂಭೋ ಶಂಕರ ! ಶಂಭೋ ಶಂಕರ !! ಭೋ ಜಗನ್ಮಾತೆ ! ಹೇಗಿದ್ದೀರಿ!!

ಜಗನ್ಮಾತೆ, (ಆನಂದದಿಂದ): ಓಹ್ !... ಬಂದೆಯಾ ಕಂದ !!... ನೀನು ಖಂಡಿತಾ ಬರುತ್ತೀಯೆಂದು ನನಗೆ ಗೋಚರವಾಯಿತು. ಇನ್ನು ನಾನು ಮುಕ್ತಳು. ನನ್ನ ಜನ್ಮ ಸಾರ್ಥಕವಾಯಿತು.... ಉಫ್.....

ಶಂಕರರು : ನನ್ನ ಕರ್ತವ್ಯ ಲೋಪವು ಆಗಲು ಬಿಡುವುದಿಲ್ಲ. ಚಿಂತೆ ಬೇಡ ತಾಯಿ ! (ಕೈಲಾಸನ ಕಡೆ ತಿರುಗಿ)ಕೈಲಾಸ ! ನೀವೆಲ್ಲಾ ಸೌಖ್ಯವಷ್ಟೆ ? ನೀನು ಧನ್ಯ. ಜಗನ್ಮಾತೆಯನ್ನು ನೋಡಿಕೊಳ್ಳುವ ಪುಣ್ಯ ಮಾಡುತ್ತಿದ್ದೀಯೆ ? ಊರಿನ ಬ್ರಾಹ್ಮಣರ ವಿಚಾರಗಳೂ ತಿಳಿಯ ಬಂದಿತು... ಇರಲಿ ... ದೈವೇಚ್ಛೆ ಇದ್ದಂತೆ ಆಗುತ್ತದೆ...

ಜಗನ್ಮಾತೆ : ಕೈಲಾಸನ ಉಪಸ್ಥಿತಿ ಪಡೆದಿದ್ದೇನೆ. ಅವನೊಬ್ಬನಿಲ್ಲದಿದ್ದರೆ, ನಮ್ಮ ಊರಿನ ಬ್ರಾಹ್ಮಣರು, ನಾನು ಇದ್ದಂತೆಯೇ ರಣ ಹದ್ದುಗಳ ಪಾಲು ಮಾಡುತ್ತಿದ್ದರೋ ಏನೋ ಉಫ್...

ಶಂಕರರು (ಖಿನ್ನರಾಗಿ) : ಚಿಂತೆ ಬೇಡ ತಾಯಿ ! ಎಲ್ಲರನ್ನೂ ರಕ್ಷಿಸುವ ಪರಮಾತ್ಮ ನಿಮ್ಮ ಬಳಿಯೂ ಇದ್ದಾನೆ... (ಕೈಲಾಸನ ಕಡೆ ತಿರುಗಿ) ಕೈಲಸಾ! ನಾನು ಇಲ್ಲಿರಲು ಆಗದು ಜಗನ್ಮಾತೆಯ ದರ್ಶನವಾಯಿತು. ಊರಿನ ಮಂಟಪದ ಬಳಿ ಇರುತ್ತೇನೆ . ಜಗನ್ಮಾತೆಯು ಕರೆದಾಗ ಬಂದು ತಿಳಿಸು ಬರುತ್ತೇನೆ... (ಎಂದು ನಿಧಾನವಾಗಿ ನಿರ್ಗಮನ)

ಕೈಲಾಸ : ಅವಶ್ಯವಾಗಿ ಆಗಲಿ

(ಪರದೆ ಬೀಳುವುದು)

(ಒಂದು ಶ್ಲೋಕವನ್ನು ಅಳವಡಿಸಿ ಹಾಡುವುದು)

ಅತಿ ಮಧುರ ಚಾಪಹಸ್ತಾಂ
ಅಪರಿತಾಮೋದ ಬಾಳ ಸೌಭಾಗ್ಯಂ
ಅರುಣಾಂ ಅತಿಶಯ ಕರುಣಾಂ
ಅಭಿನವ ಕುಲ ಸುಂದರೀಂ ವಂದೇ

(ಶಂಕರರು ಒಂದು ಮಂಟಪದಲ್ಲಿ ಧ್ಯಾನಮಗ್ನರಾಗಿ ಕುಳಿತಿರುವ ದೃಶ್ಯ. ಊರಿನ ಬ್ರಾಹ್ಮಣನೊಬ್ಬ ಬಂದು ನಿಲ್ಲುತ್ತಾನೆ)

ಬ್ರಾಹ್ಮಣ : ನಮೋ ನಮಃ !

ಶಂಕರ : (ಕಣ್ಣುಬಿಟ್ಟು)ಶಂಭೋ ಶಂಕರ ! ಭೋ ವಿಪ್ರೋತ್ತಮಾ ! ಸೌಖ್ಯವಷ್ಟೆ ?

ವಿಪ್ರ : ತಮ್ಮ ಅನುಗ್ರಹ ಒಂದು ಸಮಸ್ಯಾ ಪರಿಹಾರ ಮಾಡಲು ಬಂದಿದ್ದೇನೆ.

ಶಂಕರ : ಅವಶ್ಯವಾಗಿ !

ವಿಪ್ರ : ಸನ್ಯಾಸಿಯು ಪೂರ್ವದ ಜನನಿಯ ಅಂತ್ಯ ಸಮಸ್ಕಾರಗಳನ್ನು ಮಾಡಲಾದೀತೆ?

ಶಂಕರ(ಹುಸಿ ನಗೆಯಿಂದ) : ಕರ್ಮಕಾಂಡಗಳನ್ನೆಲ್ಲಾ ತಿರುವು ಹಾಕಿರುವಂತೆ ತೋರುತ್ತದೆ. ಆಗಲಿ !.... ವಿಪ್ರೋತ್ತಮಾ! ಏಕಮಾತ್ರ ಪುತ್ರನಿದ್ದು, ಸನ್ಯಾಸಿಯಾಗಿ ಬಿಟ್ಟಿದ್ದರೆ, ಆ ಮಾತೆಗೆ ಬೇರೆ ಗತ್ಯಂತರವಿಲ್ಲದಿರುವಾಗಿ ಮಾಡುವುದು ಅನಿವಾರ್ಯ ವಾಗುವುದಿಲ್ಲವೆ ? ಅಲ್ಲಿ ಸನ್ಯಾಸಿಗೆ ಕರ್ಮವಿಲ್ಲ, ಕರ್ತವ್ಯವಿದೆ.

ವಿಪ್ರ : ಇದು ನಮ್ಮ ಮನಸ್ಸಿಗೆ ಒಪ್ಪದ ಮಾತು. ನಾವುಗಳಾದರೂ, ನಿಮ್ಮ ಪೂರ್ವ ಜನನಿಯ ಮರಣವಾದಲ್ಲಿ, ಸಹಾಯಕ್ಕೆ ಬರಲಾರೆವು.

ಶಂಕರರು (ಖೇದವನ್ನು ವ್ಯಕ್ತಪಡಿಸಿ) ನಿಮ್ಮ, ನಿಮ್ಮ ಅಭಿಪ್ರಾಯಗಳಿಗೂ, ಇಷ್ಟಕ್ಕೂ ನಾನು ಬಾಧೆ ತರಲಾರೆ !

(ಕೈಲಾಸ ಓಡಿ ಬಂದು ಮಾತೆಯ ಚಿಂತಾಜನಕ ಸ್ಥಿತಿಯನ್ನು ತಿಳಿಸುತ್ತಾನೆ)

(ಶಂಕರರೂ ಎಲ್ಲರೂ, ಅವಸರದಿಂದ ನಿರ್ಗಮನ ಮಾಡುತ್ತಾರೆ)

(ಶಂಕರರ ತಾಯಿಯು ಅಂತಿಮ ಉಸಿರನ್ನು ಎಳೆಯುವ ದೃಶ್ಯ. ಶಂಕರರ ಪ್ರವೇಶ... ಕೈಲಾಸನೂ ಬರುತ್ತಾನೆ)

ಶಂಕರ : (ಖಿನ್ನವದನರಾಗಿ) ಕೈಲಾಸ !, ಅಂತಿಮ ಘಳಿಗೆಯು ಬಂದೇ ಬಿಟ್ಟಿತು... ಓಂ ಶಂಭೋ ಶಂಕರ !.... (ತಾಯಿಯ ಕಡೆಗೇ ಆರ್ತತೆಯಿಂದ ನೋಡುತ್ತಿರುವುದು) (ನಿಧಾನವಾಗಿ, ತಾಯಿಯ ಕೊನೆ

ಉಸಿರು ಹೊರಡುತ್ತದೆ)

ಶಂಕರ : ಶಂಕರ ಶಂಕರ!... ಕೈಲಾಸ! ಮಾತೆಯು ದೈವಾಧೀನರಾಗಿಬಿಟ್ಟರು.... ಈ ಊರಿನ ಬ್ರಾಹ್ಮಣರು ಉತ್ತರಕ್ರಿಯೆಗಳಿಗೆ ಸಹಾಯಕರಾಗುವುದಿಲ್ಲ. ನಾನೇ ಮಾಡುತ್ತೇನೆ.... ನಂತರ ಕಾಶಿಗೆ ಹೋಗುತ್ತೇನೆ....

ನೀನು ಧನ್ಯ.... ದೇವರು ನಿನಗೆ ಒಳ್ಳೆಯದನ್ನು ಮಾಡಲಿ! ... ನೀನು ಹೋಗಿ ಬಾ !

(ಪರದೆ ಬೀಳುವುದು) (ಚರಮ ಶ್ಲೋಕ)

೦ ೦ ೦

ದೃಶ್ಯ -೬

(ಮಂಡನಮಿಶ್ರರ ವಿಜಯ)

(ಕಾಶೀ ಕ್ಷೇತ್ರದಲ್ಲಿ ಶಂಕರರ ಶಿಷ್ಯರುಗಳು ಒಂದಾಗಿ ಮಾತನಾಡು ತ್ತಿದ್ದಾರೆ)

ಒಬ್ಬರು : ಮಂಡನಮಿಶ್ರರನ್ನು ಬ್ರಹ್ಮನೆಂದೂ, ಆತನ ಪತ್ನಿಯನ್ನು ಶಾರದಾ ಮಾತೆಯೆಂದೂ ಜನರು ಮಾನ್ಯ ಮಾಡಿದ್ದಾರೆ.

ಮತ್ತೊಬ್ಬರು : ಅವರು ಮೀಮಾಂಸಕರು, ಕರ್ಮಪ್ರಧಾನ್ಯತೆಯನ್ನು ಮಾನ್ಯ ಮಾಡಿದ್ದಾರೆ. ಆದರೆ, ವೇದಾಂತಜ್ಞಾನವೂ ಬಹಳ ಚೆನ್ನಾಗಿದೆ. ಉದ್ಧಾಮ ಪಂಡಿತರೆಂಬುದರಲ್ಲಿ ಸಂಶಯವೇ ಇಲ್ಲ. ಹಾಲು ಸಕ್ಕರೆ ಸೇರಿದಂತೆ, ಅವರಲ್ಲಿ ಬ್ರಹ್ಮ ಸರಸ್ವತಿಯು ಸಂಯೋಗವು ಯಾವ ಉತ್ಪ್ರೇಕ್ಷೆಯೂ ಇಲ್ಲ.

ಒಬ್ಬರು : ಸರಿಯಾದ ಮಾತು ! ಆದರೆ, ನಮ್ಮ ಗುರುಗಳ ವಾದಕ್ಕೂ, ಅವರ ಅಭಿಪ್ರಾಯಗಳಿಗೂ ತಾಳಮೇಳವಿಲ್ಲ. ಇಬ್ಬರಲ್ಲೂ ಘೋರ ವಾದವಾಗಬಹುದು.

ಮತ್ತೊಬ್ಬರು : ವಾದವು ಉಂಟಾದಲ್ಲಿ, ಒಂದು ಮಹೋತ್ಸವವಾದಂತೆ ಆಗುವುದು. ದೊಡ್ಡ ನಿರ್ಣಯಗಳು ಹೊರಬೀಳುತ್ತವೆ. (ಹೊರಗಡೆ ಯಿಂದ ಶಬ್ದ ಕೇಳುತ್ತದೆ... ಶಂಭೋ ಮಹಾದೇವ !, ಶಿಷ್ಯರು ಗಡಿಬಿಡಿ ಯಿಂದ ಮೇಲೇಳುತ್ತಾರೆ.... ಗುರುಗಳು ಬಂದರು... ಬಂದರು ಎಂದು

ಸಡಗರ ಪಡುತ್ತಾರೆ) ಶಂಕರ ಪ್ರವೇಶ.

ಶಂಕರರು : ಶಂಭೋ ಶಂಕರ ... ಶಿಷ್ಯೋಮರುಗಳಿರಾ ಕ್ಷೇಮವಷ್ಟೆ!

ಒಬ್ಬ : ತಮ್ಮ ಕೃಪೆಯಿಂದ ಎಲ್ಲರೂ ಕ್ಷೇಮ. ಕಾಶಿಯ ವಿದ್ವಾಂಸ ಶಿಖಾಮಣಿಗಳಾದ, ಮಂಡನಮಿಶ್ರರು ತಮ್ಮನ್ನು ನೋಡಲು ಬಯಸಿ, ಆಹ್ವಾನ ಕಳುಹಿಸಿದ್ದಾರೆ.

ಶಂಕರರು : ಅವಶ್ಯವಾಗಿ ನೋಡತಕ್ಕದ್ದು, ಅವರು ನನ್ನಲ್ಲಿ ವಾದ ಮಾಡುವುದು ಖಂಡಿತಾ. ಎಲ್ಲರೂ ಸಿದ್ಧರಾಗಿರಿ ಹೋಗೋಣ.

(ಒಂದು ಶ್ಲೋಕ ಹಾಡಬಹುದು... ೨ ನಿಮಿಶ)

ವಂದೇ ಶಂಭುಂ ಉಮಾಪತಿಂ ಸುರಗುರುಂ ವಂದೇ ಜಗತ್ಕಾರಣಂ
ವಂದೇ ಪನ್ನಗ ಭೂಷಣಂ ಮ ಗಧರಂ ವಂದೇ ಪಶೂನಾಂ ಪತಿಂ
ವಂದೇ ಸೂರ್ಯ ಶಶಾಂಕ ವಹ್ನಿ ನಯನಂ ವಂದೇ ಮುಕುಂದ ಪ್ರಿಯಂ
ವಂದೇ ಭಕ್ತ ಜನಾಶ್ರಿಯಂಚ ವರದಂ ವಂದೇ ಶಿವಂ ಶಂಕರಂ

(ಶಂಕರರ ಶಿಷ್ಯರಿಬ್ಬರು ಮುಂದಿನ ಪರದೆಯಲ್ಲಿ ಬರುತ್ತಾರೆ)

ಒಬ್ಬ : ಅಬ್ಬಾ ! ಏನು ವಾಗ್ವಿವಾದ ! ಏನು ವೈಖರಿ !! ಸಾಕ್ಷಾತ್ ಜ್ಞಾನ ಸಾಗರಗಳಿದ್ದಂತೆ ಇಬ್ಬರೂ ಗಂಭೀರವಾದ ಮತ್ತು ಕ್ಲಿಷ್ಟವಾದ ವಾದಗಳನ್ನು ನಡೆಸುತ್ತಿದ್ದಾರೆ.

ಮತ್ತೊಬ್ಬ : ಗುರುಗಳು ಜೈಮಿನಿಯವರ ಪೂರ್ವ ಮೀಮಾಂಸದ ಬಗ್ಗೆ, ತಮ್ಮ ಟೀಕೆ ಗಳನ್ನು ಸಮರ್ಥಿಸಿ ಗೆದ್ದರು.

ಒಬ್ಬ : ಆ, ತಾಯಿ.... ಜಗನ್ಮಾತೆಯಂತೆ ಶಾರದಾದೇವಿಯು, ಅವತಾರ ಸ್ತ್ರೀ ರತ್ನವೆಂಬುದಲ್ಲಿ ಸಂದೇಹವೇ ಇಲ್ಲ. ಪತಿಯ ವಾದದಲ್ಲೂ ನಿಷ್ಪಕ್ಷವಾದ ನಿರ್ಧಾರವನ್ನು, ಸಂಕೋಚವಿಲ್ಲದೆ ಹೇಳಿಬಿಟ್ಟರು.

ಮತ್ತೊಬ್ಬ : ಆಕೆ ಧನ್ಯಳು.... ಧನ್ಯಳು !!

ಒಬ್ಬ : ಇಂದು ಗುರುಗಳು ಪರಕಾಯ ಪ್ರವೇಶ ಮಾಡುವವರಿದ್ದಾರೆ. ವಾದದ ಕ್ಲಿಷ್ಟ ಭಾಗಕ್ಕೆ ಉತ್ತರ ಕೊಡಲು ಅವಕಾಶ ಬೇಕಾಗಿದೆ.

ಮತ್ತೊಬ್ಬ : ಗುರುಗಳು ಅದ್ವಿತೀಯರು, ವಾದವನ್ನು ಗೆಲ್ಲುವುದರಲ್ಲಿ ಸಂಶಯವಿಲ್ಲ. ಆದರೂ, ಮಂಡನಮಿಶ್ರರ ಪಾಂಡಿತ್ಯ ಅಮೋಘವಾದುದು. ಪ್ರತ್ಯಕ್ಷ ಶಾರದೆಯೇ ಇರುವ ಮಹಾಸ್ಥಾನವದು.

ಒಬ್ಬ : ಭಗವಂತನು ಶಂಕರರ ರೂಪದಲ್ಲಿ, ತಸ್ಯ ತಾಡನ ಮಾಡುತ್ತಿದ್ದಾನೆ. ವೇದಾಂತ ಜ್ಞಾನವನ್ನು ಸಮರ್ಥಿಸಿ, ಅದ್ವೈತವಾದಕ್ಕೆ ಪುಟಕೊಟ್ಟಿದ್ದಾರೆ.

ಮತ್ತೊಬ್ಬ : ಕರ್ಮಗಳನ್ನು ತ್ಯಜಿಸಲು ಶಂಕರರು ಹೇಳುವುದಿಲ್ಲ. ಕರ್ಮಾಚರಣೆ

ಯನ್ನು ಅನುಮೋದಿಸಿ ಈಶ್ವರಾರ್ಪಣ ಬುದ್ಧಿಯಿಂದ ಮಾಡಬೇಕೆಂದೇ ಅವರ ವಾದ. ಕರ್ಮದ ಫಲಗಳು ಒಳ್ಳೆಯದೇ ಆದರೂ ಅದು, ಸ್ಥಿರ ವಲ್ಲ. ಮುಕ್ತಿದಾಯಕವಲ್ಲ, ಆದುದರಿಂದ, ಆತ್ಮಜ್ಞಾನವನ್ನೇ ಪಡೆಯ ಬೇಕು... ಅದಕ್ಕಾಗಿ ಕರ್ಮತ್ಯಾಗವನ್ನು ಈಶ್ವರಾರ್ಪಣ ದ್ವಾರ ಮಾಡಬೇಕೆಂದೇ ಅವರು ಹೇಳುವುದು.

ಒಬ್ಬ : ಆತ್ಮಜ್ಞಾನ ವಾದಕ್ಕೆ ನಾಂದಿಯಾಯಿತು. ಶಂಕರರ ಪರಮಧ್ಯೇಯವು ಸಾರ್ಥಕವಾಯಿತು ! ಧನ್ಯ ! ಧನ್ಯ !! (ಪರದ ಬೀಳುವುದು)

୦ ୦ ୦

ದೃಶ್ಯ –೭

(ಮಂಡನ ಮಿಶ್ರರ ವಾದಮಂಟಪ, ಗಂಧಪುಷ್ಪಾದಿಗಳಿಂದ ಅರ್ಚಿತವಾದ ದೇವರ ಪೀಠ. ಒಂದೆಡೆ ಮಂಡನಮಿಶ್ರರು, ಮತ್ತೊಂಡೆದೆ ಶಂಕರರು, ಮಧ್ಯ ಭಾಗದಲ್ಲಿ ಸುಖಾಸೀನವಾಗಿ ತೇಜೋಮಯಳಾಗಿ ಕುಳಿತಿರುವ ಶಾರದೆ)

(ಶಾರದೆಯ ಎಡಗೈಯಲ್ಲಿ ಪುಸ್ತಕ, ಬಲಗೈಯಿಯಲ್ಲಿ ಕಮಲ ಪುಷ್ಪ, ಕತ್ತಿನಲ್ಲಿ ಹಾರವಿರುತ್ತದೆ. ಬಿಳೀ ಉಡುಪು ತಲೆಯಲ್ಲಿ ಸಾಧಾರಣ ಕಿರೀಟ ಅಥವಾ ಅಂದವಾಗಿ ಬಾಚಿ ಎರಡೆಡೆಗೂ ಕೇಶರಾಶಿಯನ್ನು ಹಂಚಿ ಬಿಟ್ಟಿರುವುದು.)

ಶಾರದೆ : (ಮಂಡನಮಿಶ್ರರನ್ನು ಕುರಿತು) ಪ್ರಭೋ ! ಕರ್ಮಾಚರಣೆಯು ಮುಖ್ಯವಲ್ಲ ದಿದ್ದರೂ ತ್ಯಾಜ್ಯವಲ್ಲವೆಂದು ಶಂಕರರೇ ಹೇಳುತ್ತಿದ್ದಾರೆ. ಗೀತೆಯಲ್ಲಿಯೂ

"ಯಜ್ಞೋದಾನ ತಪಃ ಕರ್ಮ, ಪಾವನಾನಿಮನೀಷಿಣಾಂ"-

ಎಂದು ಹೇಳಿದೆ. ಸರ್ವಕರ್ಮ ಪರಿತ್ಯಾಗವಾಗಲೀ, ಕರ್ಮಫಲ ತ್ಯಾಗವಾಗಲೀ, ಒಂದೇ ಗುರಿಗೆ ಮುಟ್ಟುತ್ತದೆ... ಅದೇ ಮುಕ್ತಿ ಸಾಧನವೆಂಬುದು ಸಾಧುವಾಗಿದೆ.

ಮಂಡನ ಮಿಶ್ರರು : ಹೌದು ಶಾರದಾ ! ಕರ್ಮವು ಫಲವನ್ನು ಕೊಡುತ್ತದೆ.

ಅದೂ ಅದೃಷ್ಟ. ಫಲ ಭೋಗದ ನಂತರ ಪುನಃ ಕರ್ಮಾಚರಣೆಯನ್ನು ಮಾಡಬೇಕಾದುದು ಅನಿವಾರ್ಯ. ಅಂದ ಮೇಲೆ ಶರೀರ ಧಾರಣೆ ಆಗಲೇಬೇಕು. ಜನ್ಮ ಮೃತ್ಯುವಿನ ಶೃಂಖಲೆಯಿಂದ ಬಿಡುಗಡೆ ಇರುವುದಿಲ್ಲ. ಈ ಶೃಂಖಲೆಯಿಂದ ಮುಕ್ತರಾಗುವ ಸಾಧನವೇ ಮೇಲು. ಅದಕ್ಕೆ ಆತ್ಮಜ್ಞಾನ, ಆತ್ಮ ದರ್ಶನವೇ ಗುರಿಯಾಗಿರಬೇಕು. ಕರ್ಮಫಲಗಳು ಎಷ್ಟೇ ದೊಡ್ಡದಾಗಿದ್ದರೂ, ಮುಕ್ತಿ ಹೇತುವಲ್ಲ. ಶಂಕರರ ಪ್ರಸ್ಥಾನತ್ರಯವನ್ನು ನೋಡಿಯೇ ನನಗೆ ಭಾಸವಾಯಿತು.

ಶಾರದೆ : ಪ್ರಭೋ ! ಈ ವಾದದಲ್ಲಿ, ಶ್ರೀ ಶಂಕರಾಚಾರ್ಯರಿಗೇ ಜಯ !

ಮಂಡನಮಿಶ್ರ : ನಿಃಸ್ಸಂಶಯವಾಗಿ ! -(ಶಂಕರರ ಕಡೆ ತಿರುಗಿ) ಭೋ ಸ್ವಾಮಿ! ತಾವು ಈಶ್ವರಾಂಶ ಸಂಭೂತರು. ತಮ್ಮ ಪಾಂಡಿತ್ಯಕ್ಕೆ ತಲೆ ಬಾಗುತ್ತೇನೆ. ತಮ್ಮ ಅನುಗ್ರಹವಾದಲ್ಲಿ, ನನಗೆ ಸನ್ಯಾಸವನ್ನು ಕೊಟ್ಟು ತಮ್ಮ ಶಿಷ್ಯ ವರ್ಗದಲ್ಲಿ ಸೇರಿಸಿಕೊಳ್ಳಬೇಕು.

ಶಂಕರ : ಪಂಡಿತೋತ್ತಮಾ ! ತಮ್ಮ ಪಾಂಡಿತ್ಯವನ್ನು ನಾನು ಮೆಚ್ಚಿದೆ. ಪ್ರತ್ಯಕ್ಷ ಬ್ರಹ್ಮ ಶಾರದೆಯಂತಿರುವ ನಿಮ್ಮ ಸಹಯೋಗವು, ನನ್ನನ್ನು ಪುನೀತನನ್ನಾಗಿ ಮಾಡುತ್ತದೆ.

(ಶಂಕರರು ಶಾರದಾಂಬೆಯನ್ನು ಕುರಿತು) ಭೋ ಮಾತಾ !, ನನಗೂ ಮಂಡನ ಮಿಶ್ರರಿಗೂ, ಇನ್ನು ಮುಂದೆ ನೀವು ಆರಾಧ್ಯ ದೇವತೆಯಾಗಿರುವಿರಿ. ಸನ್ಯಾಸಿಗಳಾಗುವ ಮಂಡನಮಿಶ್ರರಿಗೆ ಪೂರ್ವಾಶ್ರಮದ ಧರ್ಮ ಕಡಿದು ಹೋಗುತ್ತದೆ. ಅನುಗ್ರಹಿಸಬೇಕು ತಾಯಿ !

ಶಾರದ : (ನಿಶ್ಚಿಂತಳಾಗಿ) ನನ್ನ ಅಭ್ಯಂತರವಿಲ್ಲ.

ಶಂಕರರು : ನಾವು ಧನ್ಯರು.... ಧನ್ಯರು !!

(ಎಲ್ಲರ ನಿರ್ಗಮನ)

o o o

ದೃಶ್ಯ ೮

(ಮುಂದಿನ ಪರದೆಯಲ್ಲಿ, ಶಾರದಾಂಬೆ, ಶಂಕರರು, ಹಸ್ತಾಮಲಕರು (ಹಿಂದಿನ ಮಂಡನಮಿಶ್ರ ಸನ್ಯಾಸದಲ್ಲಿ) ಮತ್ತು ಶಿಷ್ಯರು ಬರುತ್ತಾರೆ. ಶಂಕರರು ಮುಂದೆ, ದಂಡ ಕಮಂಡಲದೊಡನೆ ಹೋಗುತ್ತಾರೆ. ಹಿಂದೆ, ಸಾಲಂಕೃತಳಾದ, ಕಿರೀಟಧಾರಿಣಿ, ಯೋಗಿಣಿಯಾದ ಶಾರದೆ ಇನ್ನೂ ಹಿಂದೆ ಶಿಷ್ಯರು ಕೊನೆಗೆ ಹಸ್ತಾಮಲಕರು)

ಒಂದುಗೀತೆಯ, ಮಧುರನಾದದ ಆವರಣಧಲ್ಲಿ ಸುಮ್ಮನೆ ಒಬ್ಬರ ಹಿಂದೆ ಒಬ್ಬರು ಹೋಗುತ್ತಾರೆ.

ಭಜಗೋವಿಂದಂ... ಭಜಗೋವಿಂದಂ...

(ಒಳದೃಶ್ಯ : ಬದರಿಕಾಶ್ರಮ : ಎರಡು ಒಂದೇ ಸಮಯದಲ್ಲಿ ಪೀಠಗಳು. ೪ ಕಿರೀಟಗಳು ಇತ್ಯಾದಿಗಳಿಂದ ಪೀಠಸ್ಥಾಪನೆಗಳಿಗೆ ಸರಿಯಾದ ಸಿದ್ಧತೆ ಆಗುವುದು)

೦ ೦ ೦

ಪರದೆ ಏಳುವುದು

ಎಲ್ಲರೂ ನಿಧಾನವಾಗಿ ಬರುತ್ತಾರೆ. ನಂತರ

ಶಂಕರರು : ಭೋ ಜಗನ್ಮಾತಾ ! ಇದು ಬದರಿಕಾಶ್ರಮ, ಕಾಶ್ಮೀರ. ಭರತಖಂಡದ ಉತ್ತರದ ತುದಿನಾಡು. ಇಲ್ಲಿ ನಮ್ಮ ಧರ್ಮಕ್ಕೆ ಅನುಗುಣವಾದ "ಶಾರದಾ ಪೀಠವು ಸ್ಥಾಪಿತವಾಗಬೇಕು) ಅನುಗ್ರಹವಾಗಬೇಕು !

ಹಸನ್ಮುಖಿಯಾಗಿ

ಶಾರದ : ತಥಾಸ್ತು!

(ಶಂಕರರು ಒಬ್ಬ ಶಿಷ್ಯರನ್ನು ಒಂದು ಪೀಠದ ಮೇಲೆ ಕುಳ್ಳಿರಿಸುತ್ತಾರೆ ಶಾರದಾಂಬ ಬೇರೊಂದರಲ್ಲಿ ಕುಳಿತುಕೊಳ್ಳುತ್ತಾಳೆ (ಮಂಗಳ ಶ್ಲೋಕ).

ದಯಾಮಯೀ ಶಾರದಾ ಪಾಹಿಮಾ..
ದಯಾಮಯೀ ಶಾರದಾ

೦ ೦ ೦ ೦ ೦

ವನಸಿರಿ

– ಸೀತಾರಾಮಚಂದ್ರ

(ಗೆಳೆಯರು ಕೂಡಿ ವಿಹಾರ ಹೊರಟರು. ಈ ಪಟ್ಟಣ ವಾಸದ ದಿನನಿತ್ಯದ ಜಂಝಾಟ ಬೇಸರವೆನಿಸಿತ್ತು. ಎಲ್ಲಾದರೂ ತಣ್ಣನೆಗಾಳಿ ನಿಶ್ಯಬ್ದವಾದ ವಾತಾವರಣ, ಕಣ್ಣಿಗೆ ಇಂಪಾದ ಹಸಿರು, ಹುಡುಕುತ್ತಾ ಮುಂದೆ ನಡೆದರು, ಸ್ವತಂತ್ರವಾಗಿ ಮನಸ್ಸಿಗೆ ಬಂದಂತೆ ಮಾತು, ನಗು ಸುರಿಮಳೆ. ಗೆಳೆಯರು ಆನಂದವಾಗಿದ್ದರು.)

ನಾಣಿ .... ನಾಣಿ....(*ಯಾರೋ ಕೂಗಿದ ಧ್ವನಿ*)

ವೆಂಕ: ಓ.... ನಾಣಿ ನಿನ್ನ ಕೂಗ್ತಾ ಇದ್ದಾರೆ ಕಣೊ.

ನಾಣಿ: ಅದು ಯಾರೋ.... ಈ ನಿರ್ಜನವಾದ ಪ್ರದೇಶದಲ್ಲಿ ?

ಸೀನು: ಹೌದು ಕಣೋ ನನ್ಗೂ ಆಶ್ಚರ್ಯ ಯಾರಿರಬಹುದು ?

ವೆಂಕ: ಬಾ ಹಾಗೆ ಮುಂದೆ ನೋಡೋಣ.

ಸೀನು: ನೋಡು. ಆ ದೂರದಲ್ಲಿ ಪೊದೆ ಇದೆಯಲ್ಲಾ, ಅದರ ಹಿಂದಿನಿಂದ ಶಬ್ದ ಬರ್ತಾ ಇದೆ.

ನಾಣಿ: ಯಾಕೋ ಹೆದರಿಕೆ ಆಗ್ತಾ ಇದೆ. ಭೂತ, ಪ್ರೇತವೋ ಯಾವುದಾದರೂ ಭಯಾನಕ ಪ್ರಾಣಿಯೋ . . . ?!

ವೆಂಕ: ಅಯ್ಯೋ.... ಬಾರೋ ನೀನೊಬ್ಬ ಪುಕ್ಕಲ....

ನಾಣಿ: ಹಾಗಲ್ಲವೋ ಏನಾದರೂ ಕೆಟ್ಟದ್ದು ಆದರೆ ಮನೆಯವರಿಗೆ ಏನು ಹೇಳೋದು? ನಾವು ಯಾರಿಗೂ ಹೇಳಿ ಬಂದಿಲ್ಲ.

ಸೀನು: ಇಷ್ಟೆಲ್ಲಾ ಇರುವವನು ನಮ್ಮ ಜೊತೆ ಏಕೆ ಬಂದೆ ?

ವೆಂಕ: ಓ.... ಫಳ ಫಳ ಅಂತಾ ಹೊಳೀತಾ ಇದೆ. ಪೊದೆಯ ಎಲೆ ಸರಿಸಿ ನೋಡೋಣ.

ಗೆಳಯರಿಗೆ ಉಸಿರು ಕಟ್ಟಿದ ಹಾಗೆ ಆಗುತ್ತೆ ಹೆದರಿಕೆಗೆ ನಡುಕ

ಉಂಟಾಗಿದೆ. ಅಷ್ಟರಲ್ಲಿ ನಾಣಿ.... ನಾಣಿ.... ಮತ್ತೆ ಕೂಗು.... ಧೈರ್ಯವಾಗಿ ಮುಂದೆ ಹೋಗಿ ನೋಡುತ್ತಾರೆ

ವೆಂಕ: ಇದೊಂದು ಪುಟ್ಟ ಪ್ರಾಣಿ ಕಣೋ .... ಆದರೆ ಮನುಷ್ಯನಂತೆ ಮಾತಾಡುತ್ತೆ!!

ನಾಣಿ: ನನ್ನ ಹೆಸರು ಅದಕ್ಕೆ ಹೇಗೆ ಗೊತ್ತು ?! ನೋಡಿದ್ರೆ ಒಳ್ಳೆ ಕೆಟ್ಟ "ಅಷ್ಟಾ ವಕ್ರ" ಇದ್ದ ಹಾಗೆ ಇದೆ.

ಸೀನು: ಪಾಪ ಹಾಗೆನ್ನಬೇಡವೋ ಒಂಟಿಯಾಗಿದೆ ಅದರ ಅಪ್ಪ ಅಮ್ಮ ಯಾರೋ? ಸಂಗಡಿಗರು ಎಲ್ಲೋ....?

ವೆಂಕ: ಬಾರೋ ಈ ಚೀಲಕ್ಕೆ ಹಾಕಿಕೊಂಡು ನಮ್ಮ ಜೊತೆ ಕರೆದುಕೊಂಡು ಹೋಗೋಣ. ದಾರೀಲಿ ಇದೇ ತರಹದ ಅಪ್ಪ, ಅಮ್ಮ ಸಿಗಬಹುದು.

ನಾಣಿ: ಸಾಕು ಸಾಕು. ನಮ್ಗೆ ಏಕೆ ಈ ತಲೆನೋವು ನಡಿ ಸುಮ್ಮನೆ.

ಸೀನು: ಇಲ್ಲ ಕಣೋ ಹಾಗೆನ್ನಬೇಡ. ಆದರೆ ಮುಟ್ಟಿದರೆ ಕಚ್ಚಿ-ಗಿಚ್ಚಿ ಮಾಡಿದರೆ ?! ಮೊದಲೇ ನನಗೆ ಅಲರ್ಜಿ ಸದ್ಯ ದೇವರೇ ಗತಿ.

ವೆಂಕ: ಇಲ್ಲ ಹೆದರಬೇಡ, ನಾನು ಎತ್ತಿಕೊಂಡು ಬರ್ತೀನಿ ಆಯ್ತಾ....

ನಾಣಿ: ಅಲ್ಲ ಕಣೋ, ಇದು ಎಂಥಾ ಪ್ರಾಣಿ ಮುಖ ಹಂದಿಯ ಹಾಗಿದೆ. ಹಿಂದೆ ಪುಕ್ಕ ಇದೆ ಹಣೆ ಮಧ್ಯೆ ಕಣ್ಣು ಎರಡು ಕಿವಿಗಳು ವಿಕಾರ ಅಂದ್ರೆ ವಿಕಾರ.

ವೆಂಕ: ಈಗಿನ ಕಾಲದಲ್ಲಿ ಏನೂ ಹೇಳೋಕ್ಕೆ ಆಗೋಲ್ಲ. ಸುನಾಮಿ, ಪ್ರಳಯ, ಹೀಗೆಲ್ಲಾ ಆಗಿ ಯಾವುದೋ ಗ್ರಹದ ಜೀವರಾಶಿ ಇರಬೇಕು. ಬೇರೆ ಬೇರೆ ಜಾತಿ ಕ್ರಾಸ್ ಆಗಿ ಈ ತರಹ ಇದ್ರೂ ಇರಬಹುದು.

ಸೀನು: ಜೋರಾಗಿ ಹೇಳಬೇಡ ವಿಜ್ಞಾನಿಗಳು ಬಂದು ಮುತ್ತಾಕಿ ಬಿಡ್ತಾರೆ. ಡಾಕ್ಟರ್‌ಗಳು ಪೋಲೀಸ್‌ನೋರು ಒಂದೊಂದಲ್ಲ ರಾಮಾಯಣ.

ವೆಂಕ: ಹೌದು ನೀನ್ಹೇಳೋದು ನಿಜ, ಇನ್ನು ಸಂಶೋಧನೆ ಅದೂ ಇದೂ . . ಅಂತ ಪಾಪ ಅದನ್ನ ಹಿಂಸೆ ಮಾಡಿ ಪ್ರಾಣ ತೆಗೆದ್ರೂ ತೆಗೀತಾರೆ.

ನಾಣಿ: ನಮಗೇಕೆ ಆ ಪಾಪ. ಅದು ನನ್ನ ಅಷ್ಟು ಅಕ್ಕರೆಯಿಂದ ಕರೆಯುತ್ತೆ. ನನ್ಗೂ ಅನಸುತ್ತೆ. ಏನಾದರೂ ಅದ್ಭುತ, ಮ್ಯಾಜಿಕ್ ಮಾಡುತ್ತೋ ಏನೋ?

ವೆಂಕ: ಈ ಮಾತಲ್ಲಿ ನಾವು ಎಷ್ಟು ದೂರ ನಡೆದು ಬಂದೆವು ? ಏನು

ಒಂದು ಗಿಡ ಇಲ್ಲ, ಮರ ಇಲ್ಲ, ಹೊಳೆ ಹರಿಯುತ್ತೆ ಅಂದೆ ಅದೂ ಇಲ್ಲ.

ಸೀನು: ಹೌದು ನಾನು ಹೇಳಲಿಲ್ವಾ, ಈ ಜನ ಕಾಡು, ಬೆಟ್ಟ, ನೀರು ಎಲ್ಲಾ ಏಕೆ ಬಿಡ್ತಾರೆ. ರಾಕ್ಷಸರು ಎಲ್ಲಾ ಹಾಳು ಮಾಡಿದ್ದಾರೆ. ಮೊದಲ ಹಾಗೆ ಕಾಡು, ಮರ, ಪ್ರಾಣಿ, ಪಕ್ಷಿ ಎಲ್ಲಾ ಎಲ್ಲಿ? ಸ್ವಾರ್ಥ ಜನ.

ವೆಂಕ: ಏನೋ ಸರಸರ ಅಂತ ಇದೆ. ಹುಲ್ಲಿನ ನಡುವೆ ಏನಿರಬಹುದು?

ಸೀನು: ಬಾರೋ ನೋಡೋಣ. ಅಯ್ಯೋ ಪಾಪ, ಮೊಲದ ಮರಿ ಕಣೋ. ಅದರ ತಾಯಿ ಅದನ್ನ ಒಂಟಿಯಾಗಿ ಬಿಟ್ಟು ಹೋಗಿದೆ. ಇನ್ನು ರಾಕ್ಷಸರು ಕಂಡರೆ ಎತ್ತಿಕೊಂಡು ಹೋಗುತ್ತಾರೆ. ಬಾ ನಾವೇ ತಗೊಂಡು ಹೋಗೋಣ, ಜೀವ ಉಳಿಸೋಣ.

ನಾಣಿ: ನಿನಗ್ಯಾವಾಗ ಇಷ್ಟು ಒಳ್ಳೆ ಬುದ್ಧಿ ಬಂತೋ ಸೀನು? ಅದನ್ನ ಜೋಪಾನವಾಗಿ ಇಟ್ಕೋ, ಅಷ್ಟಾದರೂ ಮಾಡು.

ವೆಂಕ: ನಾವೇನೋ ಅಂದುಕೊಂಡೆವು ಯಾಕೋ ಯಾವುದು ಸರಿ ಜಾಗ ಸಿಕ್ತಾ ಇಲ್ಲ. ವಿಶ್ರಾಮವೂ ಇಲ್ಲ, ವಿರಾಮವೂ ಇಲ್ಲ.

ನಾಣಿ: ಇನ್ನೇನು ಆಗಬೇಕಿತ್ತೋ ?

ವೆಂಕ: ಅದೇ ಒಂದಿಷ್ಟು ಹೊಳೆಯಲ್ಲಿ ಈಜಾಡಿ, ಮರಗಳನ್ನು ಹತ್ತಿ, ಹಣ್ಣು ಹಂಪಲು ತಿಂದು, ವನ್ಯ ಪ್ರಾಣಿ ಪಕ್ಷಿ ನೋಡಿ ಸಂತೋಷ ಪಡಬೇಕು ಅಂತ ಅಂದುಕೊಂಡಿದ್ದೆ. ಎಲ್ಲಿ ? ಏನಾಯ್ತು ?

ಸೀನು: ಆಹಾ ! ಇಲ್ನೋ ಒಂದು ಸುಂದರ ದೃಶ್ಯ. ನವಿಲು ಕಣೋ, ಎಷ್ಟು ಚೆನ್ನಾಗಿದೆ. ಪಾಪ ಅದರ ಸಂಗಾತಿ ಎಲ್ಲಿ ಹೋಯ್ತೋ ? ಹಿಂದೆ ತರಹ ತರಹ ಬಣ್ಣದ ಹಕ್ಕಿಗಳು ಇರುತ್ತಿದ್ದವಂತೆ ಈಗಂತೂ ಏನೂ ಇಲ್ಲ. ಈಗ ಗುಬ್ಬಚ್ಚಿ ಗರುಡ ಯಾವುದೂ ಇಲ್ಲವಂತೆ ಗೊತ್ತಾ ನಿಂಗೆ?

(ಅಷ್ಟರಲ್ಲಿ ಊಂ... ಊಂ... ಅಂತಾ ನರಳುವ ಸದ್ದು- ಯಾರಿರ ಬಹುದು?)

ವೆಂಕ: ಬಾರೋ ನೋಡೋಣ ಯಾರೋ ಅಳ್ತಾ ಇದ್ದಾರೆ.

ನಾಣಿ: ಇಲ್ಲಿ ಯಾರಿದ್ದಾರೋ? ಬರಿ ಕಡಿದಿರುವ ಮರಗಳು, ಕೊರಡುಗಳು, ಬಹುಶಃ ವನರಾಣಿ ಅಳ್ತಾ ಇರಬಹುದು.

ವೆಂಕ: ಹಾಗಂದರೆ ಏನೋ ನೋಡು ಆ ಮರದ ಕಾಂಡ ಹೇಗಿದೆ ?

ಅಲ್ಲಿಂದ ಸದ್ದು ಬರ್ತಾ ಇದೆ.

ಸೀನು: ಬಗ್ಗಿ ಬಗ್ಗಿ ನೋಡಿ, ಅದೇ ತರಹ ವಿಕಾರವಾದ ಇನ್ನೊಂದು ಪ್ರಾಣಿ, ಮರ ತಬ್ಬಿ ನಿಂತಿದೆ ಕಣ್ರೋ ಬನ್ರೋ !!

ನಾಣಿ: ಮನುಷ್ಯನ ತರಹ ಇದೆ. ಕಾಡು ಮನುಷ್ಯ ಇರಬೇಕು ಮಾತಾಡಿಸೋಣ.

ವೆಂಕ: ಏಕ್ ಮರಿ, ಅಳ್ತಾ ಇದ್ದೀಯಾ ? ನೀನು ಒಬ್ಬನೇ ಇದ್ದೀಯಾ ? ಪಾಪ ಕಣ್ತುಂಬ ನೀರು ಏನಾಯ್ತು? ಬೂ ಬೂ ಅಂತಾ ಇದೆ. ಏನೂ ಅರ್ಥವಾಗೋಲ್ಲ. ಇದೊಂದು ವಿಚಿತ್ರಪ್ರಾಣಿ. ಅಷ್ಟರಲ್ಲಿ ಮೊದಲು ಸಿಕ್ಕಿದ "ಅಷ್ಟಾವಕ್ರ" ಜಂಪ್ ಮಾಡುತ್ತಾ ಕೆಳಗೆ ಇಳಿಯಿತು.

ಇವಳೇ ಈ ಕೊರಡೇ ನನ್ನಮ್ಮ, ನನ್ನಜ್ಜಿ, ನನ್ನ ಪ್ರಾಣ.

ವೆಂಕ: ಇರಬಹುದು ಹೇಳು, ಏನು ವಿಚಾರ. ಹಿಂದೆ ಈ ಮರ ಹಸಿರಾಗಿ ದೊಡ್ಡ ರಂಬೆಗಳು ತೂಗಾಡುತ್ತಾ ಇತ್ತು. ನನ್ನ ಬಂಧು ಬಳಗ ಬಣ್ಣ ಬಣ್ಣ ಹಕ್ಕಿ ಪಕ್ಷಿ ಎಲ್ಲಾ ಹಾರಾಡುತ್ತಾ ಹಾಡುತ್ತಾ ಇರುತ್ತಿದ್ದೆವು.

ನಾಣಿ: ಹೌದು ಕಣೋ ನಿಜಾಂತ ಕಾಣುತ್ತೆ.

ಪ್ರಾಣಿ: ನಿಜಾಂತ ಕಾಣುತ್ತೆ ಅಲ್ಲ, ನಿಜ. ನಾನು ಆ ನವಿಲಿನಂತೆ ಸುಂದರವಾಗಿದ್ದೆ. ಈಗ ನನ್ನ ನೋಡು ? ಎಷ್ಟು ವಿಕಾರವಾಗಿದ್ದೀನಿ.

ವೆಂಕ: ಹೌದು, ನೀನೇಕೆ ಹೀಗಾದೆ ? ಎಲ್ಲಿಂದ ಬಂದೆ ?

ಪ್ರಾಣಿ: ಏನ್ ಹೇಳಲಿ ನನ್ನ ಗೋಳು. ಒಂದು ದಿನ ದೊಡ್ಡದೊಂದು ಬೆಳಕು ಭೂಮಿಗೆ ಬಿದ್ದು ಎಲ್ಲಾ ಸುಟ್ಟು ಅರ್ಧಬಂರ್ಧ ಕೂಳೆ ಇದ್ದಿತು. ಇಲ್ಲಿ ವರ್ಷ ವರ್ಷ ಬಿದ್ದಿದೆ. ಉಸಿರು ಇರಲಿಲ್ಲ. ಆಗ ಈ ಮರ ತನ್ನ ನೆರಳು, ತನ್ನ ಎಲೆಯಿಂದ ನೀರು ಸಿಹಿ ಹಣ್ಣು ಉದುರಿಸಿತು. ಹೀಗೆ ಉಸಿರಾಟ ಶುರುವಾಯಿತು. ಈ ಮರ ಕಾಪಾಡಿತು.

ನಾಣಿ: ಆಹಾ ! ಎಂತಹ ಆಶ್ಚರ್ಯ ? ಆಮೇಲೆ ಏನಾಯಿತು ?

ಪ್ರಾಣಿ: ಕೆಲವೇ ದಿನಗಳಲ್ಲಿ ಭಯಂಕರ ಭೂಕಂಪ ಬಂತು. ಭೂಮಿಯಿಂದ ಬಂದ ಲಾವಾರಸ ನನ್ನ ಮೈಗೆ ಬಿದ್ದು ಹೀಗಾದೆ.

ವೆಂಕ: ಆದರೂ ನೀನೇಕೆ ಸಾಯಲಿಲ್ಲ ? ಒಳ್ಳೆಯದಾಯಿತು ಏಕೆ ಸಾಯ ಬೇಕು? ನಿನ್ನ ವಂಶ ಮುಂದುವರಿದರೆ ಹೇಗೆ ? ನಂಗೂ ಅಧಿಕಾರ ಇದೆ.

ನಾಣಿ: ಏನೋ ಹೀಗೆ ಕಣ್ಣೀರು ಹಾಕುತ್ತಾ ಏನೇನೋ ಬಡಬಡಸ್ತಾ ಇದ್ದೀಯ, ಹುಚ್ಚ, ಹುಚ್ಚ.

ವೆಂಕ: ಏನು ಮಾಡಲಿ ಇದರ ಸ್ಥಿತಿ ನೋಡು ಪಾಪ. ಅಯ್ಯೋ ಅನಿಸುತ್ತೆ.

ಸೀನು: ಈ ಮರ ನೋಡು ಹೇಗಾಗಿದೆ, ಹೇಗೆ ಅಳುತ್ತಾ ಇದೆ. ನೋಡು ನಂಗೂ ಕೈ ಕಾಲಿನಂತೆ ದೊಡ್ಡ ಕೊಂಬೆ ಇತ್ತು. ಬಣ್ಣ ಬಣ್ಣ ಹಕ್ಕಿ ಹಾರಾಡುತ್ತಾ ಹಾಡು ಹೇಳುತ್ತಾ, ಕೂಗುತ್ತಾ, ನಾಚುತ್ತಾ, ಒಂದನ್ನೊಂದು ಕೂಡಿ ನಲಿದಾಡಿ ನರ್ತನ ಮಾಡಿ ಸಂಭ್ರಮ ಪಡುತ್ತಾ ಇದ್ದವು.

ನಾಣಿ: ಅಲ್ಲೇ ಬೇರೆ ಬೇರೆ ತರಹ ಗೂಡು ಕಟ್ಟಿ ಅಲ್ಲಿ ಮರಿ ಮೊಟ್ಟೆಗಳು ಪುಟ್ಟ ಬಣ್ಣದ ನೂರಾರು ಹಕ್ಕಿಗಳು. ಈಗ ಆಶ್ರಯದ ಮರ ಅಳದೆ ಏನು ಮಾಡುತ್ತೆ ? ಏನ್ತಾನೆ ಮಾಡುತ್ತೆ ಹೇಳು ?
ಎಂಕಾ.... ಎಂಕಾ.... ಓ ಎಲ್ಲಿಂದಾ ಈ ಕೂಗು
ಓ ವೆಂಕಾ ಅಂತಾ ನನ್ನನ್ನೇ ಕೂಗ್ತಾ ಇದೆ. ತಿರುಗಿ ನೋಡಿದಾ.... ಒಂದು ಪಂಜರ. ಅದರಲ್ಲಿ ಗಿಣಿ ರಾಮ ಹಕ್ಕಿ ಕೂಗ್ತಾ ಕೂಗ್ತಾ ಪಟ ಪಟ ರೆಕ್ಕೆ ಬಡೀತಾ ಇದೆ.

ಸೀನು: ಓಡುತ್ತಾ ಆ ಪಾಳು ಮಂಟಪಕ್ಕೆ ಹೋಗಿ ಆ ಪಂಜರದ ಗಿಣಿ ತಂದ. ವೆಂಕ ತಗೋ ಇದು ನನಗೆ.

ವೆಂಕ: ಮೊದಲು ಆ ಗಿಣಿಯನ್ನು ಪಂಜರದಿಂದ ಬಿಡಿಸು. ಸ್ವಲ್ಪ ನೀರು ಕುಡಿಸು.

ಗಿಣಿ: ಎಂಕಾ ನನ್ನ ನಿನ್ನ ಜೊತೆ ಕರೆದುಕೊಂಡು ಹೋಗು. ಈ ಬರಡು ಜೀವನ ಬೇಜಾರಾಗಿದೆ. ನನಗೆ ಜೊತೆ ಇಲ್ಲ. ಅಂತ ಹೇಳಿದ ಹಾಗಾಯ್ತು.

ಸ್ವಗತ: (ಗೆಳೆಯರು ಎಲ್ಲಾ ಕೂಡಿ ಕುಳಿತರು. ಅದರ ಜೊತೆ ಆ ಪ್ರಾಣಿಗಳು. ಸೂರ್ಯ ಮುಳುಗುತ್ತಾ ಇದ್ದಾನೆ. ಹೊತ್ತು ಹೋಗಿದ್ದೆ ಗೊತ್ತಾಗಿಲ್ಲ. ಹೊಟ್ಟೆ ತಾಳ ಹಾಕ್ತಾ ಇದೆ. ನೀರಿಲ್ಲ, ನೆರಳಿಲ್ಲ, ಬರಡು ಭೂಮಿ ಬಣಕಲ ಮರ ಕರಾಳ ರಾತ್ರಿ ಇದಕ್ಕೆ ಉಪಾಯ ಏನು ? ಹೇಗೆ ನಿವಾರಣೆ? ಅಷ್ಟರಲ್ಲಿ ಆಕಾಶವಾಣಿಯಂತೆ ಆ ಕೊರಡು ಮರದಿಂದ ಮಾತು ಹೊರಡಿತು. ನಿದ್ದೆ ಬಿಟ್ಟು ಎದ್ದೇಳಿಮತ್ತೆ ವನವನ್ನು ನಿರ್ಮಿಸಿ ಈ ಪ್ರಾಣಿಗಳನ್ನು ಪ್ರೀತಿಯಿಂದ ಸಾಕಿ, ಆ ಅಷ್ಟಾವಕ್ರ ನಿಮಗೆ ಸಹಾಯ ಮಾಡುತ್ತೆ.)

ವೆಂಕ: ನನಗೆ ಒಂದು ಉಪಾಯ ಹೊಳೆಯಿತು. ಬನ್ನಿರೋ ಎಲ್ಲಾ ಸೇರಿ ಈ ಬರಡು ಮರಕ್ಕೆ ಸ್ವಲ್ಪ ನೀರು ಹಾಕೋಣ. ಏನಾದರು ಚಿಗುರಿ ವನರಾಣಿ ಮತ್ತೆ ಬರಬಹುದು. ಈ ಜಾಗದಲ್ಲಿ ಶ್ರಮಪಟ್ಟು ಗಿಡ ಹಾಕಿ ಬೀಜ ಬಿತ್ತೋಣ. ಬೆಳಗಾದ ತಕ್ಷಣ ಊರಿಗೆ ವಾಪಸ್ ಹೋಗೋಣ.

ಸೀನು: ಓಡೋಡಿ ಊರಿಗೆ ಹೋಗೋಣ ಇನ್ನೂ ಯುವಕರನ್ನು ಕರೆದು ತಂದು ಸೇರಿಸೋಣ.

ನಾಣಿ: ನೀನು ಹೇಳೋದು ಸರಿ. ಸಸಿ, ಗಿಡ, ಬೀಜ ಎಲ್ಲಾ ತರೋಣ. ಮೊದಲು ಭೂಮಿ ಅಗೆಯೋಕೆ ಗುದ್ದಲಿ, ಪಿಕಾಸಿ, ತರೋಣ. ಎಲ್ಲಾ ಶ್ರಮಿಸೋಣ.

ವೆಂಕ: ಹೌದು ಹಾಗೇ ಮಾಡೋಣ. ಏ.... ನೋಡ್ರೋ ಈ ಬರಡು ಮರ ಚಿಗುರಿದೆ, ಕಾಣ್ತಾ ಇದೆ, ಹಸಿರು ಎಲೆ, ಶುಭ ಸೂಚನೆ, ನಿತ್ಯದ ಕೆಲಸಕ್ಕೆ ಫಲ.

ಸೀನು: ಏನೋ ನಾವು ಊರು ಬಿಟ್ಟು ಬಂದು ಎಷ್ಟೋ ದಿನ ಆಗ್ತಿದೆ. ಅವರೆಲ್ಲಾ ನಾವು ಕಳೆದು ಹೋದೆವು ಅಂತಾ ಅಂದುಕೊಂಡಿರ್ತಾರೆ.

ನಾಣಿ: ಹೌದು, ನನಗೂ ಅಪ್ಪ ಅಮ್ಮ ಎಲ್ಲಾ ಜ್ಞಾಪಕ ಬರ್ತಾರೆ, ಮತ್ತೆ ವಾಪಸ್ಸು ಹೋಗೋಣ. ಅವರುಗಳನ್ನು ಈ ಕೆಲಸಕ್ಕೆ ಸೇರಿಸಿ ಕೊಂಡು ಆರ್ಶೀವಾದ ತೆಗೆದುಕೊಳ್ಳೋಣ. ಇಲ್ಲಿ ನಮ್ಮ ಹೊಟ್ಟೆ ಪಾಡೇನು?

(ಗೆಳೆಯರು ಮನೆಗೆ ಹಿಂದಿರುಗಿದರು. ದಿನನಿತ್ಯ ಒಬ್ಬರಲ್ಲ ಒಬ್ಬ ಆ ಬರಡು ಪ್ರದೇಶಕ್ಕೆ ಹೋಗುತ್ತಾ ಇದ್ದರು. ಶ್ರಮವಹಿಸಿ ಉತ್ಸಾಹವಾಗಿ ಕೆಲಸ ಮಾಡುತ್ತಾ ಗಿಡ ಮರ ಬೆಳೆಸಿ ತಪೋವನ ಮಾಡಿದರು. ಮಳೆ ಬೆಳೆ ಬಂದು ಮತ್ತೆ ಹೊಳೆ ಹರಿಯಿತು. ದೂರ ದೂರದಿಂದ ಒಂಟಿ ಪಕ್ಷಿ ಪ್ರಾಣಿಗಳನ್ನೆಲ್ಲಾ ಅಲ್ಲಿ ಒಂದುಗೂಡಿಸಿದರು.)

ಮತ್ತೊಮ್ಮೆ ಕಾಡನ್ನು ನಿರ್ಮಿಸಿ ಆನಂದಿಸಿದರು ಬರಡು ಮರ ಮತ್ತೆ ಎತ್ತರವಾಗಿ, ಹಸಿರಾಗಿ ನಿಂತಿತು. ಪ್ರಾಣಿ ಪಕ್ಷಿಗಳ ಆಶ್ರಯ ಜನರಿಗೆ ನೋಟಕ್ಕೆ ಒಂದು ತಾಣವಾಯಿತು.

ವೆಂಕ: ನೋಡೋ ಸೀನು ಅಷ್ಟಾವಕ್ರದಂತೆ ಇನ್ನೂ ಬೇರೆ ಬೇರೆ ಜಾತಿ ವಿಜಾತಿ ಮೃಗಗಳು ಹೇಗೆ ಸೇರಿಕೊಂಡಿವೆ.

ಸೀನು: ಹೌದು ನಾವು ತಂದು ಸೇರಿಸಿದ ನವಿಲು, ಗಿಳಿ, ವಿಜಾತಿ ಪ್ರಾಣಿ ಎಲ್ಲಾ ಖುಷಿ, ಖುಷಿಯಾಗಿವೆ. ಎಲ್ಲಾ ನಾವು ಬಂದರೆ ಸಾಕು ನಮ್ಮ ಹತ್ತಿರ ಬಂದು ಸರಿದಾಡುತ್ತವೆ.

ನಾಣಿ: ಇದೆಲ್ಲಾ ನನ್ನಿಂದಲೇ ಆ ಅಷ್ಟಾವಕ್ರ ನನ್ನ ಕೂಗ್ದೆ ಹೋಗಿದಿದ್ದರೆ ನಾವು ಈ ಕೆಲಸ ಮಾಡ್ತಾ ಇರಲಿಲ್ಲ.

ವೆಂಕ: ಅಂತೂ ನಾವು ಮನುಷ್ಯರು, ರಾಕ್ಷಸರಾಗಿ, ನಾಶ ಮಾಡಬಹುದು. ಹಾಗೇ ದಯೆ ತೋರುವಂತಹ ನಾವುಗಳು ಮನುಷ್ಯರಾಗಲೂ ಬಹುದು.

ಸೀನು: ದುಷ್ಟರಾಗದೆ ಎಲ್ಲಾ ಜೀವರಾಶಿಗಳಿಗೂ ಜೀವಿಸಲು ಅವಕಾಶ ಕೊಟ್ಟು ಆ ಸೃಷ್ಟಿಕರ್ತನ ಸೃಷ್ಟಿಗೆ ಆಧರಿಸಿ ಪೋಷಣೆ ಮಾಡಬೇಕು. ನಾನು ಎಂಬ ಸ್ವಾರ್ಥತನ ಬಿಟ್ಟು ಎಲ್ಲರೂ ಒಂದೇ ಎಂದು ಜೀವಿಸಲು ಅವಕಾಶ ಕೊಡಬೇಕು.

ವೆಂಕ: ಓಹೋ ! ಏನು ಬಹಳ ವೇದಾಂತ ಹೇಳ್ತಾ ಇದ್ದೀಯಾ ?

ನಾಣಿ: ಸಾಕು ಸುಮ್ಮನಿರು. ಈಗ ಕೇಳೋ, ಈ ಜಾಗಕ್ಕೆ ಅಷ್ಟಾವಕ್ರವನ ಅಂತ ಹೆಸರಿಡೋಣ. ಇನ್ನು ಮುಂದೆ ಇಲ್ಲಿ ಗಂಧ, ತೇಗ, ಮಾವು, ಬೇವು ಎಲ್ಲಾ ಬೆಳೆಸೋಣ. ನಮ್ಮ ನಿಧಿಯನ್ನು ಮತ್ತೆ ಕಾಪಾಡಿ, ಉಳಿಸಿ, ಆನಂದಿಸೋಣ. ಈಗ ಬನ್ನಿ ಮತ್ತೆ ಮನೆಗೆ ಹೋಗೋಣ.

* * *

ಯೋಗಾ – ಭೋಗ

ಸೀತಾರಾಮಚಂದ್ರ

ಉಮಾ: ಓ ಪದ್ಮಾ . . ಎಷ್ಟು ದಿನದಿಂದ ನಿನ್ನ ನೋಡಬೇಕು ಅಂತಾ ಇದ್ದೆ. ಸದ್ಯ ಇವತ್ತಾದರೂ ಸಿಕ್ಕಿದೆಯಲ್ಲ.

ಪದ್ಮಾ: ನಾನೂ ಹಾಗೆ ಅಂದಕೊಂಡಿದ್ದೆ, ಇವತ್ತಾದರೂ ಯೋಗ ಬಂತಲ್ಲ ಸದ್ಯ.

ಉಮಾ:ಏನ್ ಸಮಾಚಾರ ? ಚೆನ್ನಾಗಿದ್ದೀಯಾ ? ಏನ್ ಇಲ್ಲಿ ?

ಪದ್ಮಾ: ಏನ್ ಇಲ್ಲ. ಅದೇ ಇದು ಯೋಗ ತರಗತಿ ಇಂದು ನಾವಿಬ್ಬರೂ ಸೇರಿದ್ದೇವೆ. ಅದು ಯೋಗ ಕ್ಲಾಸ್, ಇದೂ ಒಂದು ಯೋಗ.

ಉಮಾ:ಹೌದು ಕಣೇ ಮದುವೆ ಆಗ್ ಬೇಕಾದ್ರೆ, ಮಕ್ಕಳಾಬೇಕಾದ್ರೆ, ಮನೆ ಕಟ್ಟಬೇಕಾದ್ರೆ, ಒಳ್ಳೆ ಕೆಲಸ ಸಿಕ್ಕಬೇಕಾದ್ರೆ, ಅಷ್ಟೇಕೆ ನಿನ್ನಂತಹ ಒಳ್ಳೆ ಸ್ನೇಹಿತೆ ಸಿಕ್ಕ ಬೇಕಾದ್ರೆ ಎಲ್ಲಾದಕ್ಕೂ ಯೋಗ ಇರಬೇಕು.

ಪದ್ಮಾ: ಓಹೋ . . ಸಾಕು ಸಾಕು ಏನು ಯೋಗಾಯೋಗ ಅಂತ ರೈಲು ಬಿಡ್ತಾ ಇದ್ದೀಯಾ . . ಅಂದ ಹಾಗೆ ನಮ್ಮ ಯೋಗಾ ಮೇಷ್ಟ್ರ ನಮಗೆ ಯೋಗ ನಿದ್ರೆ ಅಂತ ಮಾಡಿಸಿದ್ರು. ಎಷ್ಟು ಚೆನ್ನಾಗಿತ್ತು ಗೊತ್ತಾ. ಆ ನಿದ್ರೆಯಿಂದ ಏಳೋದೆ ಬೇಡ, ಕಣ್ಣು ಬಿಡೋದೆ ಬೇಡ ಅಂತ ಅನಿಸಿತ್ತು.

ಉಮಾ:ಹೌದೇನೇ, ನೀನು ಯಾವಾಗನಿಂದ ಯೋಗಾಕ್ಕೆ ಬರ್ತಾ ಇದ್ದೀಯಾ? ಏನು ನೀನು ಹೇಳೋದು, ನಿನಗೆ ಅಷ್ಟು ಇಷ್ಟಾನ. ಎಷ್ಟು ದಿನವಾಯ್ತೆ?

ಪದ್ಮ: ನಾನು ತುಂಬಾ ವರ್ಷದಿಂದ ಬರ್ತಾ ಇದ್ದೀನ. ಅದರಿಂದ ಆರೋಗ್ಯ, ಮನಸ್ಸು ಚೆನ್ನಾಗಿರುತ್ತೆ. ನೆಮ್ಮದಿ ಶಾಂತಿ ಸಿಗುತ್ತೆ. ಮನೆಯಿಂದ ಹೊರಗೆ ಬಂದ ಹಾಗೆ ಆಗುತ್ತೆ. ನಾಲ್ಕು ಜನರ

ಸಹವಾಸ, ಮಾತು, ನಗು, ನಲಿವು ಎಲ್ಲಾ ತುಂಬಾ ಚೆನ್ನಾಗಿರುತ್ತೆ. ನೀನು ಕ್ಲಾಸ್‌ಗೆ ಸೇರಿಕೋ, ನಿನಗೂ ಅಂತಹ ಅನುಭವ ಆಗಲಿ.

ಉಮಾ: ಅಯ್ಯೋ ಏನು ಯೋಗವೋ, ದುಡ್ಡು ಕೊಟ್ಟು ಹುಚ್ಚು ಹಿಡಿಸಿ ಕೊಂಡಹಾಗೆ. ಮನೆ ಕೆಲಸ ಅದೂ ಇದು ಇಲ್ಲಿ ಯಾರಿಗೆ ಟೈಮ್ ಇದೆ ಹೇಳು ? ಇಲ್ಲಿ ಬಂದು ದುಡ್ಡು ಹಾಳು ಮಾಡಿಕೊಂಡು, ಮೈಕೈ ನೋಯಿಸಿಕೊಂಡು ವ್ಯಾಯಾಮ ಏಕೆ ಬೇಕು? ಮನೆ ಕೆಲಸ ಓಡಾಟ ಅಷ್ಟೇ ಸಾಲದೆ? ನಾನು ಈಗ ಏನಾಗಿದ್ದೀನಿ ಹೇಳು?

ಪದ್ಮ: ಇಲ್ಲ ನೀನು ತಪ್ಪು ತಿಳಿದುಕೊಂಡಿದ್ದೀಯಾ ? ಈಗಿನ ಕಾಲದಲ್ಲಿ ಹೆಂಗಸರಿಗೆ ಸಾಕಾಗುವಷ್ಟು ವ್ಯಾಯಾಮ ಸಿಕ್ಕಲ್ಲ. ಹಿಂದಿನ ಕಾಲದ ಹಾಗೆ ಕುಟ್ಟಲ್ಲ, ಬೀಸಲ್ಲ, ನೀರು ಹೊತ್ತು ತರಲ್ಲ, ಎದ್ದು, ಬಗ್ಗಿ ಒಲೆ ಊದಿ ಅಡಿಗೆ ಮಾಡಬೇಕಾಗಿಲ್ಲ. ಕೆಳಗೆ ಕೂರುವುದಂತೂ ಇಲ್ಲವೇ ಇಲ್ಲ. ಅದೇ ನೋಡು ಇಲ್ಲಿ ಬಂದರೆ ಬೇರೆ ಬೇರೆ ಆಸನಗಳು, ಎಲ್ಲಾ ಅಂಗಗಳಿಗೂ ವ್ಯಾಯಾಮವಾಗುತ್ತೆ.

ಉಮಾ: ಏನೋಮ್ಮ ನನಗೆ ಅದೆಲ್ಲಾ ಆಗೋಲ್ಲ. ಅದು ನಿನಗೇ ಸರಿ, ಜೀವನ ಇರೋದೆ ಮಜಾ ಮಾಡೋಕೆ, ಚೆನ್ನಾಗಿ ತಿಂದು, ಪಾರ್ಟಿ ಗೀರ್ಟಿ ಅಂತ ಅಲೆದಾಡಿಕೊಂಡು ಚೆನ್ನಾಗಿ ಡ್ರೆಸ್ ಮಾಡಿಕೊಂಡು ಒಳ್ಳೆ ಎತ್ತರದ ಉತ್ತಮ ಜೀವನ ಮಾಡೋದು ಬಿಟ್ಟು ಈ ಕಷ್ಟ ಯಾರಿಗೆ ಬೇಕು ?

ಪದ್ಮ: ಇಲ್ಲಾ ಈಗ ನಿನಗೆ ಗೊತ್ತಾಗೋಲ್ಲ. ಒಂದು ವಯಸ್ಸಾದ ಮೇಲೆ ಮಂಡಿ ನೋವು, ಕೈಕಾಲು ನೋವು, ಬಿಪಿ, ಶುಗರ್, ಅಂತಾ ಎಲ್ಲಾ ಬರುತ್ತಲ್ಲಾ ಆವಾಗ ಗೊತ್ತಾಗುತ್ತೆ.

ಉಮಾ: ಬಂದಾಗ ನೋಡಿಕೊಳ್ಳೋಣ ಈಗಲಿಂದ ಏಕೆ ಶಿಕ್ಷೆ ಅನುಭವಿಸ ಬೇಕು?

ಪದ್ಮ: ಅದನ್ನ ನೀನು ಶಿಕ್ಷೆ ಅಂತಾ ಅಂದುಕೊಳ್ತೀಯಾ ? ಹೋಗಲಿ ಬಿಡು ನಿನಗೆ ನಿನಗೆ ನಾನು ಹೇಳೋಕೆ ಆಗೋಲ್ಲ. ನನಗಂತೂ ತುಂಬಾ ಚೆನ್ನಾಗಿ ಅಭ್ಯಾಸವಾಗಿದೆ. ಒಂದು ದಿನ ಕ್ಲಾಸ್‌ಗೆ ಹೋಗದೇ ಹೋದರೆ ಹೇಗೇಗೋ ಆಗುತ್ತೆ.

ಉಮಾ: ಹೋಗಲೀ ನೀನು ಏನೇನು ಆಸನ ಮಾಡ್ತೀಯಾ ?

ಪದ್ಮ: ತುಂಬಾ ಆಸನಗಳು ಇವೆ, ಒಂದೊಂದೂ ಉಪಯೋಗಕಾರಿ.

ಉಮಾ: ಹೆಚ್ಚಾಗಿ ಪ್ರಾಣಿಗಳ ಹೆಸರಿನ ಆಸನಗಳು ಇವೆ ಅಂತಾರೆ ಹೌದೇನೆ?

ಪದ್ಮ: ಹೌದು . . . ಪ್ರಾಣಿ, ಪಕ್ಷಿ, ಗಿಡ ಮರ ಎಲ್ಲಾ ಹೆಸರುಗಳು ಇವೆ. ನಮ್ಮ ಜೀವನದಲ್ಲಿ ಪ್ರಕೃತಿಯ ವಿಶೇಷತೆ ಹಾಸುಹೊಕ್ಕಾಗಿ ಬಂದು ಬಿಟ್ಟಿವೆ. ನಮ್ಮಲ್ಲಿ ಹೆಚ್ಚಾಗಿ ಆದರಿಸುವ, ಪೂಜಿಸುವ, ವಾಡಿಕೆಯಿದೆ. ಉದಾ: ತುಳಸಿ ಗಿಡ, ಅರಳಿ ಮರ, ಎಕ್ಕದ ಗಿಡ, ನಾಗರ ಹಾವು, ಗರುಡ ಪಕ್ಷಿ, ಹಸು, ಬಸವ ಹೀಗೆ ಹೇಳ್ತಾ ಹೋದರೆ ಬೇಕಾದಷ್ಟು ಇದೆ.

ಉಮಾ:ಅದೇ ತರಹ ಯೋಗ ಆಸನಗಳಲ್ಲಿ ಪ್ರಾಣಿಗಳ ಹೆಸರು ತುಂಬಾ ಇದೆ ಅಂತೆ ಹೌದಾ ?

ಪದ್ಮ: ಹೂಂ, ಮಂಡೂಕಾಸನ, ಮಯೂರಾಸನ, ಮಕರಾಸನ, ಶ್ವಾನಾಸನ, ಸಿಂಹಾಸನ, ಉಷ್ಟ್ರಾಸನ, ವೃಕ್ಷಾಸನ, ಪದ್ಮಾಸನ ಹೀಗೆ ಬೇಕಾದಷ್ಟು.

ಉಮಾ:ಶಿರಸಾಸನ ಅಂತ ಇದೆಯಂತೆ ? ತಲೆ ಕೆಳಗೆ, ಕಾಲು ಮೇಲೆ, ಅದನ್ನ ನೀನೂ ಮಾಡ್ತೀಯಾ ?

ಪದ್ಮ: ಅದು ಸ್ವಲ್ಪ ಕಷ್ಟ, ಶಿಕ್ಷಕರಿಂದ ಸರಿಯಾಗಿ ಹೇಳಿಸಿಕೊಂಡು ಮಾಡಬೇಕು. ಸೂರ್ಯ ನಮಸ್ಕಾರ ಅಂತ ಅದೊಂದು ವಿಶೇಷ ಹಲವಾರು ಆಸನಗಳ ಮಿಲನ ತುಂಬಾ ಚೆನ್ನಾಗಿರುತ್ತೆ.

ಉಮಾ:ನನಗೂ ನೀ ಹೇಳೋದು ಕೇಳಿದರೆ ಸೇರಿಕೊಳ್ಳೋಣ ಅಂತ ಅನಿಸುತ್ತೆ. ನೋಡೋಣ, ನಾನು ನಿನ್ನ ತರಹ ತೆಳ್ಳಗೆ, ಗಟ್ಟಿಮುಟ್ಟಾದ ಶರೀರ. ರೋಗದಿಂದ ದೂರ, ಇರಬಹುದು, ಆದರೆ ನನಗೇಕೋ ಸುಮ್ಮನೆ ದುಡ್ಡು ದಂಡ ಅಂತ ಅನಿಸುತ್ತೆ. ನೀನು ಹೇಗೂ ಹೇಳಿದೆಯಲ್ಲಾ ನಾನೇ ಏಕೆ ಮಾಡಬಾರದು ?

ಪದ್ಮ: ಏನೇ ನೀನು ಹೇಳೋದು ? ಸದ್ಯ ನೀನು ಮಾಡೋಕೆ ಹೋಗಿ ಕೈಕಾಲು ಮುರಿದು ಮೂಲೆಗೆ ಮುಟ್ಟಾಗಿ ಕೂತ್ಕೋಬೇಡ. ಆಮೇಲೆ ನಾನು ಹೇಳ್ದೆ ಅಂತ ನನ್ನ ಮೇಲೆ ಇಟ್ಟು ಬಿಡಬೇಡ.

ಉಮಾ:ಹೋಗಲಿ ಪ್ರಾಣಿಗಳಂತೆ ಆಸನ ಅಂದೆಯಲ್ಲಾ ಪ್ರಾಣಿಗಳಂತೆ ಕೂಗೋದು, ಉಸಿರಾಡೋದು, ಅದನ್ನ ನೋಡಿ ಮಾಡಬಹು ದಲ್ಲೇ, ನನ್ನ ಮನೆ ಟಾಮಿ ಇದೆಯಲ್ಲೇ ಅದೇ ನನ್ನ ಗುರು. ಅದರಂತೆ ಮೈ ಮುರಿಯುವುದು, ಉಸಿರಾಡೋದು, ಮಲಗೋದು,

ತಿನ್ನೋದು, ಅಳೋದು, ಕೆಮ್ಮುವುದು, ಎಲ್ಲಾ ಮಾಡಿದರೆ ಸಾಕು ಅದಕ್ಕೆ ನಾಯಿ ಆಸನ ಅನ್ನಬಾರದು ಶ್ವಾನಾಸನ ಅಂದರೆ ಸಾಕು.

ಪದ್ಮ: (ಜೋರಾಗಿ ನಕ್ಕು) ಅಯ್ಯೋ ಉಮಾ ನಿನ್ನ ಬುದ್ಧಿಗೆ ಏನ್ ಹೇಳಲೇ?

ಉಮಾ: ಏನಾಯಿತೆ? ನೀನೇ ಹೇಳಿದೆಯಲ್ಲೇ ಯೋಗಾಸನದಲ್ಲಿ ಪ್ರಾಣಿಗಳ ಆಸನ ತುಂಬಾ ಇದೆ ಅಂತ. ಸುಲಭವಾಗಿ ಸಿಗುವುದು ನಾಯಿ, ಅದಕ್ಕೆ ಹೇಳಿದೆ. ಅಂದ ಹಾಗೆ ಕತ್ತೆ ಆಸನ ಅಂತ ಇದೆಯೇನೆ ? ಅದೇ ಗಧಾ ಆಸನ ಅಂತ.

ಪದ್ಮ: ಸಾಕು ಸುಮ್ಮನಿರು, ನನಗೆ ಹಾಸ್ಯ. ನಿನಗೆ ಯೋಗದ ವಿಶೇಷ ಗೊತ್ತಿಲ್ಲ. ಅದಕ್ಕೆ ಹೀಗೆಲ್ಲಾ ಮಾತಾಡ್ತ ಇದ್ದೀಯಾ. ಹೋಗಲಿ ಬಿಡೆ, ದಿನಾ ವಾಕ್ ಮಾಡು, ಸ್ವಲ್ಪ ಮಿತ ಆಹಾರ ಸೇವಿಸು. ಅದರಿಂದ ಒಳ್ಳೇದಾಗುತ್ತೆ.

ಉಮಾ: ಹೂಂ. ಒಂದೊಂದು ದಿನ ಬೆಳಿಗ್ಗೆ ವಾಕ್ ಹೋಗ್ತೀನಿ, ಒಳ್ಳೆ ಸಿಹಿ ನದ್ದೆಯಿಂದ ಏಳೋಕೆ ಬೇಜಾರಾಗುತ್ತೆ. ಡಾಕ್ಟರ್ ಹೇಳಿದ್ದಾರೆ. ಸ್ಥೂಲ ಮೈ ಇರಬಾರದು ರೋಗಗಳು ಬಂದು ಗಂಟು ಹಾಕಿ ಕೊಳ್ಳುತ್ತೆ ಅಂತ.

ಪದ್ಮ: ಇಲ್ಲ ದಿನ ಹೋಗು, ಹಾಗೆ ಅಭ್ಯಾಸ ಆಗುತ್ತೆ. ಅವಾಗ ಒಂದು ದಿನವೂ ಮನೆಯಲ್ಲಿ ಇರೋಕೆ ಆಗೋಲ್ಲ.

ಉಮಾ: ಹಾಗೇ ಮಾಡ್ತೀನಿ ಅಂತ ಹೇಳ್ತಿನ, ಆದರೆ ನನಗೆ ಆಗುತ್ತೋ ಇಲ್ಲವೋ ಗೊತ್ತಿಲ್ಲ. ಒಂದು ತುತ್ತು ಕಡಿಮೆ ತಿನ್ನಬೇಕು ಅಂತಾರೆ, ನಾನು ಕಂಡಿದೆಲ್ಲಾ ತಿಂದು ಹೊಟ್ಟೆ ಭರ್ತಿ ಮಾಡಕೊಂಡು ತೃಪ್ತಳಾಗ್ತೀನಿ. ನನ್ನ ಅಭ್ಯಾಸ, ಇರುವಾಗ ಏಕೆ ತಿನ್ನಬಾರದು, ಬೆಳಿಗ್ಗೆ ವಾಕಿಂಗ್ ಇಂದ ಬಂದ ತಕ್ಷಣ ಮಾವ ದೇವರ ಪೂಜೆ ಮಾಡಿ ಪಂಚಾಮೃತ ಇಟ್ಟಿರುತ್ತಾರೆ ಅದನ್ನ ಒಂದು ಗ್ಲಾಸ್ ಕುಡಿದು ಬಿಡ್ತೀನಿ.

ಪದ್ಮ: ಅದು ಸರಿ ವಾಕ್ ಹೋಗದೇ ಇದ್ದ ದಿನ ಏನು ಮಾಡ್ತೀಯಾ ?

ಉಮಾ: ಹಾಸಿಗೆ ಮೇಲೆ ಮಲಗಿ ಪೂಜೆ ಗಂಟೆ ಸದ್ದು ಕೇಳಿಸಿಕೊಳ್ತಾ ಇರ್ತೀನ. ಮಂಗಳಾರತಿ ಹೊತ್ತಿಗೆ ಎದ್ದು ಮುಖ ತೊಳೆದ ಶಾಸ್ತ್ರ ಮಾಡಿ ಬೇಗ ಬಂದು ಮೊದಲು ಪಂಚಾಮೃತ ಕುಡಿದು ಬಿಡ್ತೀನಿ. ಒಳ್ಳೆ ತಾಡಾಗಿ ಇರುತ್ತೆ. ಹೊಟ್ಟೇ ಹಸಿವೆ ಆಗೋಲ್ಲ.

ಪದ್ಮ: ಅಯ್ಯೋ ಅಯ್ಯೋ ಹಾಲು ಮೊಸರು, ತುಪ್ಪ, ಸಕ್ಕರೆ, ಬಾಳೆಹಣ್ಣು, ಅಬ್ಬಾ ಅದಕ್ಕೆ ನೀನು ಹೀಗೆ ಗುಂಡುಕಲ್ ತರಹ ಇರೋದು.

ಉಮಾ: ಪ್ಲೀಸ್ ಕಣ್ಣು ಹಾಕ್ ಬೇಡವೇ, ಒಳ್ಳೆ ದೊಡ್ಡ ಮನುಷ್ಯರ ಕಳೆ. ಇಟ್ಟರೆ, ತೊಟ್ಟರೆ, ಎಷ್ಟು ಚೆನ್ನಾಗಿರುತ್ತೆ. ಕಾಷ್ಟದಂತೆ ಇದ್ದರೆ ಯಾವ ಡ್ರೆಸ್ ಒಪ್ಪೋಲ್ಲ, ಯಾವ ಒಡವೇನೂ ಚೆನ್ನಾಗಿ ಕಾಣೋಲ್ಲ.

ಪದ್ಮ: ಆಗ ಹೇಳಿದೆ? ನಾನು ತೆಳ್ಳಗೆ ಅಗಬೇಕು, ಯೋಗ ಮಾಡಬೇಕು ಅಂತ?

ಉಮಾ:ಹೌದು ಅಂದೆ, ಆದ್ರೆ ಈಗ ಬೇಡ ಅನ್ಸುತ್ತೆ. ನಾನು ಸ್ವಲ್ಪ ಹಾಗೆ ಚಿತ್ತ ಶುದ್ಧಿ ಇಲ್ಲ. ಗಟ್ಟಿ ಮನಸ್ಸಿಲ್ಲ.

ಪದ್ಮ: ಹಾಗಾದ್ರೆ "ಯೋಗ ನಿದ್ರೆ" ಮಾಡಬೇಕು. ಚಿತ್ತ ಶುದ್ಧಿ ಬರುತ್ತೆ, ಏಕಾಗ್ರತೆ ಬರುತ್ತೆ, ಉಸಿರಾಟ ಮನಸ್ಸು ದೇಹ ಒಂದಾಗುತ್ತೆ.

ಉಮಾ:ಅಷ್ಟು ದಿನದಿಂದ ಯೋಗ ಮಾಡಿದ್ದೀನಿ ಅಂತೀಯಲ್ಲಾ ಈಗ ನೀನು ನನಗೆ ಟೀಚರ್ ಆಗು, ಮೊದಲು "ಯೋಗ ನಿದ್ರೆ" ಹೇಳಿ ಕೊಡು. ನನಗೆ ಮೊದಲೇ ನಿದ್ರೆ ಅಂದ್ರೆ ಇಷ್ಟ. ಯೋಗ ಪ್ಲಸ್ ನಿದ್ರೆ ಎರಡೂ ಆದ ಹಾಗೆ ಆಯಿತು. ಒಳ್ಳೇದೇ ಆಗುತ್ತೆ.

ಪದ್ಮ: ಅಯ್ಯೋ ಪೆದ್ದೆ ಅದು ನಿದ್ರೆ ಅಲ್ಲ. ಅದಕ್ಕೆ ತುಂಬಾ ಸಾಧನೆ ಮಾಡ ಬೇಕು. ನುರಿತ ಶಿಕ್ಷಕರು ಆಗಬೇಕು. ಹಿಂದೆ ಋಷಿ ಮುನಿಗಳು ತಪಸ್ಸು ಮಾಡ್ತಾ ಇದ್ದಾರಲ್ಲ ಆ ತರಹ ಆನಂದ ಸಿಗುತ್ತಂತೆ.

ಉಮಾ:ಏನು ಅಂತೆ ಕಂತೆ ಅಂತ ಹೇಳ್ತಾ ಇದ್ದೀಯಾ? ಹಾಗಾದ್ರೆ ನಿನಗೆ ಏನೂ ಆನಂದ ಸಿಗಲಿಲ್ಲವಾ? ಏನು ಪ್ರಯೋಜನ ?

ಪದ್ಮ: ಹೋಗಲಿ ನಿನಗೇಕೆ ಬೇಜಾರು, ನನಗೆ ಬಂದಷ್ಟು ಹೇಳಿ ಕೊಡ್ತೀನಿ. ನಿನ್ನ ಮೊಂಡುತನ, ಬೇಕಾಬಿಟ್ಟಿ ಮಾತು, ಕೇಳಿ ಕೇಳಿ ಸಾಕಾಯ್ತು. ಅಂತೂ ನೀನು ಆಗನ್ಹಾಗೆ ಇದ್ದೀಯಾ, ಏನೂ ಬದಲಾಯಿಸಿಲ್ಲ.

ಉಮಾ:ಏಕೆ ಬದಲಾಯಿಸಬೇಕು, "ನೋಡಿ ಸ್ವಾಮಿ ನಾವಿರೋದೆ ಹೀಗೆ."

ಪದ್ಮ: ಹೋಗ್ಲಿ ಈಗ ಕಣ್ಣು ಮುಚ್ಚಿ ಕುಳಿತುಕೋ ಹಾಗೇ ದೇವರ ಧ್ಯಾನ ಮಾಡು, ಆಗದೇ ಹೋದರೆ ಓಂಕಾರ ಹೇಳು, ಎಷ್ಟೋ ಶಾಂತಿ ನೆಮ್ಮದಿ ಸಿಗುತ್ತೆ ಅದನ್ನಾದರೂ ಮಾಡಬಹುದಲ್ಲ.

ಉಮಾ:ನಾವು ನಿಂತಿರೋದೆ ಬೀದಿಯಲ್ಲಿ, ಇಲ್ಲೆಲ್ಲಿ ಕೂರುವುದು, ನಿನ್ಗೆ ಅಷ್ಟು ಗೊತ್ತಾಗಲಿಲ್ಲವಾ ?

ಪದ್ಮ: ಹೌದು ಕಣೇ ಮಾತಾಡ್ತಾ ಮಾತಾಡ್ತಾ ಹೊತ್ತು ಹೋಗಿದ್ದೇ ಗೊತ್ತಾಗಲಿಲ್ಲ. ಆಗಲೆ ಕತ್ತಲಾಗುತ್ತಾ ಇದೆ. ಇನ್ನು ಮನೆಗೆ ಹೋಗ ಬೇಕಲ್ಲಾ ?

ಉಮಾ:ನಾಳೆ ಸಿಗೋಣ. ನಾಳೆ ಮಧ್ಯಾಹ್ನ ಷೋ "ಓಂ" ಸಿನೆಮಾ ಜೊತೆ ಯಾಗಿ ನೋಡೋಣ. ನೀನು ಖಂಡಿತಾ ಬಾರೆ, ಹಾಗೆ ಹೊರಗಡೆ ಯಾವುದಾದರೂ ಹೋಟೆಲ್‌ನಲ್ಲಿ ಊಟ ಮಾಡಿ ಹಾಯಾಗಿ ಹರಟೆ ಹೊಡೆದು ಕಾಲಕಳೆಯೋಣ.

ಪದ್ಮ: ಉಮಾ . . . ನನ್ಗೆ ನಿನ್ಗೆ ಸರಿಯಾಗೋಲ್ಲ. ನಿನ್ನ ದಾರಿ ಬೇರೆ ನನ್ನ ದಾರಿ ಬೇರೆ. ನಾನಂತೂ ಬರೋಲ್ಲ. ಯೋಗಾ ಕ್ಲಾಸ್ ತಪ್ಪಿಸೋಕೆ ಆಗೋಲ್ಲ. ನೀನು ಏನು ಬೇಕಾದರೂ ಮಾಡಿಕೋ

ಉಮಾ:ಹಾಗಾದ್ರೆ ಇಷ್ಟೇನಾ ? ನನ್ನ ನಿನ್ನ ಸ್ನೇಹ ಏನಾಯ್ತು ? ನಿನ್ನ ಹಣೇಬರಹ, ಹೋಗು ಸುಖವಾಗಿ ಇರೋದಕ್ಕೂ ಕೇಳಿಕೊಂಡು ಬಂದಿರಬೇಕು. ನಿನಗೆಲ್ಲಿದೆ ಆ ಭಾಗ್ಯ ?

ಪದ್ಮ: ನಿನ್ನ ಭಾಗ್ಯ ನಿನಗೆ, ನನ್ನ ಭಾಗ್ಯ ನನಗೆ, ನನ್ನ ದಾರಿ ನಿನ್ನ ದಾರಿ ಒಂದಾಗೋಲ್ಲ. ಆದರೆ ಮಾತಾಡಿ, ಕ್ಷೇಮ ಸಮಾಚಾರ ಕೇಳುತ್ತಾ ಹಳೇ ಶಾಲೆ ದಿನಗಳನ್ನು ಜ್ಞಾಪಿಸಿಕೊಳ್ಳುವುದಕ್ಕೆ ಸ್ನೇಹ ಖಂಡಿತಾ ಇರಲಿ. ಹೀಗೆ ಆಗ ಈಗ ಸೇರೋಣ, ಈಗ ಮನೆಗೆ ಹೋಗೋಣ.

(ಮಾರನೆಯ ದಿನ ಯಥಾಪ್ರಕಾರ ಪದ್ಮ ಹೊತ್ತಿಗೆ ಸರಿಯಾಗಿ ಯೋಗ ಕ್ಲಾಸಿಗೆ ಬರುತ್ತಾಳೆ, ಏನು ಆಶ್ಚರ್ಯ ಉಮಾ ಅಲ್ಲಿ ನಿಂತಿದ್ದಾಳೆ, ದೂರದಿಂದ ಪದ್ಮಾಳನ್ನು ಕಂಡು ಕೈ ಬೀಸುತ್ತಾಳೆ)

ಪದ್ಮ: ಏನೇ ಉಮಾ, ನನಗಿಂತ ಮುಂಚೆ ಇಲ್ಲಿ ಬಂದಿದ್ದೀಯಾ ?

ಉಮಾ:ನಿನ್ನನ್ನೇ ಕಾಯ್ತಾ ಇದೆ, ಸದ್ಯ ಬಂದ್ಯಲ್ಲಾ ?

ಪದ್ಮ: ಏನು "ಓಂ" ಸಿನಮಾಕ್ಕೆ ಕರ್‍ಕೊಂಡ್ಹೋಗೋಕೆ ಬಂದ್ಯಾ ?

ಉಮಾ:ಇಲ್ಲಾ ಕಣೆ. ನಾನೂ ಯೋಗಾಕ್ಕೆ ಸೇರಿಕೊಳ್ಳೋಣ ಅಂತ.

ಪದ್ಮ: ಓಹೋ .... ಅದೇನೇ ಇಷ್ಟು ಒಳ್ಳೆ ಬುದ್ಧಿ. ನಿನ್ನೆ ಎಲ್ಲಾ ಯೋಗ ವಿರುದ್ಧ ಮಾತಾಡಿದೆ. ಇವತ್ತೇನು ಈ ಮನಸ್ಸು ?

ಉಮಾ:ಏಕೋ ಮಂಡಿ ನೋವು. ಮನಸ್ಸಿಗೆ ಏನೇನೋ ಚಿಂತೆ, ಎಲ್ಲಾ ಹೇಳ್ತಾರಲ್ಲ ಯೋಗದಿಂದ ವಾಸಿ ಆಗುತ್ತೆ ಅಂತ, ಅದಲ್ಲದೆ ಈ ಡಾಕ್ಟರ್ ಹತ್ತಿರ ಅಲೆಯುವುದು ಕಡಿಮೆ ಆದರೆ ಸಾಕು. ಅದು

ಸರಿ ಇವತ್ತು ನೀನೇ ಒಂದಿಷ್ಟು ಹೇಳಿಕೊಡು. ಫೀಸ್ ಕಟ್ಟಿ ಹೋಗ್ತೀನ.

ಪದ್ಮ: ಏಕೆ? ಬಾ ನಾನು ಯೋಗ ಮೇಷ್ಟ್ರ ಬಂದಿದ್ದರೆ ಭೇಟಿ ಮಾಡಿಸ್ತೀನಿ. ಅವರ ಹತ್ತಿರ ಮಾತಾಡು.

ಉಮಾ: ಇಲ್ಲ ಕಣೆ . . . ನನಗೆ ನಿನ್ನೆಯಿಂದ ತುಂಬಾ ಅನಿಸಿದೆ ಅದೇ ಯೋಗ ನಿದ್ರೆ ಬಗ್ಗೆ. ಇವತ್ತು ನೀನು ಮಾಡಿಸಲೇ ಬೇಕು.

ಪದ್ಮ: ಹೇಳಲಿಲ್ಲವಾ ಅದಕ್ಕೆ ತುಂಬಾ ನುರಿತ ಶಿಕ್ಷಕರು ಆಗಬೇಕು ಅಂತ.

ಉಮಾ: ಇಲ್ಲ ನೀನು ಸುಮ್ಮನೆ ನೆಪ ಹಾಕ್ಬೇಡ. ನನಗೆ ನೀನೇ ಸಾಕು, ಹೇಳ್ಕೊಡು.

ಪದ್ಮ: ಸರಿ ಬಾ. ಇಲ್ಲೇ ಈ ರೂಮ್ ಖಾಲಿ ಇದೆ. ಅಲ್ಲಿ ಹೋಗೋಣ ನಿನ್ನ ದೆಸೆಯಿಂದ ಇವತ್ತು ನಾನು ಕ್ಲಾಸಿಗೆ ಚಕ್ಕರ್. ನೀನು ಶುದ್ಧ ಮೊಂಡಿ ಕಣೆ. ನಿನ್ನ ಕಟ್ಕೊಂಡು ಗಂಡ ಮಕ್ಕಳಿಗೆ ಎಷ್ಟು ತೊಂದರೇನೋ ?!

ಉಮಾ: ಏನೂ ಇಲ್ಲ ನನ್ನಿಂದ ಅವರಿಗೇಕೆ ತೊಂದರೆ? ನನಗೆ ಅವರಿಂದ ತೊಂದರೆ, ಇಲ್ ಹೋಗ್ಬೇಡ, ಅಲ್ಲ ಹೋಗ್ಬೇಡ, ಕೂತ್ಕೋ ಬೇಡ, ನಿಂತ್ಕೋ ಬೇಡ, ಅಯ್ಯೋ ಒಂದಲ್ಲ ಎರಡಲ್ಲ.

ಪದ್ಮ: ಸರಿ ಬಾ ಇಲ್ಲಿ ಕೂತ್ಕೋಬೇಕು. ಸುಖಾಸನ ಅಥವಾ ಸ್ವಸ್ತಿಕಾಸನ, ಪದ್ಮಾಸನ

ಉಮಾ: ಹಾಗಂದರೆ ಏನೆ ? ಸದ್ಯ ನನಗೆ ಕೆಳಗೆ ಕೂರುವುದು ಆಗುವುದೇ ಇಲ್ಲ.

ಪದ್ಮ: ಹೋಗಲಿ ಈ ಚೇರ್ ಮೇಲೆ ಕುಳಿತುಕೊಂಡು ಮೃದುವಾಗಿ ಕಣ್ಣು ಮುಚ್ಚು. ಮನಸ್ಸನ್ನು ಶಾಂತಗೊಳಿಸು. ನಿನ್ನ ಉಸಿರಾಟ ಗಮನಿಸು ಬೇರೆ ಚಿಂತೆ ಬೇಡ.

ಉಮಾ: ಅಯ್ಯೋ ಬರುವಾಗ ಗಾದ್ರೇಜ್ ಬೀರೂಗೆ ಬೀಗ ಹಾಕಿದೆನೋ ಇಲ್ಲೋ ಮರೆತು ಹೋಯ್ತು ಕಣೆ.

ಪದ್ಮ: ಅದೆಲ್ಲಾ ಚಿಂತೆ ಬಿಡು ಹೇಗೂ ನಿನ್ನ ಅತ್ತೆ ಮಾವ ಇದ್ದಾರಲ್ಲ, ಈಗ ಕಣ್ಣು ಮುಚ್ಚಿದ್ದೀಯಾ, ನಿನಗೆ ಇಷ್ಟವಾದಂಥ ಒಂದು ಪದಾರ್ಥ ಜ್ಞಾಪಿಸಿಕೊಂಡು ಕಣ್ಣ ಮುಂದೆ ಚಿತ್ರಿಸಿಕೋ ?

ಉಮಾ: ಏನು ? ಪುಟ್ಟಣ್ಣ ಚಿತ್ರಮಂದಿರವನ್ನೇ ಆಗ್ಲೇ ನಾನು ಹೇಳ್ದೆ ಒಳ್ಳೆ ಚಿತ್ರಾ ನಡೀತಾ ಇದೆ ಅಂತ. ಮತ್ತೆ ಅದೆ ಜ್ಞಾಪಕ ಬಂತು.

ಪದ್ಮ: ಓ .... ಅಲ್ಲ ಕಣೇ ಸದಾಶಿವಂಗೆ ಅದೇ ಜ್ಞಾನ ಅಂತ. ಹೋಗಲಿ ನಿನ್ನ ಮನೆಯ ದೇವರನ್ನು ಜ್ಞಾಪಿಸಿಕೋ. ಈಗ ಮೃದುವಾಗಿ ಕಣ್ಣು ಮುಚ್ಚು ಒಳಗಣ್ಣಿನಿಂದ ದೇವರಮೂರ್ತಿ ಚಿತ್ರಿಸಿಕೋ. ಈಗ ದೇವಸ್ಥಾನದ ಹೆಬ್ಬಾಗಿಲು. ಅಲ್ಲಿ ಮುಂದೆ ಹೋಗ್ತಾ ಇದ್ದೀಯಾ?

ಉಮಾ: ನಿಂತುಕೊಂಡು ಬಾಗಿಲಿಗೆ ದೇವರ ದರ್ಶನಕ್ಕೆ ಹೋಗಬೇಕು, ಕುಳಿತು ಕೊಂಡು ಕಣ್ಣು ಕುರುಡರಂತೆ ಹೇಗೆ ಹೋಗೋದು ?

ಪದ್ಮ: ಅದೇ ಕಣೆ "ನಿದ್ರಾಯೋಗ" ನಿಂತಲ್ಲಿಯೇ ಕೂತಲ್ಲಿಯೇ ಮನಸ್ಸನ್ನು ನಿಗ್ರಹಿಸಿ ಅದರ ಫಲ ಶಾಂತಿ ನೆಮ್ಮದಿ ಗಳಿಸಬೇಕು.

ಉಮಾ: ಅಯ್ಯೋ ನೀನು ಹೇಳೋದು ನನಗೆ ಏನೂ ಗೊತ್ತಾಗ್ತಾ ಇಲ್ಲ.

ಪದ್ಮ: ಹೋಗ್ಲಿ ಬೇಜಾರು ಮಾಡ್ಕೋಬೇಡ, ಮತ್ತೆ ಹಾಗೆ ಕುರ್ಚಿ ಮೇಲೆ ಸರಿಯಾಗಿ ಕುಳಿತು, ಕಣ್ಣು ಮುಚ್ಚಿಕೋ.

ಉಮಾ: ಹೋಗೇ ಎಷ್ಟು ಸಲ ಕಣ್ಣು ಮುಚ್ಕೋದು? ನನ್ನ ಕೈಲಿ ಆಗೋಲ್ಲ. ನನಗೆ ಕಣ್ಣು ಮುಚ್ಚಿದರೆ ಭಯವಾಗುತ್ತೆ. ಕಣ್ಣಿದ್ದು ಕುರುಡರಾಗೋದು ಜೀವ ಇದ್ದು ಕಣ್ಣು ಮುಚ್ಚಿ ಸಾಯೋದು ಯಾರಿಗೆ ಬೇಕು ?

ಪದ್ಮ: ನಿನ್ನಂತಹ ಜನರಿಗೆ ಇದೆಲ್ಲಾ ಆಗೋಲ್ಲ. ಬರಿ ಚಂಚಲಬುದ್ಧಿ. ಹೊಗಲಿ ಇವತ್ತಿಗೆ ಸಾಕು, ನೀನು ಮನೆಗೆ ಹೋಗು, ನಿಮ್ಮತ್ತೆ ಅಡುಗೆ ಮಾಡಿಬಿಟ್ಟಿರುತ್ತಾರೆ, ಚೆನ್ನಾಗಿ ಊಟ ಮಾಡಿ ಮಲಗು, ಅದೇ ಯೋಗ

ಉಮಾ: ನಾನು ಮರತೇ ಬಿಟ್ಟಿದ್ದೆ, ಇವತ್ತು ನಮ್ಮತ್ತೆ ಹೀರೇಕಾಯಿ ಹುಳಿ ತೊವ್ವೆ, ಬೂದಕುಂಬಳ ಕಾಯಿ ಮಜ್ಜಿಗೆ ಹುಳಿ ಮಾಡ್ತೀನಿ ಎಂದು ಹೇಳ್ತಾ ಇದ್ರು. ಅದಲ್ಲದೆ ಸಂಡಿಗೆ ಹಪ್ಪಳ ಇದ್ದೇ ಇರುತ್ತೆ. ಬಾಯಯಲ್ಲಿ ನೀರೂರಿದೆ. ಹೊಟ್ಟೆ ಬೇರೆ ಹಸೀತಾ ಇದೆ.

ಪದ್ಮ: ಸರಿ ಕಣಮ್ಮ ಬೇಗ ಹೋಗು. ಜೋಪಾನ. ರಸ್ತೆಯಲ್ಲಿ ತುಂಬಾ ವಾಹನಗಳು, ಜನ ಜಂಗುಳಿ ಸ್ವಲ್ಪ ಸರಿಯಾಗಿ ನೋಡಿಕೊಂಡು ಹೋಗು. ಅಯ್ಯೋ ಮಹರಾಯ್ತಿ ಸಾಕಮ್ಮ ನಿನ್ನ ಸಹವಾಸ.

ಉಮಾ: ಆಯ್ತು ಕಣೇ .... ತುಂಬಾ ಥ್ಯಾಂಕ್ಸ್, ಪಾಪ ನಿನಗೆ ತೊಂದರೆಕೊಟ್ಟೆ. ನೀನು ನಿನ್ನ ಕ್ಲಾಸಿಗೆ ಹೋಗು. ಸ್ವಲ್ಪ ಲೇಟಾಗಿರುತ್ತೆ. ಅಷ್ಟೆ ಶುರುವಾಗಿರುತ್ತೆ ನೀನು ಸೇರಿಕೋ ಆಯ್ತಾ .... ಬಾಯ್.

ಪದ್ಮ: ಸದ್ಯ ಹೋದ್ಯಪ್ಪಾ ನಾನು ಬೇಗ ಕ್ಲಾಸಿಗೆ ಹೋಗ್ತೀನಿ.

* * *

ಪುಣ್ಯಕೋಟಿ

– ಬಿ.ಎಸ್. ಶಿಲ್ಪಾ

ಪಾತ್ರಗಳು: *ಒಬ್ಬ ವ್ಯಕ್ತಿ, ದೋಣಿ ನಡೆಸುವವನು, ಒಂದು ಹುಲಿ, ಒಂದು ಹಸು, ಹೊರೆ ಹುಲ್ಲು*

ಸ್ಥಳ ನದೀ ತೀರ,

ಆ ವ್ಯಕ್ತಿಯು ದೋಣಿ ನಡೆಸುವವನೊಂದಿಗೆ ಒಂದೆರಡು ಚರ್ಚೆ ನಡಸುತ್ತಿದ್ದಾನೆ.

ಒಡೆಯಾ: ನಾವಿಕನೇ ನನ್ನನ್ನು ಆ ದಡಕ್ಕೆ ದಾಟಿಸುವೆಯಾ ?

ನಾವಿಕ: ದಾಟಿಸುವೆ. ಆದರೆ .... ಈ ಪ್ರಾಣಿಗಳು ? ನನ್ನವೇ ?

ಒಡೆಯಾ: ಹೌದು. ನನ್ನ ಸಾಕು ಪ್ರಾಣಿಗಳು ....

ನಾವಿಕ ಚೆನ್ನಾಗಿದೆ ಹುಲಿಯನ್ನೂ, ಹಸುವನ್ನೂ ಸಾಕಿರುವೆ. ತಮಾಷೆಯಾಗಿದೆ. ಹುಲಿಗೆ ಈ ಹಸು ಹೆದರುತ್ತಿರುವಂತಿದೆ.

ಒಡೆಯಾ: ಹೌದು ಈ ಹುಲಿ ಹಸುವನ್ನು ಹೆದರಿಸುತ್ತದೆ. ಅದು ಹುಲಿಯ ಸಹಜ ಗುಣವಲ್ಲವೇ? ಆದರೆ ನಾನು ಹತ್ತಿರಕ್ಕೆ ಹುಲಿ ಬರದಂತೆ ನೋಡಿ ಕೊಳ್ಳುತ್ತೇನೆ.

ನಾವಿಕ: ಅದು ಮಾಡಬೇಕಾದದ್ದೇ .... ಅದರಿಲಿ, ನನ್ನ ದೋಣಿಯೋ ಬಹಳ ಚಿಕ್ಕದು. ಒಂದು ಸಲಕ್ಕೆ ಒಂದು ಪ್ರಾಣಿಯನ್ನು ಮಾತ್ರ ನನ್ನೊಂದಿಗೆ ಒಯ್ಯುಬಹುದು. ಈ ಹುಲ್ಲಿನ ಹೊರೆಯೂ ಭಾರವಾಗಿದೆಯಲ್ಲ ಅದಕ್ಕೆಲ್ಲಿದೆ ಸ್ಥಳ ....

ಒಡೆಯಾ:ಹಾಗೆನ್ನಬೇಡ ನಾನು ಆ ದಡವನ್ನು ಸೇರಲೇಬೇಕಾಗಿದೆ. ನನಗೆ ತಕ್ಕಷ್ಟೇ ಹಣವನ್ನು ಕೊಡುತ್ತೇವೆ. ನನ್ನನ್ನು ನನ್ನ ಈ ಸಾಕು ಪ್ರಾಣಿಗಳನ್ನು ಹಾಗೆ ಈ ಹುಲ್ಲಿನ ಹೊರೆಯನ್ನು ಸುರಕ್ಷಿತವಾಗಿ ಆ ದಡವನ್ನು ತಲುಪಿಸಿಬಿಡು.

ನಾವಿಕ: ಸರಿ. ಹಾಗೇ ಆಗಲಿ, ಆದರೆ ಆಗಲೇ ಹೇಳಿದಂತೆ ಒಂದೊಂದಾಗಿ ಸಾಗಿಸಬಲ್ಲೆ. ಮೊದಲು ನಿನ್ನೊಂದಿಗೆ ಯಾವ ಪ್ರಾಣಿಯನ್ನು ಕರೆದೊಯ್ಯುವೆ?

ಒಡೆಯಾ:ನೀನೇ ಹೇಳು.

ನಾವಿಕ: ಮೊದಲಿಗೆ ನನ್ನೊಂದಿಗೆ ಈ ಹುಲಿಯನ್ನು ಕರೆದುಕೋ .... ಒಂದು ವೇಳೆ ಇಲ್ಲಿ ಬಿಟ್ಟು ಹೋದರೆ ಅದು ಕೋಪದಿಂದ ಘರ್ಜಿಸಬಹುದು. ಆ ಘರ್ಜನೆಗೆ ಈ ಪ್ರದೇಶವೆಲ್ಲಾ ನಡುಗಬಹುದು. ಆಸುಪಾಸಿನ ಪ್ರಾಣಿಗಳೂ ಹೆದರಿ ಓಡಬಹುದು.

ಒಡೆಯಾ:ಆದರೆ ಹಾಗೆ ಮಾಡಲಾಗುವುದಿಲ್ಲ. ಇಲ್ಲಿ ಹಸುವಿನ ಜೊತೆಗೆ ಈ ಹುಲ್ಲಿನ ಹೊರೆಗಳನ್ನು ಬಿಟ್ಟು ಹೋದರೆ, ಹಸು ಹುಲ್ಲಿನ ಹೊರೆಗೆ ಬಾಯಿ ಹಾಕಿ ಎಳೆದು ಬಿಡುತ್ತದೆ. ಇಲ್ಲಿ ನೋಡಿಕೊಳ್ಳುವವರು ಯಾರೂ ಇಲ್ಲ.

ನಾವಿಕ: ಸರಿ, ಹಾಗಾದರೆ ಮೊದಲಿಗೆ ಈ ಹಸುವನ್ನೇ ಕರೆದೊಯ್ಯಲಾ? ಹುಲಿಯ ಮುಂದೆ ಹುಲ್ಲಿನ ರಾಶಿಯೇ ಬಿದ್ದಿದ್ದರೂ ಅದು ತಿನ್ನುವುದಿಲ್ಲ .... (ನಗುವನು)

ಒಡೆಯಾ:ಸರಿ ಅದೇ ಸರಿ. ನಿನ್ನ ಉಪಾಯ ಸರಿಯಾಗಿದೆ. ಮೊದಲಿಗೆ ಈ ಹಸುವನ್ನು ದೋಣಿಗೆ ಹತ್ತಿಸಲು ಸಹಾಯ ಮಾಡು ಎನ್ನುತ್ತಾ ಹಸುವಿಗೆ ಕಟ್ಟಿದ್ದ ಹಗ್ಗವನ್ನು ಕೈಯಲ್ಲಿ ಹಿಡಿದು ದೋಣಿಯನ್ನು ಹತ್ತಿ, ಹಸುವನ್ನು ಎಳೆದುಕೊಳ್ಳುವನು .... ನಾವಿಕನೂ ಹತ್ತುವನು.

ಹುಲಿ: ಜೋರಾಗಿ ಘರ್ಜಿಸುವುದು. ಒಡೆಯಾ ಬೇಗ ಬಾ .... ನನಗೆ ಮೊದಲೇ ಸಹನೆ ಕಡಿಮೆ. ಈ ಹುಲ್ಲಿನ ರಾಶಿಯನ್ನು ನೋಡುತ್ತಾ ನೋಡುತ್ತಾ ನನ್ನ ಹಸಿವು ಹೆಚ್ಚಾಗುತ್ತದೆ. ಹಸಿವು ಹೆಚ್ಚಾದಷ್ಟೂ ನನ್ನ ಕೋಪ ಕೆರಳುತ್ತೆ ... ನಾನು ಈ ಬಂಧನದಿಂದ ಓಡಿ ಹೋಗ ಬೇಕೆನ್ನಿಸುತ್ತದೆ, ಆಗ ಏನು ಮಾಡುವೆ ?

ಒಡೆಯಾ:ಹಾಗೆ ಮಾಡದಿರು ರಾಜಾ.... ನೀನು ನನ್ನ ಆಪ್ತನಲ್ಲವೆ....? ನಾನು ಹಸುವನ್ನು ಅಲ್ಲಿಯ ದಡದಲ್ಲಿ ಕಟ್ಟಿ ಹಾಕಿ ಬಂದುಬಿಡುವೆನು. ನಾನು ಬರುವವರೆಗೂ ಈ ಆಹಾರವನ್ನು ಕಬಳಿಸುತ್ತಿರು ಎಂದು ಹೇಳಿ, ಹುಲಿಯ ಮುಂದೆ ಮಾಂಸಾಹಾರವನ್ನು ಹಾಕುವನು (ಹುಲಿ ಅಸಮಾಧಾನದಿಂದ ಗುರ್ ಎನ್ನುತ್ತಾ ಮಾಂಸಕ್ಕೆ ಬಾಯಿ ಹಾಕುವುದು)

* * *

ದೃಶ್ಯ – ೨

ಹಸು: ಒಡೆಯಾ, ನಿನಗೆ ನನ್ನ ಮೇಲೆ ದಯೆಯೇ ಇಲ್ಲವೆನಿಸುತ್ತದೆ. ನನಗೆ ಹುಲ್ಲನ್ನೂ ಹಾಕಲಿಲ್ಲ, ನೀರನ್ನೂ ಕುಡಿಸಲಿಲ್ಲ. ಈಗ ನೋಡಿದರೆ, ಆ ದಡದ ಮೇಲೆ ನನ್ನನ್ನು ಒಂಟಿಯಾಗಿ ಬಿಟ್ಟು ಮತ್ತೆ ಈ ದಡಕ್ಕೆ ಬರುವ ಮಾತನಾಡುತ್ತಿದ್ದೇಯೇ ?

ಒಡೆಯಾ:ಹೌದು ಮಾತೆ .... ನೀನೇ ಹೇಳು ನನ್ನೊಂದಿಗೆ ನಿಮ್ಮಿಬ್ಬರನ್ನು ಕ್ಷೇಮವಾಗಿ ಆ ದಡಕ್ಕೆ ಸೇರಿಸುವುದು ನನ್ನ ಕರ್ತವ್ಯವಲ್ಲವೇ? ಈ ದೋಣಿಯಲ್ಲಿ ಒಟ್ಟಿಗೆ ಎಲ್ಲರನ್ನೂ ಕರೆದೊಯ್ಯಲು ಸ್ಥಳವಿಲ್ಲವೆಂದು ನಿನಗೂ ತಿಳಿದಿದೆ. ಆತಂಕಗೊಳ್ಳದಿರು, ನಿನಗೂ ಹುಲ್ಲು ಕೊಡುವೆ.

ಹಸು: ನನ್ನೊಂದಿಗೆ ಹುಲ್ಲಿನ ಹೊರೆಯನ್ನು ತಂದಿದ್ದರೆ, ನನಗೂ ಮೇವು ಸಿಗುತ್ತಿತ್ತು. ನೀನು ಮತ್ತೆ ಹುಲ್ಲನ್ನು ತರುವವರೆಗೂ ನಾನು ಹಸಿದು ಕೊಂಡಿರಬೇಕೆ? ನಿನಗೆ ನನ್ನ ಹಸಿವು ಗೊತ್ತಾಗುವುದಿಲ್ಲ. ನಿನಗೆ ನನಗಿಂತ ಆ ಹುಲಿಯ ಮೇಲೆ ಪ್ರೀತಿ ಹೆಚ್ಚು ನನ್ನ ಮೇಲೆ ನಿನಗೆ ಮಮತೆಯೇ ಇಲ್ಲ.

ಒಡೆಯಾ:ಹಾಗೆನ್ನಬೇಡ ಮಾತೆ .... ನೀನು ಎಷ್ಟಾಗಲೀ ಗೋಮಾತೆ ಅಲ್ಲವೇ? ನಿನಗೆ ಸಹನೆ ಜಾಸ್ತಿ .... ಎಂದೂ ನೀನು ಕೋಪಿಸಿಕೊಂಡಿಲ್ಲ. ಮುಂದೆ ಬಂದರೆ ಹಾಯಲು ಗೊತ್ತಿಲ್ಲ, ಹಿಂದೆ ಬಂದರೆ ಒದೆಯಲೂ ತಿಳಿದಿಲ್ಲ. ನನಗೆ ನಿನ್ನ ಮೇಲೆ ಅತಿ ಗೌರವವಿದೆ. ಆದರೇನು ಮಾಡಲಿ? ನಿನಗೆ ತಿಳಿದಂತೆ ನನ್ನ ರಾಜನಿಗೆ ಮುಂಗೋಪ .... ಮೂಗಿನ ತುದಿಯಲ್ಲೇ ಕೋಪ ಇರುತ್ತದೆ. ಗುರ್ ಎನ್ನುತ್ತಾನೆ. ಆದರೇನು ಮಾಡಲಿ ? ನಾನು ಸಾಕಿದ ರಾಜ ಅವನೆಂದು ನಾನು ತಾಳ್ಮೆಯಿಂದ ಇರುತ್ತೇನೆ.

ಹಸು: ಅವನನ್ನು ಅಡವಿಗೆ ಯಾಕೆ ಬಿಟ್ಟುಬಿಡಬಾರದು? ನೀನೂ ನಿಶ್ಚಿಂತೆಯಿಂದಿರ ಬಹುದು. ನಾನೂ ಹಾಯಾಗಿರುತ್ತೇನೆ.

ಒಡೆಯಾ:ಹಾಗೆನ್ನದಿರು ಮಾತೆ ....ಅವನು ನನ್ನ ಮಗನಂತೆ. ಚಿಕ್ಕ ಮರಿ ಯಾಗಿದ್ದಾಗಿನಿಂದ ಸಾಕಿ ಬೆಳೆಸಿದ್ದೇನೆ. ನಿನ್ನ ಹಾಲನ್ನು ಕುಡಿಸಿ ಬೆಳೆಸಿದ್ದೇನೆ. ಬೆಳೆದು ದೊಡ್ಡವನಾದ ಮೇಲೆ ಅವನ ಆಹಾರ

ಬೇರೆಯಾಯಿತು. ನಿನಗೆ ಹೇಗೆ ನಿನ್ನ ಮೇವು ಪ್ರಿಯವೋ ಅವನಿಗೆ ಹಾಗೇ ಅವನಿಗೆ ಮಾಂಸ ಇಷ್ಟ. ಅವನೆಂದೂ ನಿನ್ನ ಹುಲ್ಲಿಗೆ ಬಾಯಿ ಹಾಕಿಲ್ಲ.... ಹಾಗೇ ನಿನ್ನ ತಂಟೆಗೂ ಬಂದಿಲ್ಲ. ನಿಜ ತಾನೇ?

ಹಸು: ನೀನೆಂದೂ ಅವನೊಂದಿಗೆ ನನ್ನನ್ನು ಒಂಟಿಯಾಗಿ ಬಿಟ್ಟು ಹೋಗಿಲ್ಲ. ಆ ಕಾರಣದಿಂದಲೇ ನಾನು ಇನ್ನೂ ನಿನ್ನಲ್ಲೇ ಉಳಿದಿರುವೆ. ಇಲ್ಲದಿದ್ದರೆ, ಅವನ ಘರ್ಜನೆಗೆ ಹೆದರಿ ಎಂದೋ ಗೂಟದ ಸಮೇತ ಕಟ್ಟಿದ ಹಗ್ಗವನ್ನು ಕಿತ್ತುಕೊಂಡು ಓಡಿ ಹೋಗುತ್ತಿದ್ದೆ.

ಒಡೆಯಾ: ಹಾಗೆಂದಿಗೂ ಆಗುವುದಿಲ್ಲ. ಭಯ ಪಡಬೇಡ. ನಾನು ಇದ್ದೇನಲ್ಲ ನಿನ್ನ ರಕ್ಷಣೆಗೆ. ಆ ಕಾರಣದಿಂದಲೇ ನಿನ್ನನ್ನು ಮೊದಲಿಗೆ ದಡವನ್ನು ತಲುಪಿಸುತ್ತಿದ್ದೇನೆ. ಅದೋ ನೋಡು ದಡ ಬಂದಿತು. ಎಲೈ ನಾವಿಕನೇ ದೋಣಿಯನ್ನು ನಿಲ್ಲಿಸು. ಹಾಗೇ ಹಸುವನ್ನು ಇಳಿಸುವುದಕ್ಕೆ ಸಹಾಯ ಮಾಡು.

(ಇಬ್ಬರೂ ದೋಣಿಯಿಂದ ಇಳಿದು ಹಸುವನ್ನು ಇಳಿಸುವರು. ಆ ವ್ಯಕ್ತಿಯು ಹಸುವನ್ನು ಅಲ್ಲಿನ ಮರಕ್ಕೆ ಕಟ್ಟಿ, ಭುಜದ ಮೇಲೆ ಕೈಯಾಡಿಸುವನು. ನೀನು ಇಲ್ಲಿ ಆಯಾಸ ಪರಿಹರಿಸಿಕೋ. ನಾನು ಈಗಲೇ ಹೋಗಿ ನಿನಗಾಗಿ ಹುಲ್ಲಿನ ಹೊರೆಗಳನ್ನು ತಂದು ಬಿಡುವೆನು. ನಾವಿಕನೇ ನಡೀ, ಬೇಗ ಹೋಗಿ ಬಂದುಬಿಡೋಣ. ಇಬ್ಬರೂ ಮತ್ತೆ ದೋಣಿಯನ್ನು ಹತ್ತುವರು. ದೋಣಿ ಚಲಿಸುವುದು, ಮತ್ತೆ ಈ ದಡವನ್ನು ಸೇರುವರು.)

* * *

ದೃಶ್ಯ – ೩

(ಹುಲಿ ಒಡೆಯನನ್ನು ಕಂಡೊಡನೆ ಘರ್ಜಿಸುವುದು. ಎರಗಲು ಪ್ರಯತ್ನಿಸುವುದು. ಅವನು ಸಮಾಧಾನಗೊಳಿಸುವನು.)

ಒಡೆಯಾ: ಏಯ್ ಸುಮ್ಮನಿರೋ ರಾಜಾ.... ಈಗ ನಿನ್ನ ಸರದಿ.... ನಿನ್ನನ್ನೇ ಕರೆದೊಯ್ಯುವೆನು.... ನಡೀ ದೋಣಿಯನ್ನು ಹತ್ತು .... ಚಾವಟಿಯನ್ನು ಝುಳಪಿಸುವನು (ಹುಲಿಯು ರೋಷದಿಂದ ಅತ್ತಿತ್ತ ನೋಡಿ ಭುಸು ಗುಟ್ಟುತ್ತಾ ದೋಣಿಯನ್ನು ಹತ್ತುವುದು. ನಾವಿಕನು ಹೆದರುವನು.)

ನಾವಿಕ: ಒಡೆಯಾ ನನಗೆ ದಿಗಿಲಾಗುತ್ತಿದೆ. ಇದರ ಆರ್ಭಟಕ್ಕೆ ದೋಣಿ ಎಲ್ಲಿ ಮುಳುಗಿ ಬಿಡುವುದೋ.... ನನ್ನನ್ನು ಎಲ್ಲಿ ಮುಗಿಸಿಬಿಡು ವುದೋ?

ಒಡೆಯಾ: ಇಲ್ಲ. ನನ್ನ ರಾಜ ಅಷ್ಟು ದುಷ್ಟನಲ್ಲ. ಅಸಮಾಧಾನದಿಂದ ಹೀಗೆ ಭುಸುಗುಟ್ಟುತ್ತಿದ್ದಾನೆ. ನೀನು ಭಯ ಪಡಬೇಡ. ನಾನಿದ್ದೇನೆ. ಹುಟ್ಟು ಹಾಕಲು ಪ್ರಾರಂಭಿಸು.

ನಾವಿಕ: ತಾಯಿ ಜಲದೇವತೆ ನನ್ನನ್ನು ರಕ್ಷಿಸು .... (ಎಂದು ಕೈಮುಗಿದು ಹುಟ್ಟು ಹಾಕುವನು ದೋಣಿ ಚಲಿಸುವುದು)

ಒಡೆಯಾ:ರಾಜಾ .... ನೀನು ನನ್ನನ್ನು ಬಲ್ಲೆಯಷ್ಟೇ .... ಏಕೆ ಈ ಆಕ್ರೋಶ? ನಾನು ನಿನ್ನನ್ನು ನನ್ನ ಮಗನಂತೆಯೇ ಸಾಕಿ ಸಲುಹಿರುವೆನಲ್ಲಾ ಎನ್ನುತ್ತಾ ತಲೆಯ ಮೇಲೆ ಕೈಯಾಡಿಸುವನು.

ನಾವಿಕ: ನಾನು ಇಂಥಾ ಪರಿಸ್ಥಿತಿಯನ್ನು ಎಂದೂ ಕಂಡಿರಲಿಲ್ಲ. ಹುಲಿಯನ್ನು ಸಾಕು ಪ್ರಾಣಿಯಂತೆ ಸಾಕುವುದೇ? ಇದರಿಂದ ನಿನಗೆ ಪ್ರಯೋಜನ ವೇನು? ಇದರೊಂದಿಗೆ ಹಸುವನ್ನು ಸಾಕಿರುವೆಯಲ್ಲಾ .... ನಿನ್ನ ತಿಳುವಳಿಕೆಗೆ ನಗಬೇಕೋ ಅಳಬೇಕೋ ತಿಳಿಯದಾಗಿದೆ.

ಒಡೆಯಾ: ಸುಮ್ಮನಿರು.... ನಿನ್ನ ಮಾತಿನಿಂದ ನನ್ನ ರಾಜನಿಗೆ ಕೋಪ ಏರುವುದು. ಕಾಡಿನಲ್ಲಿ ತಾಯಿಯಿಂದ ಬೇರ್ಪಟ್ಟು ಗುಂಯ್‌ಗುಡು ತ್ತಿದ್ದ ಚಿಕ್ಕಮರಿಯನ್ನು ತಂದು ಸಾಕಿದೆನು. ಇವನಿಗಾಗಿ ಈ ಹಸುವನ್ನು ಕೊಂಡು ತಂದೆನು. ಇವನಿಗೆ ಆ ಮಾತೆ ಹಾಲುಣಿಸಿದ್ದಾಳೆ. ತಾಯಿಯ

ಅಕ್ಕರೆಯನ್ನು ಸಾರಿದ್ದಾಳೆ. ಇವನು ಅವನ ಸಹಜ ಗುಣಕ್ಕೆ ಅನ್ವಯವಾಗಿ ಗುರ್ ಗುಟ್ಟಿದರೂ ಅಷ್ಟು ಕೆಟ್ಟವನಲ್ಲ. ಒಂದೇ ಸೂರಿನಡಿಯಲ್ಲಿ ಎರಡು ಪರಸ್ಪರ ವೈರಿ ಪ್ರಾಣಿಗಳನ್ನು ಸಾಕಿರುವೆ. ಇದನ್ನು ಅವಿವೇಕ ಎನ್ನುತ್ತೀಯಾ ....?

ನಾವಿಕ: ತಪ್ಪಾಯಿತು. ಆದರೂ ಅಚ್ಚರಿಯಾಗುತ್ತದೆ. ಇರಲಿ ಲೋಕಕ್ಕೆ ಸಂದೇಶವನ್ನು ಸಾರಿದ್ದೀಯೆ .... ಎಲ್ಲರೂ ಜೀವಜಂತುಗಳೇ. ವೈರವನ್ನು ಮರೆತು ಒಟ್ಟಾಗಿ ಬಾಳುವುದಾದರೆ, ಬೇರೇನೂ ಬೇಕಾಗುವುದಿಲ್ಲ. ನೋಡು ದಡ ಬಂದಿತು ನಿನ್ನ ರಾಜನನ್ನು ಬೇಗ ಇಳಿಸು ಮತ್ತೆ ಹೋಗಬೇಕಲ್ಲ. ಆದರೆ?

ಒಡೆಯಾ: ನಿನ್ನ ಸಂದೇಹ ನನಗೆ ಅರಿವಾಗುತ್ತಿದೆ .... ಇಲ್ಲಿ ಹುಲಿಯನ್ನು, ಹಸುವನ್ನು ಒಟ್ಟಿಗೆ ಬಿಡುವೆನೇ ಎಂದು ಯೋಚಿಸುತ್ತಿರುವೆ ಅಲ್ಲವೇ? ಇಲ್ಲ. ಈ ಬಾರಿ ದೋಣಿ ಖಾಲಿ ಹೋಗುವುದಿಲ್ಲ. ನನ್ನೊಂದಿಗೆ ಹಸುವನ್ನು ಕರೆ ತರುತ್ತೇನೆ. ಮಾತೆ ಗಾಬರಿಗೊಳ್ಳುತ್ತಾಳೆ. ರಾಜ ಕೀಟಲೆ ಮಾಡುತ್ತಾನೆ.... ಈ ಕಿರಿಕಿರಿ ಎಲ್ಲಾ ಯಾಕೆ? ನನಗೆ ಸಹಾಯ ಮಾಡು. (ಇಬ್ಬರೂ ಸೇರಿ ಹುಲಿಯನ್ನು ಅಲ್ಲಿ ಕಟ್ಟಿ ಹಾಕಿ, ಹಸುವನ್ನು ಮತ್ತೆ ದೋನಿಗೆ ಹತ್ತಿಸುತ್ತಾರೆ. ದೋಣಿ ಚಲಿಸುತ್ತದೆ. ಹಸು ಅಂಬಾ .... ಅರಚಿಕೊಳ್ಳುತ್ತದೆ.)

ಒಡೆಯಾ: ನನ್ನನ್ನು ಕ್ಷಮಿಸು ಮಾತೆ. ಇದೊಂದು ಬಾರಿ ನನಗೆ ಸಹಕಾರವನ್ನು ನೀಡು. ಮೊದಲೇ ನೀನು ಹಸಿವು ಎನ್ನುತ್ತಿರುವೆ. ನಿನ್ನ ಸಾಧು ಸ್ವಭಾವವನ್ನು ರಾಜ ಚುಡಾಯಿಸುತ್ತಾನೆ. ನೀನು ಬೆದರುತ್ತೀಯೇ ....

ಹಸು: ಮತ್ತೇಕೆ ನನ್ನನ್ನ ಕರೆದೊಯ್ಯುತ್ತಿದ್ದೀಯೆ .... ಹುಲ್ಲನ್ನು ತರುವೆನೆಂದು ಹೇಳಿದ್ದೆಯಲ್ಲವೇ ? ಹುಲ್ಲಿನ ಕಂತೆಗಳು ಎಲ್ಲಿ ?

ಒಡೆಯಾ: ನೀನು ಸ್ವಲ್ಪ ಹೊತ್ತು ಸುಮ್ಮನಿದ್ದು ಬಿಡು ಮಾತೆ. ನಿನಗೆ ಹೊಟ್ಟೆ ತುಂಬಾ ಹುಲ್ಲನ್ನು ತಿನ್ನಿಸುವೆ. ನಾವಿಕನೇ ಬೇಗ ಬೇಗ ದೋಣಿಯನ್ನು ದಡಕ್ಕೆ ಮುಟ್ಟಿಸು, ಸಮಯ ಮೀರುತ್ತಿದೆ.

ನಾವಿಕ: ನನಗೆ ನಿನ್ನ ಹಸುವಿನ ಬಗ್ಗೆ ಮರುಕ ಹುಟ್ಟುತ್ತಿದೆ. ಇದೆಲ್ಲಿಯ ನ್ಯಾಯ ....? ನೀನು ಸಾಕಿರುವ ಹುಲಿಗಾಗಿ ಈ ಹಸುವನ್ನು ಪರದಾಡಿಸುತ್ತಿರುವೆ ಯಲ್ಲಾ ? ಈ ಹಸುವನ್ನು ನನಗೆ ಕೊಟ್ಟುಬಿಡು ನಾನು ಸಾಕುತ್ತೇನೆ. ಮಾತೆ .... ನನ್ನೊಡನೆ ಇರುವೆಯಾ? (ಇಲ್ಲ

ಎನ್ನುವಂತೆ ಹಸು ತಲೆಯಾಡಿಸುವುದು.)

ಹಸು: ಇವನು ನನ್ನ ಒಡೆಯ ಇವನನ್ನು ಬಿಟ್ಟು ನಿನ್ನೊಡನೆ ಬರುವುದು ಸಾಧ್ಯವೇ ಇಲ್ಲ. ನಿನ್ನ ಪಾಡಿಗೆ ನೀನು ನಿನ್ನ ಕಾಯಕವನ್ನು ನೋಡಿಕೋ. ನನಗಾಗಿ ಸಮಯವನ್ನು ಕೊಡಲು ನಿನಗೆಲ್ಲಿದೆ ಸಮಯ?

ನಾವಿಕ: ಭಲೇ ಮಾತೆ.... ಇದು ಮೆಚ್ಚಬೇಕಾದ ಮಾತುಗಳೇ.... ಈ ಸ್ನೇಹವನ್ನು ಕಂಡು ನನ್ನ ಹೃದಯ ತುಂಬಿ ಬಂದಿದೆ. ನನಗೆ ನಿಮ್ಮಿಬ್ಬರನ್ನು ಅಗಲಿಸುವ ಆಲೋಚನೆ ಖಂಡಿತಾ ಇಲ್ಲ. ಸುಮ್ಮನೆ ತಮಾಷೆ ಮಾಡಿದೆ.

ಹಸು: ನನ್ನಂತಹ ಸಾಧು ಪ್ರಾಣಿಯನ್ನು ಕಂಡು ನಿನಗೆ ತಮಾಷೆ ಮಾಡ ಬೇಕೆಂದೆನಿಸುತ್ತದೆಯೇ? ನೀನೇಕೆ ನನ್ನ ರಾಜನನ್ನು ಸಾಕಬಾರದು?

ನಾವಿಕ: ಈಗ ನೀನು ನನ್ನನ್ನು ಚುಡಾಯಿಸುತ್ತಿರುವೆ.... ರಾಜನಿಂದ ನನಗೆ ಸಿಗುವುದಾದರೂ ಏನು ? ಅವನು ಎಲ್ಲರಿಗೂ ಭಯವನ್ನು ಹುಟ್ಟಿಸುವನು. ಪ್ರಯಾಣಿಕರು ಬರಲು ಹಿಂಜರಿಯುವರು. ನನ್ನ ಸಂಪಾದನೆ ಕಡಿಮೆಯಾಗುವುದು. ನನಗೆ ತಿನ್ನಲು ಸಾಕಾಗದೇ ಇರುವಾಗ, ಆ ಮಾಂಸ ಭಕ್ಷಕನಿಗೆ ಆಹಾರವನ್ನು ಎಲ್ಲಿಂದ ಒದಗಿಸಲಿ? ಬೇಡ ಬೇಡ. ಈಗಿನಂತೆಯೇ ನೀವುಗಳು ಒಗ್ಗಟ್ಟಾಗಿರಿ. ಹುಲಿಯನ್ನು ಸಾಕಿದ ಹಸು ಎಂಬ ಬಿರುದು ನಿನಗಿರಲಿ .... ನಿಮ್ಮಿಬ್ಬರನ್ನು ಒಟ್ಟಿಗೆ ಇರಿಸುವ ಹೆಗ್ಗಳಿಕೆ ನಿನ್ನ ಒಡೆಯನಿಗಿರಲಿ. ದಡಕ್ಕೆ ಬಂದೇ ಬಿಟ್ಟೆವು .... ಬಾ ಇಳಿ. ಇಬ್ಬರೂ ಹಸುವನ್ನು ದೋಣಿಯಿಂದ ಇಳಿಸುವರು. ಹಸುವನ್ನು ಮತ್ತೆ ಅಲ್ಲಿ ಮರಕ್ಕೆ ಕಟ್ಟಿಹಾಕುವರು. ಹಸು ಹುಲ್ಲಿನ ಕಡೆ ಆಸೆಗಣ್ಣುಗಳಿಂದ ನೋಡುವುದು .... ಒಡೆಯಾ ಹುಲ್ಲಿನ ಹೊರೆಯನ್ನು ದೋಣಿಯೊಳಗೆ ಇಡಿಸುವನು. ದೋಣಿ ಚಲಿಸುವುದು, ಹಸು ಅಂಬಾ ಎಂದು ಅರಚಿಕೊಳ್ಳುವುದು.

ನಾವಿಕ: ಇದೆಂಥಾ ನ್ಯಾಯ ಮಾನವ? ಹಸುವಿಗೆ ಒಂದು ಹಿಡಿ ಹುಲ್ಲನ್ನು ಹಾಕದೇ ಎಲ್ಲವನ್ನೂ ದೋಣಿಯಲ್ಲಿ ಇರಸಿದೆಯಲ್ಲಾ .... ಪಾಪ ನೋಡು ಹಸು ಹೇಗೆ ಅರಚಿಕೊಳ್ಳುತ್ತಿದೆ .... ನೀನು ಮಾಡಿದ್ದು ಸರಿಯೇ ?

ಒಡೆಯಾ: ಸರಿಯಿಲ್ಲ. ಆದರೆ ಈ ಉಪಾಯಕ್ಕಿಂತ ಬೇರೆ ಉಪಾಯವೇ ಇಲ್ಲ. ಹಸುವಿಗೆ ಹುಲ್ಲನ್ನು ತಿನ್ನಿಸುತ್ತಾ ನೀರನ್ನು ಕುಡಿಸುತ್ತಾ ಇಲ್ಲಿ

ಕುಳಿತರೆ, ನೀನು ನನಗಾಗಿ ಕಾಯುತ್ತಾ ಕುಳಿತಿರುತ್ತಿದ್ದೆಯಾ....! ಅಲ್ಲದೇ ಅಲ್ಲಿ ರಾಜ ಒಬ್ಬನನ್ನೇ ಬಿಟ್ಟು ಬಂದಿದ್ದೀನಿ.... ನಡೀ ಬೇಗ ನಡೀ .... ಈ ಹುಲ್ಲಿನ ಹೊರೆಗಳನ್ನು ಅಲ್ಲಿ ಇಳಿಸಿ, ಮತ್ತೆ ಇಲ್ಲಿಗೆ ಬರಬೇಕಲ್ಲಾ

ನಾವಿಕ: ನೀನು ಸ್ವಾರ್ಥಿ....

ಒಡೆಯಾ:ಇರಬಹುದು ನಾನು ಸ್ವಾರ್ಥಿಯೇ.... ಪ್ರಪಂಚದಲ್ಲಿ ಎಲ್ಲರೂ ಸ್ವಾರ್ಥಿಗಳೇ. ನಿನ್ನ ಬಳಿ ಒಂದು ದೊಡ್ಡ ದೋಣಿ ಇದ್ದಿದ್ದರೆ ಈ ಫಜೀತಿಯೇ ಇರುತ್ತಿರಲಿಲ್ಲ. ಒಂದೇ ಬಾರಿಗೆ ನಾನು ಹಾಗೂ ನನ್ನ ಈ ಸಂಸಾರ ಒಟ್ಟಿಗೇ ಈ ದಡದಿಂದ ಆ ದಡಕ್ಕೆ ಸೇರುತ್ತಿದ್ದೆವು. ಈಗ ನನ್ನನ್ನು ದೂಷಿಸುವೆಯಾ! ನನ್ನ ಸಮಯ ಎಷ್ಟು ವ್ಯರ್ಥ ವಾಗಿದೆಯೆಂದು ಬಲ್ಲೆಯಾ?

ನಾವಿಕ: ಭಲೇ ಮಾನವ .... ನನ್ನನ್ನೇ ಅಪಹಾಸ್ಯಗೊಳಿಸುತ್ತಿರುವೆಯಾ....! ನನ್ನಲ್ಲಿ ದೊಡ್ಡ ದೋಣಿಯೊಂದನ್ನು ಕೊಳ್ಳುವಷ್ಟು ಹಣವಿದ್ದಿದ್ದರೆ.... ನಾನು ಈ ನದೀ ತೀರದಲ್ಲಿ ಕುಳಿತಿರುತ್ತಿರಲಿಲ್ಲ. ಈಗ ನೀನು ಹಣ ಕೊಟ್ಟರೆ ಆ ಬಗ್ಗೆ ಯೋಚಿಸುವೆ ....

ಒಡೆಯಾ:ನಾನು ಅಷ್ಟು ಶ್ರೀಮಂತನಾಗಿದ್ದರೆ.... ಈ ಸ್ನೇಹ ಸಂಸಾರದ ಆಲೋಚನೆಯೇ ನನ್ನಲ್ಲಿ ಇರುತ್ತಿರಲಿಲ್ಲವೇನೋ.... ಇರಲಿ ಬಿಡು ನನಗಾಗಿ ನೀನು ಪರಿಶ್ರಮವನ್ನು ಪಟ್ಟಿರುವೆ.... ನಿನಗೆ ಸ್ವಲ್ಪ ಹೆಚ್ಚು ಹಣವನ್ನೇ ಕೊಡುವೆನು. ನಿನ್ನ ಮಕ್ಕಳಿಗೆ ಏನನ್ನಾದರೂ ತೆಗೆದುಕೊಡು.

ನಾವಿಕ: ಮದುವೆಯೇ ಆಗಿಲ್ಲ.... ಮಕ್ಕಳೆಲ್ಲಿ ? ನಾನೂ ನಿನ್ನ ಹಾಗೆ ಒಂಟಿ.... ಅಂದಹಾಗೆ ನಿನಗೆ ಹೆಂಡತಿ ಮಕ್ಕಳು ಇಲ್ಲವೇ ?

ಒಡೆಯಾ: ಇದ್ದಿದ್ದರೆ....(ನಗುವನು) ನನಗೆ ಈ ಸಂಸಾರ ಎಲ್ಲಿರುತ್ತಿತ್ತು? ನಾನು ಈ ಸಂಸಾರದಲ್ಲಿ ಸುಖಿಯಾಗಿದ್ದೀನಿ. ಹೀಗೇ ಬದುಕುವೆನು. ಸ್ವಲ್ಪ ವೇಗವಾಗಿ ದೋಣಿಯನ್ನು ಓಡಿಸು ಮಾರಾಯ. ಇಲ್ಲಿ ಹುಲಿ! ಅಲ್ಲಿ ಹಸು! ನನಗಾಗಿ ಕಾಯುತ್ತಿರುವುದುನ್ನು ನೀನು ಬಲ್ಲೆಯಷ್ಟೆ .... ಅವಸರಿಸುವನು ದೋಣಿ ದಡವನ್ನು ಸೇರುತ್ತಿರುವಂತೆಯೇ, ಹುಲ್ಲಿನ ಹೊರೆಗಳನ್ನು ಹುಲಿಯ ಮುಂದೆ ಇಳಿಸಿ, ಮತ್ತೆ ಹೊರಡು ವರು, ಹುಲಿ ಘರ್ಜಿಸುವುದು ಅವನು ಹುಲಿಯ ಮೈ ಸವರುವನು.

ನಾನು ಹೀಗೆ ಹೋಗಿ ಹಾಗೆ ಹಸುವನ್ನು ಕರೆತಂದು ಬಿಡುವೆನು ನನಗಾಗಿ ನಿನ್ನ ಅಮ್ಮ ಕಾಯುತ್ತಿದ್ದಾಳೆ .... ಈ ಹುಲ್ಲಿನ ಕಂತೆಗಳನ್ನು ಯಾರೂ ಕದ್ದೊಯ್ಯದಂತೆ ಎಚ್ಚರದಿಂದ ನೋಡಿಕೋ .... ಏಕೆಂದರೆ

ಈ ಪ್ರದೇಶ ನನಗೆ ಹೊಸತು. ಪರಿಚಯದವರು ಯಾರಿಲ್ಲ.

ಹುಲಿ: ಅಂತೂ ನನ್ನನ್ನು ನಿನ್ನ ಹಸುವಿನಂತೆ ಸಹನಾ ಮಯಿಯನ್ನಾಗಿ ಮಾಡಿ ಬಿಟ್ಟಿದ್ದೀಯೆ .... ಎಷ್ಟಾಗಲೀ ನಾನು ಗೋಮಾತೆಯ ಹಾಲನ್ನು ಕುಡಿದು ಬೆಳೆದವನಲ್ಲವೇ? ನನಗೆ ಜನ್ಮ ನೀಡಿದ ಅಮ್ಮನ ಹಾಲನ್ನು ಕುಡಿದು ಬೆಳೆದಿದ್ದರೆ.... ನಾನು ಈ ದಿನ 'ವ್ಯಾಘ್ರ ಮುಖದ ಗೋವು' ಎಂದು ಅನಿಸಿಕೊಳ್ಳಬೇಕಾಗಿರಲಿಲ್ಲ. ಆದರೆ ವಿಧಿ ಇಲ್ಲ. ನಿನ್ನ ಕೈಯಲ್ಲಿ ಬೆಳೆಯುವ ಯೋಗ ನನ್ನ ಹಣೆಯಲ್ಲಿ ಬರೆದಿತ್ತು. ಇದು ವಿಧಿಯ ಆಟ.

ಒಡೆಯಾ:ಇದರಿಂದ ನಿನಗೆ ಬೇಸರವಾಗುತ್ತಿದೆಯೇ ರಾಜಾ . . .

ಹುಲಿ: ಇಲ್ಲ ಒಡೆಯಾ .... ಬೇಸರವಿಲ್ಲ .... ಆ ಬದುಕು ಹೇಗಿರುತ್ತದೆಂದು ನನಗೆ ಊಹಿಸಿಕೊಳ್ಳಲೂ ಕಷ್ಟವಾಗುತ್ತದೆ. ಈಗ ಈ ಬದುಕು ಅಭ್ಯಾಸವಾಗಿ ಹೋಗಿದೆ. ಈಗ ನೀನೇ ನನ್ನ ತಂದೆ. ಗೋಮಾತೆಯೇ ನನ್ನ ತಾಯಿ.... ಮಾತಾಡುತ್ತ ನಿಲ್ಲಬೇಡ.... ನಿನಗಾಗಿ ಮಾತೆ ಕಾಯು ತ್ತಿರುತ್ತಾಳೆ.... ಬೇಗ ಹೋಗಿ ಬೇಗ ವಾಪಸ್ಸು ಬಾ .... (ಇಬ್ಬರೂ ದೋಣಿಯನ್ನೇರುವರು, ದೋಣಿ ಚಲಿಸುವುದು)

ನಾವಿಕ: ವಾಹ್! ನಾನಿಂಥ ಅಮರ ಸ್ನೇಹವನ್ನು ಎಲ್ಲಿಯೂ ಕಂಡಿರಲಿಲ್ಲ, ಕೇಳಿರಲಿಲ್ಲ, ನನಗೂ ನಿಮ್ಮೊಂದಿಗಿರುವ ಬಯಕೆಯಾಗುತ್ತಿದೆ. ನನ್ನನ್ನು ನಿಮ್ಮ ಸಂಸಾರಕ್ಕೆ ಸೇರಿಸಿಕೊಳ್ಳುವೆಯಾ ?

ಒಡೆಯಾ:ಯೋಚಿಸುತ್ತೇನೆ. ಈ ವಿಷಯವಾಗಿ, ನಾನು ಮಾತೆಯನ್ನ, ರಾಜನನ್ನು ಕೇಳಬೇಕು. ಅವರ ಒಪ್ಪಿಗೆ ಇಲ್ಲದೇ ನಾನು ಹೇಗೆ ಹೇಳಲಿ?

ನಾವಿಕ: ಯಾಕೆ ನೀನೇ ತಾನೆ ಈ ಗುಂಪಿಗೆ ಒಡೆಯಾ ?

ಒಡೆಯಾ:ಹೌದು. ಇದುವರೆಗೆ ಹುಲಿ, ಹಸು, ಹುಲ್ಲು ಮಾತ್ರ ಸಂಸಾರವಾಗಿದ್ದಿತು .... ಹುಲಿಯನ್ನು, ಹಸುವನ್ನು ನಾನು ಬರೀ ಮೂಕ ಪ್ರಾಣಿಗಳೆಂದು ಭಾವಿಸಿಲ್ಲ ಈಗ ಬೇಗ ಬೇಗ ನಡೀ.... ನನಗಾಗಿ ಅವರಿಬ್ಬರೂ ಕಾಯುತ್ತಿರುವರು (ದೋಣಿ ಮತ್ತೆ ಆ ದಡವನ್ನು ಸೇರುವುದು) ನಾವಿಕ ಹಸುವಿನ ಕಡೆ ದೈನ್ಯವಾಗಿ ನೋಡುವನು.

ಹಸು: ಏಕೆ ತಡ ಮಾಡಿದೆ ಒಡೆಯಾ? ರಾಜನು ನಿನ್ನನ್ನು ಬರಗೊಡ ಲಿಲ್ಲವೇ?

ಒಡೆಯಾ:ಇಲ್ಲ ರಾಜ ನಿನ್ನನ್ನು ಬೇಗ ಕರೆತರಬೇಕೆಂದು ಕಳಿಸಿರುವನು. ಹುಲ್ಲಿನ

ಹೊರೆ ಸಾಕಷ್ಟು ಭಾರವಾಗಿದ್ದುದರಿಂದ ಇಳಿಸುವುದು ತಡವಾಯಿತು ಅಷ್ಟೆ. ನಡೀ ಬೇಗ ಹೋಗಿ ಆ ದಡವನ್ನು ಸೇರೋಣ. ನಮಗಾಗಿ ರಾಜ ಅಸಹನೆಯಿಂದ ಕಾಯುತ್ತಿರುವನು.

(ಹಸುವನ್ನು ಹತ್ತಿಸಿಕೊಂಡು ದೋಣಿಯನ್ನು ಓಡಿಸಿ, ಆ ದಡವನ್ನು ಸೇರುವರು.)

* * *

ದೃಶ್ಯ – ೪

(ಹುಲಿಯು ಸಂತಸದಿಂದ ಮೆಲುವಾಗಿ ಘರ್ಜಿಸುವುದು. ಹಸು ಆನಂದದಿಂದ ಅಂಬಾ ಎನ್ನುವುದು. ಒಡೆಯಾ ನಾವಿಕನ ಕಡೆ ಸಂತಸದಿಂದ ನೋಡಿ, ಬೀಗುವನು)

ನಾವಿಕ: ಭಲೇ ನನಗೂ ಅತೀವ ಸಂತಸವಾಗಿದೆ. ಇಂದಿನಿಂದ ನಾನೂ ನಿಮ್ಮ ಸಂಸಾರದ ಒಬ್ಬ ಸದಸ್ಯನಾಗಿರಲು ಬಯಸುವೆ. ನನ್ನನ್ನೂ ಸೇರಿಸಿಕೊಳ್ಳುವೆಯಾ ಮಾತೆ? ನಾನೂ ನಿನ್ನೊಂದಿಗೆ ಇರಲೇ ರಾಜಾ. ... ವಿನಯದಿಂದ ಕೈಕಟ್ಟಿ ಕೇಳುವನು.

ಹಸು: ಇರಬಹುದು. ನನ್ನ ಅಭ್ಯಂತರವಿಲ್ಲ. ನಮ್ಮ ಒಡೆಯನಿಗೆ ನಮ್ಮನ್ನು ಬಿಟ್ಟರೆ ಬೇರೆ ಆಪ್ತರಿಲ್ಲ .... ಆದರೆ ನಮ್ಮ ಸ್ನೇಹವನ್ನು ಒಡೆಯುವ ಪ್ರಯತ್ನವನ್ನು ಎಂದಿಗೂ ಮಾಡಬೇಡ.

ನಾವಿಕ: ಇಲ್ಲ ಮಾತೇ.... ಎಂದಿಗೂ ಅಂತಹ ದುಃಸ್ಸಾಹಸಕ್ಕೆ ಕೈ ಹಾಕಲಾರೆ. ಈ ಮಹಾತಾಯಿ ಕಾವೇರಮ್ಮನ ಆಣೆ.... ನನಗೂ ನಿಮ್ಮೊಂದಿಗೆ ಇರುವ ಅವಕಾಶವನ್ನು ಬೇಡಿಕೊಳ್ಳುತ್ತೇನೆ.

ಹಸು: ಒಡೆಯಾ.... ರಾಜ.... ನಿಮ್ಮ ಅಭಿಪ್ರಾಯವೇನು ?

ಒಡೆಯಾ:ನಿನ್ನ ಅಭಿಪ್ರಾಯವೇ ನನ್ನ ಅಭಿಪ್ರಾಯ ಮಾತೆ.... ರಾಜಾ ನಿನಗೆ ಏನೂ ಅಭ್ಯಂತರವಿಲ್ಲವಷ್ಟೇ ?

ರಾಜಾ: ಇಲ್ಲ.... ನನಗೆ ಯಾವ ಅಭ್ಯಂತರವಿಲ್ಲ. ಹಿಂದೊಮ್ಮೆ ನೀನು ನಮಗೆ ಪುಣ್ಯಕೋಟಿಯ ಕತೆಯನ್ನು ಹೇಳಿದ್ದೆ. ಆ ಕತೆ ಈಗ ನೆನಪಾಗುತ್ತಿದೆ. **ಆ ಕಾಲದಲ್ಲಿ ನಮ್ಮ ಪೂರ್ವಿಕರು ಸತ್ಯಕ್ಕೆ ಸೋತಿದ್ದರು. ಈಗ ನಾವು ಸ್ನೇಹಕ್ಕೆ ಮಣಿದಿದ್ದೇವೆ. ನಮ್ಮೆಲ್ಲರ ಬಳಗಕ್ಕೆ ಶಾಂತಿ, ಸುಖ ಸಿಗಲಿ.... ಮಾನವರಿಗೆ ಜಯವಾಗಲಿ.... ಜಯವಾಗಲಿ....**

(ಘೋಷಣೆ ಕೇಳುವುದು. ಪರದೆ ನಿಧಾನವಾಗಿ ಬೀಳುವುದು)

*   *   *   *   *

ಸನ್ಮಾನ (ಸಣ್ಣ ನಾಟಕ)

ಪಾತ್ರಧಾರಿಗಳು : ಶಾಲಿನಿ, ನಾರಾಯಣರಾಯರು(ಗಂಡ ಹೆಂಡತಿ)
ಭಕ್ತ ಮಂಡಳಿಯ ಸದಸ್ಯೆಯರು ೪ ಜನ.
ಭಜನೆ ಮಾಡುವವರು. (೮-೧೦ ಜನ)

ದೃಶ್ಯ-೧.

ರಾತ್ರಿ ೮-೩೦ ಗಂಟೆಯ ಸಮಯ, ಗಂಡ ಹೆಂಡತಿಯರು ಅದೇ ತಾನೇ ಊಟ ಮುಗಿಸಿ, ಟಿ.ವಿ.ಯಲ್ಲಿನ ಯಾವುದೋ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದಾರೆ. ಇದ್ದಕ್ಕಿದ್ದಂತೆ ಬಾಗಿಲನ್ನು ಯಾರೋ ದಬದಬ ಬಡಿದ ಸದ್ದು ಕೇಳಿ, ಬೆಚ್ಚಿಬಿದ್ದು, ಹೆದರಿ ನಿಂತಿದ್ದಾರೆ.

ನಾರಾಯಣ: – ಯಾರು? ಯಾರು?

ಹೊರಗಿನಿಂದ: – ನಾವು.. ಬಾಗಿಲು ತೆಗೀರ್ರೀ.. (ಒರಟಾಗಿ 4–5 ಧ್ವನಿಗಳು ಒಟ್ಟಿಗೇ ಕೇಳಿ ಬರುತ್ತವೆ)

ನಾರಾಯಣ: ಯಾರೋ ಹೆಂಗಸರು ಅಂತ ಕಾಣುತ್ತೆ. ನೀನೇ ಬಾಗಿಲು ತೆಗೆದು ನೋಡು.

ಶಾಲಿನಿ:– ಇಲ್ಲ, ನನಗೆ ಹೆದರಿಕೆ ಡಕಾಯಿತರು ಹೆಂಗಸರ ಧ್ವನಿಯಲ್ಲಿ ಮಾತ ನಾಡುತ್ತಿದ್ದಾರೋ ಏನೋ ನಾನು ತೆಗೆಯಲ್ಲಪ್ಪ. (ಹೆದರಿಕೆಯ ಧ್ವನಿ ಯಲ್ಲಿ ಹೇಳುವಳು.)

ನಾರಾಯಣ: ಇಷ್ಟು ಮುಂಚೆ ಯಾವ ಡಕಾಯಿತರು ಬರುತ್ತಾರೆ? ನಾನು ನೋಡ್ತಿನಿ ತಡಿ. (ಅಷ್ಟರಲ್ಲಿ ಮತ್ತೆ ಬಾಗಿಲು ಬಡಿದ ಸದ್ದು. ನಾರಾಯಣ

ಬಾಗಿಲು ತೆಗೆಯುತ್ತಾನೆ. ಅವನನ್ನು ತಳ್ಳಿಕೊಂಡೇ ನಾಲ್ಕೈದು ಜನ ಹೆಂಗಸರು ಒಳಗೆ ನುಗ್ಗುತ್ತಾರೆ.)

ಯಾರ್ರೀ ನೀವು? ಹೀಗ್ಯಾಕೆ ನುಗ್ತಾ ಇದೀರಿ ಎಂದು ಕೇಳುವ ಪ್ರಶ್ನೆಗೆ ಉತ್ತರಿಸದೆ.

ಒಬ್ಬ ಸದಸ್ಯೆ: ಎಲ್ಲಿ ಮೇಡಂ? ಮೇಡಂ ಎಲ್ಲಿ? (ಹುಡುಕುವರು)

ನಾರಾಯಣ ಯಾವ ಮೇಡಂ? ಇಲ್ಲಿ ಯಾವ ಮೇಡಮ್ಮೂ ಇಲ್ಲ.

(೨) ಸದಸ್ಯೆ: – ನಮಗೆ ಗೊತ್ರೀ, ನಿಮಗೆ ಗಂಡಸರಿಗೆ ಹೊಟ್ಟೆಕಿಚ್ಚು. ಎಲ್ಲಿ ಕರೀರಿ ಅವರನ್ನು. ಮೇಡಂ.. ಮೇಡಂ..(ಕೂಗುವರು)

(ಮರೆಯಿಂದ ಶಾಲಿನಿ ಹೊರಬಂದಳು)

ಶಾಲಿನಿ: – ಯಾರು ನೀವೆಲ್ಲಾ? ಇಷ್ಟು ಹೊತ್ನಲ್ಲಿ ಏನು ಕೆಲಸ?

ಬೆಳಗಿನ ಹೊತ್ನಲ್ಲಿ ಬನ್ನಿ. ಇಷ್ಟು ಹೊತ್ನಲ್ಲಿ ನಾವು ಮನೆಯಲ್ಲಿ ಬಿಡಿಗಾಸನ್ನು ಸಹ ಇಟ್ಟುಕೊಂಡಿರೊಲ್ಲ.

೩ ಸದಸ್ಯೆ: ಅಯ್ಯೋ ಶಿವನೇ! ನಮಗೆ ಗೊತ್ರೀ.. ನಿಮ್ಮ ಬಿಡಿಗಾಸು ಯಾರಿಗೆ ಬೇಕಾಗಿದೆ? ನಾವು ಚಂದಾ ಕೇಳಕ್ಕೆ ಬಂದಿದೀವಿ ಅಂತ ಅಂದ್ಕೊಂಡಿದಾರೆ ಇವರು (ಉಳಿದವರ ಕಡೆ ನೋಡಿ ನಗುವಳು ಅವರೂ ನಗುವರು) ನಮಗೇನೂ ಬೇಡ. ನಮ್ಮ ಜತೆ ಹೊರಡಿ.

ಶಾಲಿನಿ: – ಎ.. ಎಲ್ಲಿಗೆ ಇಷ್ಟು ಹೊತ್ನಲ್ಲಿ? (ತೊದಲುವಳು ಹೆದರುತ್ತಾ)

೪ನೆ ಸದಸ್ಯೆ: ಎಲ್ಲಿಗೆ ಅಂತ ಅಪಶಕುನ ನುಡೀಬೇಡಿ.. ಸುಮ್ಮನೇ ನಡೀರಿ. ನಿಮಗೆ ಸನ್ಮಾನ ಮಾಡ್ತೀವಿ.

ಶಾಲಿನಿ: – ಸನ್ಮಾನ? ನನಗೆ? ನೀವು ಯಾರೋ ಪರಿಚಯವಿಲ್ಲ ನನಗೆ.

ಸದಸ್ಯೆ: – ನಿಮಗೆ ನಾವು ಪರಿಚಯವಿಲ್ಲದಿರಬಹುದು. ಆದರೆ ನಮಗೆ ನಿಮ್ಮ ಪರಿಚಯವಿದೆ. ಈ ರಸ್ತೆಯ ತಿರುವಿನಲ್ಲಿ ನಮ್ಮ ಸಂಘ ಇದೆ. ನಾವು ನಿಮ್ಮನ್ನು ನೋಡಿದೀವಿ. ನಿಮಗೆ ಸನ್ಮಾನ ಬೇಕೋ ಬೇಡವೋ? (ಆಸೆಯನ್ನು ಎಬ್ಬಿಸುವಳು)

ಶಾಲಿನಿ: – (ಪಿಸುದನಿಯಲ್ಲಿ ಗಂಡನೊಡನೆ) ಯಾರ್ರೀ ಇವರೆಲ್ಲ.. ಸನ್ಮಾನ ಅಂತೀದಾರಲ್ಲ.. ಏನ್ರೀ ಅದು.

ನಾರಾಯಣ: ಯಾರೋ ನಿನಗೆ ಅವಾರ್ಡ್ ಕೊಟ್ಟಿರಬಹುದು ನಮಗೇ ತಿಳೀದ ಹಾಗೆ... ತಮಾಷೆಯಾಗಿದೆ ಹೋಗಿ ನೋಡೋಣ.

ಶಾಲಿನಿ: – ಏನ್ರೀ ಅದು ಗುಸುಗುಸು ಪಿಸು ಪಿಸು.. ಬೇಗ ಹೊರಡಿ ಈಗಾಗಲೇ ಹೊತ್ತಾಗಿದೆ. ನಮಗ್ಯಾರಿಗೂ ಊಟ ಆಗಿಲ್ಲ. ಅಷ್ಟು ಹೊತ್ನಿಂದ ನಿಮ್ಮನ್ನ ಹುಡುಕೋದೇ ಆಗಿ ಹೋಯ್ತು. (ಆಕಳಿಸುವಳು)

ಶಾಲಿನಿ: – ಏನಿಲ್ಲ. ನಮ್ಮ ಯಜಮಾನರನ್ನು ಕೇಳಿ ಬಿಟ್ಟು ಬರ್ತೀನಿ.

ಸದಸ್ಯೆ: ಅವರನ್ನೇನ್ರೀ ಕೇಳುವುದು? ಸನ್ಮಾನ ಮಾಡುತ್ತಿರುವುದು ನಿಮಗೆ ಅವರಿಗಲ್ಲ. ಸುಮ್ಮನೆ ಬನ್ನಿ. (ಕೈ ಹಿಡಿದು ಎಳೆಯುವವಳು) ನೀವಾಗೇ ಬರದಿದ್ರೆ ಎತ್ಕೊಂಡು ಹೋಗ್ತೀವಿ ಅಷ್ಟೇ...

ಶಾಲಿನಿ: – ಏನ್ರೀ ಅದು ಗೂಂಡಾಗಿರಿ...? ಸನ್ಮಾನ ಅಂತ ಹೇಳ್ತಾ ಇದೀರಿ? ನನಗೇಕೆ ಸನ್ಮಾನ?

ಸದಸ್ಯೆ: ಅಯ್ಯೋ ಶಿವನೆ! ಯಾಕೆ ಹೀಗಾಡ್ತೀರಿ? ನೀವು ಸಾಹಿತಿ ಅಂತ ನಮಗೆ ತಿಳೀತು ಅದಕ್ಕೇ ಬಂದ್ವಿ...

ಶಾಲಿನಿ: – ನಿಮಗೆ ಯಾರೊ ಸುಳ್ಳು ಹೇಳಿದಾರೆ... ನಾನು ಸಾಹಿತಿಯಲ್ಲ.

ಸದಸ್ಯೆ: – ನಿಮ್ಮಂಥೋರಲ್ಲ ಹೇಳಿಕೊಳ್ಳೇದೇ ಹೀಗೆ...

ಶಾಲಿನಿ: – ಏನ್ರೀ ಮಾಡಲಿ? (ಗಂಡನನ್ನು ಕೇಳುವಳು)

ನಾರಾಯಣ: – ನಿನಗೂ ಸಮಾರಂಭ, ಸನ್ಮಾನ ಅಂತಂದರೆ ಇಷ್ಟ. ಅದೇನು ತಮಾಷೆ ಅಂತ ನೋಡಿ ಬಾ.. ನಾಳೆ ದಿನ ನಿನ್ನ ಹೆಸರು ಪೇಪರ್ನಲ್ಲಿ ಬಂದರೂ ಬರಬಹುದು.

ಶಾಲಿನಿ: – ಯಾವತ್ತು ಸನ್ಮಾನ?

ಸದಸ್ಯೆ: ಅದೇನು ಮೇಡಂ ಹೀಗೆ ಕೇಳ್ತೀರಿ. ಇವತ್ತೇ.. ಈಗಲೇ ಹೊರಡಿ ಹೊತ್ತಾಯ್ತು. ಎಲ್ಲಾ ನಿಮಗಾಗಿ ಕಾಯ್ತ ಕೂತಿದಾರೆ.

ಶಾಲಿನಿ: – ನನಗೆ ಗೊತ್ತಿರಲಿಲ್ಲ. . ಬೇರೆ ಸೀರೆ ಉಟ್ಟುಕೊಂಡು ಬರ್ತೀನಿ.

ಸದಸ್ಯೆ: – ಪರವಾಗಿಲ್ಲ ನಡಿಯವ್ವೋ, ಈ ಸೀರೇನೇ ಚೆನ್ನಾಗಿದೆ. ಅಲ್ಲದೇ ಅಲ್ಲಿ ನಿಮ್ಮ ಸೀರೆ ಹೆಂಗೈತ್ತೆ ಅಂತ ನೋಡೋಕೆ ಬಂದಿರಲ್ಲ. ಹೊತ್ತಾಯ್ತು ಬನ್ನಿ.

(ಶಾಲಿನಿ ಹಾಗೇ ಸೀರೆಯ ನೆರಿಗೆಗಳನ್ನು ಸರಿಪಡಿಸಿಕೊಂಡು, ಕೈಯಲ್ಲಿ ತಲೆಗೂದಲನ್ನು ಸರಿಪಡಿಸಿಕೊಳ್ಳುತ್ತಾ ಮನಸ್ಸಿಲ್ಲದ ಮನಸ್ಸಿನಲ್ಲಿ ಅವರೊಡನೆ ಹೊರಡುವಳು).

ದೃಶ್ಯ ೨

(ಒಂದು ಸಣ್ಣ ಸ್ಟೇಜು. ಒಂದು ಕಡೆ ಒಂದು ದೇವಿಯ ದೊಡ್ಡ ಪಟವನ್ನಿಟ್ಟು ಹೂವಿನ ಹಾರ ಇತ್ಯಾದಿಗಳಿಂದ ಅಲಂಕರಿಸಿದ್ದಾರೆ. ಎರಡು ದೀಪಗಳು ಮುಂದೆ ಉರಿಯುತ್ತಿವೆ. ಊದಿನ ಕಡ್ಡಿ ಹೊಗೆಯಾಡುತ್ತಿದೆ.)

8–10 ಜನ ಮಹಿಳೆಯರು, ಒಂದೇ ಬಣ್ಣದ ಸೀರೆಯನ್ನುಟ್ಟು ಕುಳಿತು, ಹರೇ ರಾಮ ಹರೇ ರಾಮ ಭಜನೆಯನ್ನು ಮಾಡುತ್ತಿದ್ದಾರೆ. ಇವರನ್ನು ನೋಡಿ ಭಜನೆಯನ್ನು ಮುಗಿಸುತ್ತಾರೆ.

ಸಂಘದ ಮುಖ್ಯಸ್ಥೆ 'ಬರಬೇಕು ಬರಬೇಕು ಸಾಹಿತಿಗಳು ಈ ಕಡೆ ಬರಬೇಕು ಈ ದಿನ ನಿಮ್ಮ ಸನ್ಮಾನ; ಈ ದಿನವೇ ನಮಗೆ ಸುದಿನ' ಎಂದು ರಾಗವಾಗಿ ಹೇಳಿ, ಒಂದಿಷ್ಟು ಹೂವಿನ ಪಕಳೆಗಳನ್ನು ಶಾಲಿನಿಯ ಮೇಲೆ ಎರಚುತ್ತಾ ಅಲ್ಲಿದ್ದ ಕುರ್ಚಿಯ ಮೇಲೆ ಕೂರಿಸುವರು.

ನಂತರ ಆಕೆಯಿಂದ ಭಾಷಣ)

ಸಭಿಕರೇ, ಸಾಹಿತಿಗಳೇ, ಭಜನಾ ಮಂಡಳಿಯ ಭಕ್ತರೇ.. ಈ ದಿನ ನಮ್ಮ ಸಂಘದ ಮೊದಲನೇ ವಾರ್ಷಿಕೋತ್ಸವ.. ಯಾರಾದರೂ ಒಬ್ಬ ಮಹಿಳೆಗೆ ಸನ್ಮಾನ ಮಾಡದಿದ್ದರೆ ನಮ್ಮ ಸಂಘಕ್ಕೆ ಏನು ಕಳೆ ಕಟ್ಟುತ್ತೆ ಅಂತ ನಿರ್ಧರಿಸಿ, ಹೆಸರಾಂತ ಸಿನಿಮಾ ತಾರೆ, ಬಿ.ವಿ.ಸರೋಜ ಅನ್ನೋರನ್ನ ಕರೆಸೋ ಏರ್ಪಾಡು ಮಾಡಿದ್ದೆವು. ಕಡೇ ಗಳಿಗೆಯಲ್ಲಿ ಆಯಮ್ಮ ಕೈಕೊಟ್ಟು ಬಿಡ್ತು.. ಹಂಗಾರೆ ಬೇರೆ ಯಾರೂ ಹೆಂಗಸ್ರೇ ಇಲ್ವಾ ಅಂತ ಯೋಚಿಸ್ತಿದ್ದಾಗ, ಈ ಮಹಾತಾಯೀನ ಕಂಡ್ವು, ನಮ್ಮ ರಸ್ತೇಲೀ ಇದಾರೆ. ನಮಗೆ ತಿಳೀನೇ ಇಲ್ವಲ್ಲ ಅಂತ ನಮ್ಮನ್ನು ನಾವೆ ಬಯ್ದುಕೊಂಡು, ದಿಢೀರನೇ ಅವರನ್ನ ಕರೆದುಕೊಂಡು ಬಂದೇ ಬಿಟ್ಟರು ನಮ್ಮ ಸದಸ್ಯೆಯರು.(ಎಲ್ಲಾ ಚಪ್ಪಾಳೆ ಹೊಡೆವರು) ಸರಸರನೆ, ಶಾಲಿನಿಯ ಕೊರಳಿಗೆ ಒಂದು ಹಳದಿ ಹೂವಿನ ಹಾರವನ್ನು ಹಾಕಿ, ಮಿಣ ಮಿಣ ಹೊಳೆಯುವ ಒಂದು ಕೆಂಪು ಶಾಲನ್ನು ಹೊದಿಸಿ, ಒಂದು ಹಣ್ಣು ತುಂಬಿದ ಬುಟ್ಟಿಯನ್ನು ಅವಳ ಕೈಗೆ ಇಡುವರು. ಫೋಟೋಗ್ರಾಫರ್ ನಾಲ್ಕಾರು ಭಂಗಿಗಳ ಫೋಟೋ ತೆಗೆಯುವನು. ಸನ್ಮಾನದಿಂದ ಉಬ್ಬಿ ಹೋದ ಶಾಲಿನಿ ಬೀಗುತ್ತಾ ಕುಳಿತಿರುವಳು. (ನೋಡುವವರಿಗೆ ಬಲಿಗೆ ಸಿದ್ಧ ಪಡಿಸಿದ ಕುರಿ

ಯಂತೆ) ಈ ಕಡೆ ಬನ್ನಿ ಮೇಡಂ.. ಎಲ್ಲರಿಗೂ ಪ್ರಸಾದ ಕೊಡಬೇಕು.. ಎನ್ನುತ್ತಾ ಎಬ್ಬಿಸುವಳು.

ಶಾಲಿನಿ: – ನಾನು ಭಾಷಣ ಮಾಡುವುದು ಬೇಡವಾ?

ಸದಸ್ಯೆ: ಅಯ್ಯೋ ಶಿವನೇ! ಈ ನಡು ರಾತ್ರೀಲಿ ನಿಮ್ಮ ಭಾಷಣಾನ ಯಾರು ಕೇಳ್ತಾರೆ? ಎಲ್ಲರೂ ಪ್ರಸಾದ ತಗೋಳೋಕೆ ಹೊರಟು ಹೋಗಿದಾರೆ. ನೀವೂ ಮನೆಗೆ ಹೋಗಿ ಮನಿಕ್ಕಳಿ. (ಶಾಲಿನಿ ಕತ್ತಲೆಯಲ್ಲೇ ಮನೆಯನ್ನು ಬಂದು ಸೇರುವಳು)

* * *

ದೃಶ್ಯ ೩

ನಾರಾಯಣ: – ಬಾಗಿಲು ತೆಗೆದು ಹೆಂಡತಿಯನ್ನು ನೋಡಿ ಏನೇ ಇಷ್ಟು ಬೇಗ ಮುಗಿದು ಹೋಯ್ತೇನೇ ಸಮಾರಂಭ? ಏನು ಕೊಟ್ಟರು?

ಶಾಲಿನಿ: – ನೀವು ಬರಬೇಕಾಗಿತ್ತು ರೀ.. ಈ ಶಾಲು ಹೊದೆಸಿದರು. ಹಾರ ಹಾಕಿದರು. ಹಣ್ಣು ಹಂಪಲು ಕೊಟ್ಟಿದಾರೆ. ಕವರಿನಲ್ಲಿ ಹಣ ಇಟ್ಟಿರಬಹುದು.

ನಾರಾಯಣ: ಅಂತೂ ಹೊಡೆದೆ ಛಾನ್ಸು... ಇಲ್ಲದಿದ್ರೆ ನಿನಗ್ಯಾರು ಸನ್ಮಾನ ಮಾಡುತ್ತಿದ್ರು?

ಶಾಲಿನಿ: – ನನಗೂ ಗೊತ್ತಿಲ್ಲ. ನಾನಂತೂ ಇರುವರೆಗೂ ನಾನು ಒಬ್ಬರಿಗೆ ಒಂದು ಲೆಟರ್ ಸಹ ಬರೆದು ಗೊತ್ತಿಲ್ಲ.

ನಾರಾಯಣ: – ಹೌದಲ್ವಾ.. ನಾನು ನೀನೂ ಇಬ್ಬರೂ ಇದೇ ಊರಿನವರು.. ಅದಕ್ಕೇ ನಿನಗೆ ಒಂದು ಪ್ರೇಮ ಪತ್ರ ಬರೆಯೋ ಅವಕಾಶ ಸಹ ಸಿಗಲಿಲ್ಲ. ಇನ್ನಾದರೂ ಏನಾದ್ರೂ ಬರಿ. ಇಲ್ಲದಿದ್ದರೆ ಈ ಸನ್ಮಾನ ಮಾಡಿಸ್ಕೊಂಡು ಏನು ಸಾರ್ಥಕ?

ಶಾಲಿನಿ: ಥೂ, ಹೋಗ್ರೀ.. ಈ ವಯಸ್ನಲ್ಲಿ ಪ್ರೇಮ ಪತ್ರ ಬರೆಯೋದಾ? ನನ್ನಿಂದಾಗೊಲ್ಲಪ್ಪಾ..

(ಅಷ್ಟರಲ್ಲಿ ಮತ್ತೆ ಬಾಗಿಲು ದಬ ದಬ ಬಡಿದ ಸದ್ದು)

ನಾರಾಯಣ: ಮತ್ತೆ ಯಾರೋ ಬಂದ್ರು.. ನಿನಗೆಲ್ಲೋ ಶುಕ್ರದೆಸೆ. ಅಂತ ಕಾಣುತ್ತೆ. ಇವರು ಯಾವ ಸಂಘದವರೋ?

ಶಾಲಿನಿ: – ನಾನು ಬೇಗ ಬೇರೆ ಸೀರೆ ಉಟ್ಕೊಂಡು ಬರ್ತೀನಿ. ಮತ್ತೆ ಇದೇ ಸೀರೇಲಿ ನಾನಂತೂ ಹೋಗುಲ್ಲಪ್ಪಾ (ಒಳಗೆ ಹೋಗುವಳು) ನಾರಾಯಣ ಬಾಗಿಲು ತೆಗೆಯುವನು ಅದೇ ಸದಸ್ಯೆಯರು..

ಎಲ್ಲೀ ಮೇಡಂ.. ಕರೀರಿ.. ಕರೀರಿ.. ಮೇಡಂನ.

ನಾರಾಯಣ: – ಬರ್ತಾರೆ.. ಡ್ರೆಸ್ ಮಾಡ್ಕೋತಿದಾರೆ.. ಮತ್ತೆಲ್ಲಿಗೆ ಬರಬೇಕು?

ಸದಸ್ಯೆ: ಅಲ್ಲಾ ಸಾರ್! ಅವರು ಹೀಗೆ ಮಾಡಬೌದಾ?

ನಾರಾಯಣ ಏನಾಯ್ತು! ಏನು ಮಾಡಿದ್ರು (ಗಾಭರಿಯಿಂದ)

ಸದಸ್ಯೆ: – ನಮಗ್ಯಾರಿಗೂ ಹೇಳಲೇ ಇಲ್ಲ. ಸ್ಟೇಜ್ ಮೇಲೆ ಕೂತಿದ್ದೋರು ಹಾಗೇ ನಾಪತ್ತೇ. ಹೀಗೆ ಮಾಡಬೌದಾ ಅವರು.. ಕರೀರಿ.. ಅವರನ್ನು (ಶಾಲಿನಿ ಬೇರೆ ಸೀರೆ ಉಟ್ಟು ಮುಗುಳ್ನಗುತ್ತಾ ಟೀವಿಯಿಂದ ಹೊರಗೆ ಬರುವಳು) ಅವರುಗಳನ್ನು ನೋಡಿ.. ಓ ನೀವೇನಾ? ನಾನು ಬೇರೆ ಯಾರೋ ಸಂಘದವರು ಅಂತ ಅಂದ್ಕೊಂಡೆ.

ಸದಸ್ಯೆ: ಅಲ್ಲಾ ಮೇಡಂ, ನೀವು ನಮ್ಮಾ ಏರಿಯಾದವರು, ನೀವು ಹೀಗೆ ಮಾಡ್ತೀರಿ ಅಂತ ನಾವು ಅಂದ್ಕೊಂಡಿರಲಿಲ್ಲ. ಹೇಳದೇ ಕೇಳದೇ ಹಂಗೇ ಎದ್ದು ಬಂದು ಬಿಡೋದಾ? ನಾವು ಊಟಕ್ಕೆ ಅಂತ ಹೋಗಿದ್ದಾಗ?

ಶಾಲಿನಿ: – ನನ್ನ ಊಟ ಆಗಿತ್ತು. ಇನ್ನೆಲ್ಲಿ ಬಲವಂತ ಮಾಡಿ ಎಬ್ಬಿಸಿ ಬಿಡ್ತೀರೋ ಅಂತ ಹೆದರಿ ಎದ್ದು ಬಂದೆ. ನಾನು ರಾತ್ರಿ ಹೊತ್ತು ಹೆಚ್ಚಿಗೆ ಊಟ ಮಾಡಲ್ಲ ಮೈ ಬರುತ್ತೆ ಅಂತ..

ಸದಸ್ಯೆ: – ಬಿಡಿ ಮೇಡಂ ನೀವೂ ಸರಿ.. ಊಟ ಬೇಡದಿದ್ರೆ ಪರವಾಗಿಲ್ಲ. ಹೇಳಿಬರಕ್ಕಾಗ್ತಿರಲಿಲ್ವಾ?

ಶಾಲಿನಿ: – ಯಾಕೆ? ನನಗೋಸ್ಕರ ಬಾದಾಮಿ ಹಾಲು ಕುಡಿಯೋಕೆ ಇಟ್ಟಿದ್ರಾ?

ಸದಸ್ಯೆ: ಅತೀ ಆಸೆಯಾಯ್ತು ಬಿಡಿ ನಿಮ್ಮದೂ.. ಬಿಡಿ ಹೋಗಲಿ.. ಫಂಕ್ಷನ್ ಮುಗೀತಲ್ಲ. ಎಲ್ಲಿ ಆ ಶಾಲು ? ಇತ್ಲಾಗೆ ತತ್ತನ್ನಿ. ಅದು ನಂದು.

ಗಂಡ ಹೆಂಡತಿ ಇಬ್ಬರೂ: ಆಂ..? ಇಬ್ಬರೂ ಬಾಯಿ ತೆರೆದು ಕಣ್ಣರಳಿಸಿ ಪ್ರಶ್ನಿಸುವರು.

ಸದಸ್ಯೆ: – ಹೂಂ.. ಮತ್ತೆ ಬಿಟ್ಟಿ ಬತ್ತದಾ ಶಾಲು? ಹೋದವಾರ ಜಾತ್ರೇಲಿ ಕೊಂಡದ್ದು. ಮಿಣಿ ಮಿಣಿ ಅಂತ ಚೆಂದಾಗಿದೆ. ಫೋಟೋ ಚೆನ್ನಾಗಿ ಬತ್ತದೆ

ಕೊಡು ಅಂದಿದ್ರು ಕೊಟ್ಟಿದ್ದೆ. ಹೊದಿಸಿದ್ದೇ ಸಾಕು ಅಂತ ನೀವು ಹೊದ್ಕೊಂಡು ಬಂದು ಬಿಡೋದಾ? ಒಂದ್ಮಾತು ಕೇಳಬೇಡವಾ?

ಶಾಲಿನಿ: – ನಮಗೇನ್ರಿ ಗೊತ್ತು ನೀವು ಇಂಥೋರು ಅಂತಾ? ಶಾಲು ಹೊದೆಸಿ ಈಗ ವಾಪಸ್ಸು ಕೇಳ್ತಿದೀರಲ್ಲ. ನಾಚಿಕೆಯಾಗೋಲ್ವಾ?

ಸದಸ್ಯೆ: ಅಯ್ಯೋ ಮೇಡಂ.. ನಿಮಗೆ ಅಷ್ಟು ತಿಳೀಲಿಲ್ವಾ? ಹಂಗಾದ್ರೆ ನೀವೆಂಥಾ ಸಾಹಿತಿ? ಈ ಶಾಲು, ಸನ್ಮಾನ, ಸಮಾರಂಭ ಎಲ್ಲಾ ಪ್ರಚಾರಕ್ಕೆ. ಪೇಪರ್ನಲ್ಲಿ ಫೋಟೋ ಬರುತ್ತೆ. ನಮಗೆ ಪ್ರಚಾರ ಸಿಗುತ್ತೆ ಅಷ್ಟೆ.. ಈ ಊರ್ನಾಗೆ ಎಂತೆಂಥೋರೆಲ್ಲಾ ಸಂಘ ನಡೆಸ್ತಾರೆ, ಸನ್ಮಾನ ಮಾಡ್ತಾರೆ, ನಾವು ಮಾಡಿದರೆ ತಪ್ಪಾ?

ಶಾಲಿನಿ: – ಚೆನ್ನಾಗಿದೆ ನಿಮ್ಮ ಕತೆ? ಯಾರಿಗೆ ಬೇಕಾಗಿದೆ ಈ ಥಳುಕಿನ ಶಾಲು, ಶಾಲು, ಅಂತ ಅರಚ್ಕೋ ಬೇಡ ತಗೊಂಡು ಹೋಗು..(ಎಸೆಯುವಳು)

* * *

ದೃಶ್ಯ ೪

ನಾರಾಯಣ: ಏಯ್ ಶಾಲೂ.. ಶಾಲೂ.. ಏನೇ ಅದು... ನೀನೇ ಶಾಲು ಶಾಲು ಅಂತ ಕನವರಿಸಿ ಕೊಳ್ತಾ ಇದೀಯ.. ಎಚ್ಚರ ಮಾಡ್ಕೊಳ್ಳೇ.. ಹೊದ್ದಿಕೇನ ಯಾಕೆ ಕಿತ್ತು ಎಸಿತಿದೀಯೇ..(ಎಚ್ಚರಗೊಳ್ಳುವಳು)

ಶಾಲಿನಿ: – ಅಬ್ಬಾ.. ಎಂಥಾ ಕೆಟ್ಟ ಕನಸು! ಸಧ್ಯ! ಎಚ್ಚರವಾಯ್ತಲ್ಲ.
(ಕಣ್ಣುಗಳನ್ನು ಉಜ್ಜುವಳು)
– ಪ್ರೇಕ್ಷಕರು ಚಪ್ಪಾಳೆ ತಟ್ಟುವರು.
ತೆರೆ ಬೀಳುವುದು.

* * * * *
* * * * *
* * *
* * *
*



ಕು. ಬಿ.ಎಸ್. ಶಿಲ್ಪಾ ಮೂರನೇ ತಲೆಮಾರಿನ ಲೇಖಕಿ, ಪದ್ಮಾ ಶ್ರೀಧರ್ ಅವರ ಮಗಳು.

ಶ್ರೀಮತಿ ಪದ್ಮಾ ಶ್ರೀಧರ್‌ರವರು ಕಾದಂಬರಿಯ ಕ್ಷೇತ್ರದಲ್ಲಿ ಪರಿಚಿತರು. ಕೌಟುಂಬಿಕ ಕಾದಂಬರಿಯ ಓದುಗರಿಗಾಗಿ, ಸಾಮಾಜಿಕ ಕಾದಂಬರಿಗಳನ್ನು ಬರೆದಿರುವರು. ವಾರಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಕಾದಂಬರಿಗಳು ಪ್ರಕಟಗೊಂಡಿವೆ. ಸುಮಾರು ೩೦ ಕಾದಂಬರಿಗಳನ್ನು ರಚಿಸಿರುವ ಪರಿಶ್ರಮ ಇವರದು.





ಶ್ರೀಮತಿಸೀತಾರಾಮಚಂದ್ರರವರು, ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಎಷ್ಟೋ ಜನರಿಗೆ ಚಿರಪರಿಚಿತರು. ಕರ್ನಾಟಕ ಸಂಗೀತದಲ್ಲಿ ವಿದ್ವತ್‌ಪರೀಕ್ಷೆಯನ್ನು ಪಾಸು ಮಾಡಿ, ಅನೇಕ ಜನ ವಿದುಷಿಯರಿಗೆ ಮಾರ್ಗದರ್ಶಕರಾಗಿರುವರು. ಸಂಗೀತ ಪಾಠದ ತರಗತಿಗಳನ್ನು ನಡೆಸುವರು ಹಾಗೂ, ರೇಡಿಯೋ ಕಾರ್ಯಕ್ರಮಗಳನ್ನು ಅದರಲ್ಲೂ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು ಸಂಯೋಜಿಸಿರುವರು.

ಶ್ರೀವೆಂಕಟಸುಬ್ಬಯ್ಯನವರು ರೇಡಿಯೋ ಪ್ರಹಸನಗಳಿಗಾಗಿ ಹಾಗೂ ಮಕ್ಕಳ ರೇಡಿಯೋ ಕಾರ್ಯಕ್ರಮಗಳಿಗೆಂದು ಬರೆದದ್ದು. ಸುಮಾರು ಅರವತ್ತು ಎಪ್ಪತ್ತರ ದಶಕದಲ್ಲಿ ಬರಹವನ್ನು ಹವ್ಯಾಸ ವನ್ನಾಗಿಟ್ಟುಕೊಂಡಿದ್ದ ವೆಂಕಟಸುಬ್ಬಯ್ಯನವರು ಕನ್ನಡ, ಹಿಂದಿ, ಸಂಸ್ಕೃತ ಹಾಗೂ ಇಂಗ್ಲಿಷ್‌ಭಾಷೆಗಳನ್ನು ಬಲ್ಲವರಾಗಿದ್ದರು.

